Mr. SPEAKER.—Was not the Hon'ble Member present all through ?

ಶ್ರೀ ಎಸ್. ಗೋಪಾಲ ಗೌಡ.—ಸರ್ಕಾರಕ್ಕೆ 3 ಗಂಟೆಯ ಕಾಲ ಬೇಕೇಂದು ಹೇಳಿದ್ದಾರೆ. ಸ್ವಲ್ಪ ಹೆಚ್ಚು ಅವಕಾಶ ಕೊಟ್ಟರೆ ನಿರ್ಣಯ ಒಳ್ಳೆಯ ರೀತಿಯಿಂದ ಚರ್ಚಿಸಿದಂತಾಗುವುದರಿಂದ ತಾವು, ಸಭಾನಾಯಕರು ಮತ್ತು ವಿರೋಧಪಕ್ಷದ ನಾಯಕರು ಟೀಗೆ ಎದ್ದಾಗ ಕುಳಿತು ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದು.

Mr. SPEAKER.—Nothing has been mentioned to me till now. I have repeatedly been asking them to let me know who all want to participate. What was he doing all these three days ?

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಮೊನ್ನೆ ದಿವಸ ಯಾರ್‍ಯಾರು ಮಾತನಾಡಬೇಕೆಂದು ಕೇಳಿದಾಗ ಬಹಳ ಜನ ಎದ್ದು ನಿಂತರು. ಆದುದರಿಂದ ಹೆಚ್ಚು ಕಾಲಾವಕಾಶ ಕೊಡಬೇಕಾದ್ದು ಸೂಕ್ತ.

Mr. SPEAKER.—When one member wanted more time, no member objected to it.

Sri S. SIVAPPA (Sravanabelgola).—As the Chief Minister wants three hours for the reply, it may be given. But to facilitate some of my Hon'ble Friends who want to participate, we may extend the time for this business by one day.

Mr. SPEAKER.—Is this the way to transact business ? We should have met earlier and come to some understanding. What prevented the Leader of the Opposition from meeting, the Leader of the House and coming to some understanding on this matter ? If there is no agreement I do as best as I can. I will allow the Debate till 2-45 P.M. and then call upon the Ministers to reply.

Sri V. M. DEO.—As all aspects of the matter should be covered......

Mr. SPEAKER.—What was the Hon'ble Member doing all along ? This is not the normal Government business and the member who has moved the motion has got the right of reply and I will give him half an hour which he wants.

Sri C. J. MUCKANNAPPA (Sira).—Let the Leader of the House and the Leader of the Opposition consider this request at tea break.

Mr. SPEAKER.—I am sorry the realisation has come at this late hour.

Motion of No-Confidence in the Council of Ministers

Debate Continued.

† ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಸ್ವಾಮಿ, ನಿನ್ನೆಯ ದಿವಸ ನಮ್ಮ ದೇಶದಲ್ಲಿ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡತಕ್ಕಂಥ ಆಪಾದನೆಗಳು ಮಂತ್ರಿಗಳ ಮೇಲೆ ಬಂದಾಗ ಅವರು ಹೇಗೆ ನಡೆಯಬೇಕೆನ್ನುವುದನ್ನು ಉದಾಹರಣೆಗಳ ಮೂಲಕ ಸಭೆಯ ಗಮನಕ್ಕೆ ತಂದೆ. ಇದೇ ರೀತಿ ಹೊರದೇಶಗಳಲ್ಲೂ ಕೂಡ, ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಎಲ್ಲೆಲ್ಲಿ ಜಾರಿಯಲ್ಲಿದೆಯೋ ಅಲ್ಲಿಯೂ ಕೂಡ ಈ ಭ್ರಷ್ಟಾಚಾರದ ಅಪಾದನೆಗಳಿಗೆ ಅಭಾವವೇನೂ ಇಲ್ಲ. ಅಮೇರಿಕಾ ದೇಶದಲ್ಲಾಗಲೀ, ಇಂಗ್ಲೆಂಡಿನಲ್ಲಾಗಲೀ ಭ್ರಷ್ಟಾಚಾರದ ಅಪಾದನೆಗಳು ಮಂತ್ರಿಗಳ ಮೇಲೆ ಬಂದಂಥ ನಿದರ್ಶನಗಳುಂಟು. ಮತ್ತು ಸರಕಾರಗಳ ಮೇಲೆ ಬಂದಂಥ ನಿದರ್ಶನಗಳೂ ಉಂಟು. ಇತ್ತೀಚೆಗೆ ಅಮೇರಿಕಾ ದೇಶದಲ್ಲಿ ಮೆಜಾರಿಟಿ ಪಕ್ಷದ ಪಾರ್ಲಿಮೆಂಟರಿ ಸೆಕ್ರೆಟರಿಯ ಮೇಲೆ ಭ್ರಷ್ಟಾಚಾರದ

(ಶ್ರೀ ಎಸ್. ಎಂ. ಕೃಷ್ಣ)

ಅಪಾದನೆಗಳು ಬಂದುವು. ತಕ್ಷಣ ಅಮೇರಿಕಾದ ರಾಜ್ಯಾಂಗದ ಚೌಕಟ್ಟಿನಲ್ಲಿರುವಂತೆ ಅದಕ್ಕೆ ಸಂಬಂಧಪಟ್ಟ ಸಮಿತಿಯು ಅವರ ಮೇಲಿನ ಅಪಾದನೆಯನ್ನು ಪರಿಶೀಲಿಸಲು ಪ್ರಾರಂಭಿಸಿತು. ಇನ್ನೂ ಕೂಡ ಪರಿಶೀಲನೆ ಕೂಲಂಕಷವಾಗಿ ನಡೆಯುತ್ತಲೇ ಇದೆ ಮತ್ತು ಇಂಗ್ಲೆಂಡ್ ದೇಶದಲ್ಲಿ ಇತ್ತೀಚೆಗೆ ಒಬ್ಬ ಜೂನಿಯರ್ ಮಿನಿಸ್ಟರು ತನ್ನ ಕಾರನ್ನು ಯಾರೋ ಒಬ್ಬ ಸ್ನೇಹಿತನಿಗೆ ಕೊಟ್ಟು ಅತ ಡ್ರೈವಿಂಗ್ ಲೈಸೆನ್ಸ್ ಇಲ್ಲದೆ ಕಾರು ನಡೆಸಿ ಅದು ಅಪಘಾತಕ್ಕೊಳಗಾಯಿತು. ಅದಕ್ಕಾಗಿ ಆ ಮಂತ್ರಿ ತನ್ನ ಕರ್ತವ್ಯಚ್ಯುತಿ ಮಾಡಿದ್ದಾನೆಂದು ಆರೋಪ ಬಂದ ಮೇಲೆ ಅತ ರಾಜೀನಾಮೆ ಕೊಟ್ಟ ಪ್ರಸಂಗ ಉಂಟು. ಈ ಮೇಲೆ ಹೇಳಿದಂಥ ಸಂದರ್ಭದಲ್ಲಿ ಯಾರೂ ಕೂಡ ಜೂನಿಯರ್ ಮಿನಿಸ್ಟರನ್ನು ಪ್ರಶ್ನೆ ಮಾಡಲಿಲ್ಲ. ಆದರೆ ಅತನೇ ತನಗೆ ಆತ್ಮ ಸಂಶಯವುಂಟಾಗಿ ರಾಜೀನಾಮೆ ಕೊಟ್ಟ ಪ್ರಸಂಗವುಂಟು. ಆ ರೀತಿ ನಮ್ಮ ರಾಜ್ಯದಲ್ಲೂ ಮಾಡಬೇಕೆಂದು ನಾನಾದರೂ ಬಯಸುತ್ತೇನೆ. ಇಲ್ಲಿ ನಮ್ಮ ಅಪಾದನೆಗಳು ಕೆಲವು ಜನ ಮಂತ್ರಿಗಳ ಪ್ರಾಮಾಣಿಕತೆಯನ್ನು ನೇರವಾಗಿ ಚುಚ್ಚಿ ಚುಚ್ಚಿ ಪ್ರಶ್ನಿಸುತ್ತವೆ. ಹಾಗೆ ಚುಚ್ಚುವ ಅಪಾದನೆ ಬಂದಾಗ ಹೆಗ್ಗಡೆಯವರು ಶರಾವತಿ ಪ್ರಶ್ನೆ ಸತ್ತ ಪ್ರಶ್ನೆ ಎಂದು ಹೇಳಿದರು. ಈ ದಿವಸ ಅವರು ಬೆಳಗಿನ ಪತ್ರಿಕೆ ಓದಿದ್ದಾರೆಂದು ನಾನು ಭಾವಿಸುತ್ತೇನೆ.

[MR. DEPUTY SPEAKER in the Chair]

ಪ್ರಧಾನ ಮಂತ್ರಿಗಳಾದ ಲಾಲ್ ಬಹದ್ದೂರ್ ಶಾಸ್ತ್ರಿಗಳು ನೆನ್ನೆಯ ದಿನ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತ ಮೈಸೂರಿನ ಬಗ್ಗೆ ಅಪಾದನೆಗಳ ಪರಿಶೀಲನೆಯನ್ನು ಕ್ಯಾಬಿನೆಟ್ ಸಬ್ ಕಮಿಟಿ ಇನ್ನೂ ಮಾಡಿಲ್ಲ, ಇನ್ನು ಮುಂದೆ ಮಾಡುತ್ತದೆ ಎಂದು ತಿಳಿಸಿದ್ದಾರೆ. ಯಾವ ಆಧಾರದ ಮೇಲೆ ಶ್ರೀ ಆರ್. ಎಸ್. ಹೆಗ್ಗಡೆಯವರು ಇದು ಸತ್ತು ಹೋದ ವಿಚಾರ ಎಂಬುದಾಗಿ ಹೇಳಿದರೊ ನನಗಂತೂ ಅರ್ಥವಾಗುವುದಿಲ್ಲ. ಕೆಲವು ಉತ್ತೇಜಿತ ಪತ್ರಿಕಾ ವರದಿಗಳು ಬರುತ್ತವೆಂಬುದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆ ವರದಿಗಳು ಬರುವುದಕ್ಕೆ ಕಾರಣವೂ ಸಹ ಉಂಟು. ಕೆಲವು ದೊಡ್ಡ ಪತ್ರಿಕೆಗಳು ಮೈಸೂರು ಮಂತ್ರಿ ಮಂಡಲದ ಮೇಲೆ ಮಾಡಿರುವ ಅಪಾದನೆಗಳು ಹುರುಳಿಲ್ಲದ್ದು ಎಂದು ಬರೆಯಲಿಕ್ಕೆ ಸಾಕು. ನಾವು ಈ ದಿವಸ ಪ್ರಾಮಾಣಿಕತೆಯ ಪ್ರಶ್ನೆಯನ್ನು ಎತ್ತಿರತಕ್ಕ ಕಾಲದಲ್ಲಿ 'ನಾವು ನ್ಯಾಯಾಂಗ ವಿಚಾರಣೆಗೆ ತಲೆಬಾಗುತ್ತೇವೆ ಎನ್ನತಕ್ಕ ಧೈರ್ಯ ನಿಮಗೆ ಏಕೆ ಬರಬಾರದು' ಎನ್ನುವ ಸಂಕಟ ನನಗೆ ಉಂಟಾಗುತ್ತಿದೆ. 'ರೂಲ್ ಆಫ್ ಲಾ' ಎಂದರೆ ಕಾನೂನಿಗೆ ಎಲ್ಲರೂ ಅಡಿಯಾಳುಗಳಾಗಬೇಕು. ಅದು ನಮಗೆಲ್ಲರಿಗೂ ದೊಡ್ಡದು. ತಪ್ಪಿತಸ್ಥನೇ ನ್ಯಾಯ ನಿರ್ವಹಣೆಗಾರನಾದರೆ ಈ ದೇಶಕ್ಕೆ ಕ್ಷೇಮವಿಲ್ಲ, ಈ ದೇಶಕ್ಕೆ ಭವಿಷ್ಯವಿಲ್ಲ ಎನ್ನುವ ಮಾತನ್ನು ಈ ದಿವಸ ನಾನು ಆಡಬೇಕಾಗಿದೆ. ಈ ದಿವಸ ಮೈಸೂರು ರಾಜ್ಯದಲ್ಲಿ ತಪ್ಪಿತಸ್ಥನೇ ನ್ಯಾಯವನ್ನು ಕೂಡ ಕೊಡತಕ್ಕ ಹಕ್ಕನ್ನು ಗಳಿಸಲಿಕ್ಕೆ ಇವತ್ತು ಯತ್ನಿಸುತ್ತಿದ್ದಾರೆ. ಯಾರು ಯಾರಿಗೆ ಈ ರೂಲ್ ಆಫ್ ಲಾ ತತ್ವದಲ್ಲಿ ನಂಬಿಕೆ ಇದೆಯೋ ಅವರೆಲ್ಲರೂ ಕೂಡ ಇದನ್ನು ಪ್ರತಿಭಟಿಸಬೇಕು ; ಈ ಮನೋಭಾವಕ್ಕೆ ವಿರುದ್ಧವಾಗಿ ಸಿಡಿದು ಎದ್ದು ನಿಲ್ಲಬೇಕು. ಆಗ ಮಾತ್ರ ನೀವು 'ರೂಲ್ ಆಫ್ ಲಾ' ತತ್ವಕ್ಕೆ ಮರ್ಯಾದೆ ಕೊಟ್ಟಂತಾಗುತ್ತದೆ, ಅದನ್ನು ನಿಮ್ಮ ನಮ್ಮಲ್ಲಿ ಅನ್ವಯಿಸಿದಂತಾಗುತ್ತದೆ.

ಶ್ರೀಮಾನ್ ಟಿ. ಮಾದಯ್ಯ ಗೌಡರು ಹೇಳಿದರು, ಹಳೆಯದನ್ನೇ ಹೇಳುತ್ತಿದ್ದಾರೆ ಶರಾವತಿಯ ವಿಚಾರದಲ್ಲಿ ಎಂದು. ವಯಸ್ಸಾದಂತೆಲ್ಲ ಹೊಸ ಹೊಸ ವಿಚಾರಗಳು ಬೇಕು ಎಂದು ಅನ್ನಿಸುತ್ತಿದೆ ಶ್ರೀಮಾನ್ ಮಾದಯ್ಯ ಗೌಡರಿಗೆ.

Sri C. J. MUCKANNAPPA.—He is in the evening of his life.

ಶ್ರೀ ಎಸ್. ಎಂ. ಕೃಷ್ಣ.—ಅವರಿಗೆ ಈ ದಿವಸ ಶರಾವತಿಯ ಬಗ್ಗೆ ಒಂದು ಹೊಸ ವಿಚಾರವನ್ನು ಪ್ರಸ್ತಾಪ ಮಾಡಿ ಹೇಳಲು ಬಯಸುತ್ತೇನೆ. ಕೆಲವು ತಿಂಗಳುಗಳ ಕೆಳಗೆ ಶರಾವತಿಯಲ್ಲಿ ಪವರ್ ಚಾನಲ್ ಒಡೆದು ಹೋದ ವಿಚಾರವನ್ನು ನಾನು ಅಲ್ಪ ಕಾಲಾವಧಿ ಪ್ರಶ್ನೆಯ ಮೂಲಕ ಪ್ರಸ್ತಾಪಿಸಿ ಸಂಬಂಧಪಟ್ಟ ಮಂತ್ರಿಗಳ ಗಮನವನ್ನು ಸೆಳೆದೆ. ಆಗ ಮಂತ್ರಿಗಳು ಉತ್ತರ ಕೊಡುತ್ತ ಅದು ಅಂಥ ದೊಡ್ಡ ಅಪಘಾತವೇನೂ ಅಲ್ಲ. ಶರಾವತಿಯ ತಳಹದಿಯ ಬಗ್ಗೆ ಸದಸ್ಯರು ಸಂಶಯ ಪಡಬೇಕಾಗಿಲ್ಲ ಎಂದು ಹೇಳಿದರು. ಅನಂತರ ಅವಕ್ಕೆ ಫಿಲ್ಟರ್ ಡ್ರೇನ್ಸ್ ಪ್ರೊವೈಡ್ ಮಾಡುವುದಕ್ಕೆ 1964ನೇ ಇಸವಿ ಡಿಸೆಂಬರು ತಿಂಗಳಿನಲ್ಲಿ ಟೆಂಡರುಗಳನ್ನು ಕರೆಯಲಾಯಿತು. ಅದರ ಅಂದಾಜು ಮೊಬಲಗು 12,48,000 ರೂಪಾಯಿಗಳು. ಫಿಲ್ಟರ್ ಡ್ರೇನುಗಳನ್ನು ಪ್ರೊವೈಡ್

ಮಾಡುವುದಕ್ಕೆ 24ನೇ ಡಿಸೆಂಬರ್ 64ರಂದು ಸುಮಾರು 7 ಟೆಂಡರುಗಳು ಸಂಬಂಧಪಟ್ಟ ಇಂಜನಿಯರಿಗೆ ಹೋದವು. ಅದೇನು ನಡೆಯಿತೋ, ಅದೆಂತು ಆಯಿತೋ, ಬಹುಶಃ ಆ ಶರಾವತಿಯ ಪ್ರದೇಶದ ಹಿನ್ನೆಲೆಯೋ ಏನೋ, ಆ ಟೆಂಡರುಗಳನ್ನು ಇಂಜನಿಯರು ಒಪ್ಪಲಿಲ್ಲ. 13ನೇ ಜನವರಿ 65ರಲ್ಲಿ ಮತ್ತೆ ಟೆಂಡರುಗಳನ್ನು ಕರೆಯಲಾಯಿತು. ಡಿಸೆಂಬರು 24ನೇ ತಾರೀಕು ಎಷ್ಟು ಟೆಂಡರುಗಳು ಬಂದಿತ್ತೋ ಅದರಲ್ಲಿ ಹೆಚ್ಚು ಮೊತ್ತದ ಟೆಂಡರ್ ಏನಿತ್ತು ಅದಕ್ಕಿಂತಲೂ ಕೂಡ ಹೆಚ್ಚಿನದು ಜನವರಿ 13ನೇ ತಾರೀಕು ಬಂದಂಥ ಟೆಂಡರುಗಳಲ್ಲಿ ಕಡಮೆ ಮೊತ್ತದ್ದು.

"The lowest tender of 13th January 65 was much higher than the highest tender of 14th December 64."

ಈಗ ಅದಕ್ಕೆ 25,51,000 ರೂಪಾಯಿ ಖರ್ಚು ಮಾಡಬೇಕು ಎಂದು ಅಂದಾಜು ಮಾಡಿದ್ದಾರೆ ಎನ್ನತಕ್ಕ ವರದಿ ನಮಗೆ ತಲಪಿದೆ ಒಂದು ತಿಂಗಳಲ್ಲಿ 12 ಲಕ್ಷ ರೂಪಾಯಿಗಳ ಅಂದಾಜು 17 ಲಕ್ಷವಾಗುವುದಕ್ಕೆ ಕಾರಣವೇನು. ಮತ್ತು ಮೊದಲನೆ ಸಾರಿ ಬಂದಂಥ ಟೆಂಡರುಗಳನ್ನು ಕಾರಣ ಕೊಡದೆ ತಿರಸ್ಕರಿಸಲು ಇದ್ದಂಥ ಪ್ರಮಾದವಾದ ಕಾರಣಗಳೇನು ಎನ್ನುವುದನ್ನು ಈ ಸಭೆ ಕೂಲಂಕಷವಾಗಿ ವಿವೇಚನೆ ಮಾಡಬೇಕು. ಹೊಸ ವಿಚಾರವನ್ನು ಶ್ರೀ ಟಿ. ಮಾದಯ್ಯ ಗೌಡರು ಕೇಳಿದರು. ಹಿಂದೆ ಶರಾವತಿ ಪ್ರಕರಣದ ಸಂಬಂಧದಲ್ಲಿ ಹಲವಾರು ಅಪಾದನೆಗಳನ್ನು ನಾವು ಮಾಡಿದ್ದೇವೆ. ಟೆಂಡರುಗಳಲ್ಲಿ ಕುಂಭಕೋಣ ನಡೆದಿದೆ, ರೇಟುಗಳನ್ನು ನಿಗದಿ ಮಾಡುವಾಗ ಕಾಂಗ್ರೆಸ್ ನಡೆದಿದೆ ಎಂದು ಅಪಾದನೆಗಳನ್ನು ಮಾಡಿದ್ದೇವೆ. ಆದುದರಿಂದ ಈ ದಿವಸ ಹೇಗೆ ಈ ಟೆಂಡರುಗಳನ್ನು ರಿಜೆಕ್ಟ್ ಮಾಡಿದರು, ಟೆಂಡರುಗಳನ್ನು ಮತ್ತೆ ಯಾವ ಅಧಾರದ ಮೇಲೆ ಕೊಟ್ಟರು ಎಂದು ಕೇಳುತ್ತೇನೆ. ಟೆನೆಂಟುಗಳಲ್ಲಿ ಹೊಸ ವರ್ಗ ಬರುತ್ತದೆ, 'ಕದೀಮ' ಟೆನೆಂಟ್ಸ್' ಎಂಬುದಾಗಿ. ಅದರ ಅರ್ಥ ಏನು ಎಂಬುದು ನನಗೆ ಗೊತ್ತಿಲ್ಲ. 'ಕದೀಂ ಕಂಟ್ರಾಕ್ಟರ್' ಎನ್ನುವುದರ ಅರ್ಥ ನನಗೆ ಗೊತ್ತು. ಶರಾವತಿಯಲ್ಲಿ ಹಿಂದೆ ಯಾರಮೇಲೆ ಹಲವಾರು ಅಪಾದನೆಗಳು ಬಂದಿದ್ದುವೋ ಅಂಥ ಒಬ್ಬ ಕದೀಂ ಕಂಟ್ರಾಕ್ಟರರಿಗೆ ಈ ಕೆಲಸವನ್ನು ವಹಿಸಿಕೊಡುವುದಕ್ಕೆ ಎಲ್ಲ ಮಸಲತ್ತುಗಳೂ ನಡೆದಿವೆ (ಹಿಯರ್, ಹಿಯರ್) ಇದು ಶರಾವತಿಯ ಪ್ರಶ್ನೆ.

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).–ಯಾವುದೋ ಹೊಸ ವಿಚಾರವನ್ನು ಹೇಳುತ್ತಿದ್ದಾರೆ. ಎರಡು ಸಲ ಟೆಂಡರ್ ಕರೆದು, ಟೆಂಡರುಗಳು ಬಂದ ಮೇಲೆ ಅದು ಅಕ್ಸೆಪ್ಟ್ ಆಗಿ ವರ್ಕ್ ಆರ್ಡರ್ ಕೊಟ್ಟಿದ್ದಾರೆಯೋ ಇಲ್ಲವೋ ನನಗೆ ಇನ್ನೂ ಗೊತ್ತಿಲ್ಲ. ಮಾನ್ಯ ಸದಸ್ಯರಿಗೆ ವಿಷಯ ಗೊತ್ತಿದ್ದರೆ ವಿವರಗಳನ್ನು ಹೇಳಬೇಕು.

Sri C. J. MUCKANNAPPA.—My friend Sri T. Madaiah Gowda wanted new items. So he is putting in a new item. The Minister was not present then. Whose fault is it ? Is it the fault of my friend Sri Krishna or his fault ?

Sri VEERENDRA PATIL.—I did not try to find fault with anobody I wanted the hon'ble member to enlighten me on this point.

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು ಸಿಟಿ—ಉತ್ತರ).—ಸಾಮಾನ್ಯ ಸದಸ್ಯರಿಗೆ ಇರತಕ್ಕ ಆಸಕ್ತಿ ಸರ್ಕಾರಕ್ಕೆ ಇಲ್ಲವೆಂದು ಇದರ ಅರ್ಥವೇ ಸ್ವಾಮಿ ?

ಶ್ರೀ ಎಸ್. ಎಂ. ಕೃಷ್ಣ.—ಶರಾವತಿಯಲ್ಲಿ ಇಂಜನಿಯರುಗಳು ಮೈಸೂರು ರಾಜ್ಯಕ್ಕೆ 1965ನೇ ಇಸವಿಗೆ ಕೊಟ್ಟ ಕೊಡುಗೆ ಇದಾಗಿದೆ ಎಂದು ನಾವು ಭಾವಿಸುವುದಕ್ಕೆ ತಯಾರಾಗಿಲ್ಲ.

Sri VEERENDRA PATIL. I want definite information from you whether tenders have been accepted and work order issued.

ಶ್ರೀ ಎಸ್. ಎಂ. ಕೃಷ್ಣ.—ನಾನು ಮಾನ್ಯ ಮಂತ್ರಿಗಳ ಕಷ್ಟವನ್ನು ಅರ್ಥ ಮಾಡಿಕೊಳ್ಳಬಲ್ಲೆ. ಹತ್ತಾರು ಸಾವಿರ ರೂಪಾಯಿಗಳನ್ನು ಖರ್ಚು ಮಾಡುವಾಗ ಅದೆಲ್ಲವೂ ಅವರ ಗಮನಕ್ಕೆ ಬಾರದೆ ಇರಲಿಕ್ಕೆ ಸಾಕು. ನಾನು ಇದನ್ನು ಪ್ರಶ್ನೆ ಮಾಡುತ್ತಿಲ್ಲ. ನಿಮ್ಮ ರಾಗ, ನಿಮ್ಮ ತಾಳ, ಇವುಗಳು ನಿನ್ನೆ ಮೊನ್ನೆಯವರೆಗೂ ಏನಾಗಿತ್ತು ಎಂದರೆ ಎಲ್ಲ ವಿಚಾರಗಳೂ ಹಳೆಯ ವಿಚಾರಗಳು. ಹೊಸ ವಿಚಾರ ಒಂದೂ ಇಲ್ಲ ಎಂದು. ಆದುದರಿಂದ ಹೊಸ ವಿಚಾರಕ್ಕೆ ಬಂದಿದ್ದೇವೆ. ಈ ವಿಚಾರ ವರದಿಯಾಗಿದೆ. ಅದರ ಸತ್ಯಾಸತ್ಯತೆಯನ್ನು ಕಂಡು ಹಿಡಿದು ಸಮಗ್ರ ಅಂಶಗಳನ್ನೂ ಈ ಸಭೆಯ ಮುಂದೆ ಇಡಬೇಕೆಂದು ನಾನು ಈ ಸಮಯದಲ್ಲಿ ತಮ್ಮನ್ನು ಕೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಹೊಸ ವಿಚಾರವನ್ನು ಹೇಳುವಾಗ ಸಂಪೂರ್ಣವಾಗಿ ಹೇಳಬೇಕು. ಅರ್ಧಮರ್ಧ ಹೇಳಿದರೆ ಹೇಗೆ? ಎರಡನೇ ಟೆಂಡರುಗಳನ್ನು ಕರೆದು ಅವು ಬಂದ ಮೇಲೆ ಅವುಗಳನ್ನು ಒಪ್ಪಿಕೊಂಡು ವರ್ಕ್ ಆರ್ಡರ್ ಕೊಟ್ಟಿದ್ದಾರೆಯೋ ಹೇಗೆ ಎನ್ನುವುದನ್ನು ತಿಳಿಸಬೇಕು.

Sri C. J. MUCKANNAPPA.—My friend Sri Krishna was definite when he said that the first tender was called in the month of December 1964 and again fresh tenders were called in the month of January on 13th. He was very clear.

2.30 P.M.

ಶ್ರೀ ಎಸ್. ಎಂ. ಕೃಷ್ಣ.—ನನಗೆ ಕೊಟ್ಟಿರತಕ್ಕ ಕಾಲದಲ್ಲಿ ಮೈಸೂರು ರಾಜ್ಯದ ಆಡಳಿತದ ಬಗ್ಗೆ ಪ್ರಸ್ತಾಪವಾಡಲು ಬಯಸುತ್ತೇನೆ. ಶ್ರೀಮಾನ್ ವೀರೇಂದ್ರ ಪಾಟೀಲ್ ಅವರು ಎರಡನೆಯ ಸಾರಿ ಟೆಂಡರ್ ಕರೆದು ವರ್ಕ್ ಆರ್ಡರ್ ಅವರಿಗೆ ಕೊಟ್ಟಿದೆಯೋ ಇಲ್ಲವೋ ಎಂಬುದನ್ನು ಪರಿಶೀಲನೆ ಮಾಡಿ ಹೇಳುತ್ತೇನೆಂದು ಹೇಳಿದರು- ಆದರೆ ನನಗೆ ಬಂದಿರುವ ವರದಿ ಪ್ರಕಾರ ಎರಡನೆಯ ಸಾರಿ ಟೆಂಡರ್ ಕರೆದುದು ಆಗಿದೆ. ಖದೀಮ ಕಂಟ್ರಾಕ್ಟರಿಗೆ ಕೊಡುತಕ್ಕ ಮಸಲತ್ ನಡದಿದೆ ಎಂಬುದಾಗಿ ನಾನು ಹೇಳುತ್ತೇನೆ.

ಎರಡನೆಯದಾಗಿ ಈ ಮೈಸೂರು ರಾಜ್ಯದ ಆಡಳಿತ ಹೇಗೆ ನಡೆಯುತ್ತಿದೆಂಬುದನ್ನು ಕೂಡ ನಾನು ವಿವೇಚಿಸಬೇಕಾಗಿದೆ. ಇವತ್ತು ಮೈಸೂರಿನಲ್ಲಿ ಆಳತಕ್ಕ ಒಂದು ಆಡಳಿತ ಇದೆಯೇ ಎನ್ನುವ ಪ್ರಶ್ನೆ ಸಾಕಾದಷ್ಟು ಜನರಲ್ಲಿ ಉದ್ಭವವಾಗಿದೆ. ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರನ್ನು ಎಲ್ಲರೂ ಆಹಾರ ಮಂತ್ರಿಗಳೆಂದು ಕರೆಯುತ್ತಿದ್ದರೆ ನಾವಾದರೋ ಅವರನ್ನು ಹಾಹಾಕಾರ ಮಂತ್ರಿಗಳೆಂದು ಕರೆಯಬೇಕಾಗಿದೆ. ಈ ದೇಶದಲ್ಲಿ ಆಹಾರದ ಅಭಾವ ಒಂದು ಕಡೆ, ಮತ್ತೆ ರಿಟ್‌ಗಳ ಪ್ರಶ್ನೆ ಬಂದಾಗ ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರ ಹೆಸರು ಕೇಳಿಬರುತ್ತಿರುತ್ತದೆ. ರಿಟ್‌ಗಳಂತೂ ಲೆಕ್ಕವಿಲ್ಲದಷ್ಟು ಹೋಗುತ್ತಿವೆ. ಆದ್ದರಿಂದ ಮೈಸೂರು ಹೈಕೋರ್ಟಿನಲ್ಲಿ ಶ್ರೇಷ್ಠ ನ್ಯಾಯಾಸ್ಥಾನದ ಜಡ್ಜ್‌ಮೆಂಟಿನಲ್ಲಿ ಅವರು ಹೇಳಿರತಕ್ಕ ಎರಡು ವಾಕ್ಯಗಳನ್ನು ಉದ್ಧರಿಸುವುದಕೆ ಸಭಾಪತಿಯವರ ಅಪ್ಪಣೆ ಪಡೆಯುತ್ತೇನೆ. ರೆವೆನ್ಯೂ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳಿರುವುದು ಈ ರೀತಿ ಇದೆ.

"The work of this Court has been enormously increased by the writ petitions filed by the disappointed Government servents In a large number of cases, they come to this Court with a feeling of despair looking at this Court as their only hope to get Justice. In public interest, this state of affairs should be remedied at the earliest. We have said all these things not with a view to tilt at the Government, but with a view to pointedly bring to the notice of the Government a dangerous situation, the evil thereof may not have been sufficiently noticed by the Government."

[MR. SPEAKER in the Chair]

ಇನ್ನು ವಿದ್ಯಾಭ್ಯಾಸದ ಇಲಾಖೆಗೆ ಸಂಬಂಧಪಟ್ಟಹಾಗೆ ಇಂಟರ್ ಸ್ಟೇಟ್ ಸೀನಿಯಾರಿಟಿ ವಿಚಾರದಲ್ಲಿ ಹೈಕೋರ್ಟಿನವರು ಕೊಟ್ಟಂಥ ಅಭಿಪ್ರಾಯ ಈ ರೀತಿ ಇದೆ.

"The petitioners have made very serious allegations against the Respondents (The Government). We have reason to think that the Respondents are not interested in making a provisional seniority list expeditiously. As they are not prepared to do it, evidently the Respondents are dragging on the proceedings with some ulterior motive."

ಮತ್ತು ಕೊಆಪರೇಷನ್ ಇಲಾಖೆಗೆ ಸಂಬಂಧಪಟ್ಟಹಾಗೆ ಈ ರೀತಿ ಹೇಳಿದ್ದಾರೆ.

"It is surprising that officers without even elementary knowledge of law should hold the position of Assistant Registrars of Co-operative Societies, who have to exercise quasi-Judicial functions.

ಹೀಗೆ ನಮ್ಮ ಶ್ರೇಷ್ಠ ನ್ಯಾಯಾಸ್ಥಾನ ಸರ್ಕಾರದ ಪ್ರತಿಯೊಂದು ಇಲಾಖೆಯ ಬಗ್ಗೆ ಈ ರೀತಿಯಾದಂಥ ಸ್ಟ್ರಿಕ್ಚರ್ಸ್ ಪಾಸ್ ಮಾಡಿದ್ದಾರೆ. ಒಂದು ಕಡೆ ನಾನ್‌—ಗೆಜೆಟೆಟ್ ನೌಕರರಲ್ಲಿ ಅಸಮಾಧಾನ, ಮತ್ತೊಂದು ಕಡೆ ಗೆಜಿಟಡ್ ನೌಕರರಲ್ಲಿ ಅಸಮಾಧಾನ—ಹೀಗೆ ಮೈಸೂರು ಆಡಳಿತದಲ್ಲಿ ಈಗ ಉಳಿದಿರತಕ್ಕದ್ದು ಕೇವಲ ಅಸ್ತಿಪಂಜರ, ಜೀವಕಳೆ ಇಲ್ಲ, ರಕ್ತ ಇಲ್ಲ, ಮಾಂಸವಿಲ್ಲ, ಏನೂ ಉಳಿದಿಲ್ಲ, ಸ್ಥಗಿತವಾಗಿದೆ. ಆದ್ದರಿಂದ ನಮಗೂ ಸಹ ಈ ಸರ್ಕಾರದ ಮೇಲೆ ವಿಶ್ವಾಸವಿಲ್ಲವೇ ಇಲ್ಲ. ಆದ್ದರಿಂದ ಇವರ ಮೇಲೆ ಮಾಡಿರತಕ್ಕ ಆಪಾದನೆಗಳ ಬಗ್ಗೆ ಇವರು ನ್ಯಾಯಾಂಗ ವಿಚಾರಣೆಗೆ ತಲೆಬಾಗಬೇಕಾಗಿದೆ. ಇಲ್ಲದೇ ಹೋದರೆ ಈ ದೇಶದಲ್ಲಿ ಪ್ರಾಮಾಣಿಕರಾಗಿ ಮತ್ತು ಮರ್ಯಾದಸ್ಥರಾಗಿ ರಾಜ್ಯಭಾರ ಮಾಡತಕ್ಕ ನೈತಿಕ ಹಕ್ಕನ್ನು ಅವರು ಕಳೆದುಕೊಂಡಿದ್ದಾರೆಂಬುದಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Sri Samaji wanted to explain something. I do know if the matters is sub-judice. Yesterday both the Law Minister and the Home Minister did not give the impression that the matter any sub-judice. The Home Minister was explaining every matter. I said that I would allow Sri Samaji to explain.

Sri M. V. KRISHNAPPA.—The Minister is not here.

Mr. SPEAKER.—It Does not matter.

[*English version of Marathi Speech.*]

Sri N. O. SAMAJI (Belgaum II).—Mr. Speaker, Sir, I respectfully desire to make my stand clear. Yesterday while replying to the allegations of the Hon. Member Sri V. S. Patil about the double murder in my taluka, the Hon. Minister for Home Sri R. M. Patil, stated that I and my colleagues had interfered in the Police investigation and tried to get three more persons included as accused. I had protested against this and prayed that I may be given an opportunity to make a statement. As such I desire to make it emphatically clear that the statement of the Hon. Minister is untrue. The double murder took place in Kondoskopa, village situated two miles away from my residence. I emphatically state that I did not approach any police officer or authority either on behalf of the complainant or accused. Hence the statement of the Hon. Minister that I tried to get more people involved as accused is entirely incorret. Further I request the Hon. Minister to personally come to the area and verify in my presence the persons whom I contacted and convince himself failing which I will take it that the Hon. Minister's statement is deliberately made with an evil motive. Hence I request the Chair to expunge that reference from the speech of the Hon. Minister for Home.

†ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಈ ಅವಿಶ್ವಾಸ ನಿರ್ಣಯ ಈ ಸಭೆಯಲ್ಲಿ ಬಂದಿರುವುದು ಇದು ಮೂರನೆಯಾವರ್ತಿ, ಇದುವರೆಗೂ ನಾವು ಆ ಕಡೆಯಿಂದ ಕೇಳಿದುದೇನೆಂದರೆ, ಪದೇ ಪದೇ ಇವರು ಇದನ್ನೇ ತೆಗೆದುಕೊಂಡು ಬರುತ್ತಿದ್ದಾರೆ, ಹೇಳಿದ್ದೇ ಹೇಳುತ್ತಿದ್ದಾರೆ, ಇದು

(ಶ್ರೀ ವಿ. ಎಂ. ದೇವ್)

ಇನ್ನೆಂದಿಗೂ ಬರಬಾರದಾಗಿತ್ತು ಎನ್ನುವ ಒಂದು ವಾದವನ್ನು ಮಾನ್ಯ ಗೃಹಮಂತ್ರಿಗಳು ಹೇಳಿದರು. ಈ ವಿಚಾರದಲ್ಲಿ ನಾನು ಈ ಸಭೆಯ ಮಾನ್ಯ ಸದಸ್ಯರ ಗಮನವನ್ನು ಒಂದು ವಿಷಯಕ್ಕೆ ಸೆಳೆಯ ಬೇಕೆಂದಿದ್ದೇನೆ. ಮಂತ್ರಿಮಂಡಲ ಒಂದು ಅಸ್ತಿತ್ವಕ್ಕೆ ಬರಬೇಕಾದರೆ ಪ್ರತಿಯೊಂದಕ್ಕೂ ಒಂದು ಉದ್ದೇಶವಿದೆ. ಆ ಉದ್ದೇಶ ಜನರ ಕಲ್ಯಾಣ ಸಾಧನೆಗಾಗಿಯೇ ಇರಬೇಕು. ಅದನ್ನು ಸಾಧಿಸು ವುದಕ್ಕೆ ಇವರಿಗೆ ಆಗುವುದಿಲ್ಲ ಎಂಬುದು ವಿರೋಧ ಪಕ್ಷದವರಿಗೆ ಗೊತ್ತಾದಮೇಲೆಯೇ ಇಂತಹ ಅವಿಶ್ವಾಸ ನಿರ್ಣಯಗಳು ಪದೇ ಪದೇ ಬರುತ್ತಿರುತ್ತವೆ. ಒಂದುವೇಳೆ ಆ ರೀತಿ ಬಾರದೇ ಇದ್ದರೆ ನಮ್ಮ ಕರ್ತವ್ಯಕ್ಕೆ ಚ್ಯುತಿಯಾಗುತ್ತದೆಂದು ನಾನು ನಂಬುತ್ತೇನೆ. ನಾವು ಸ್ವಾತಂತ್ರ್ಯಕ್ಕೆ ಹೋರಾಟ ಮಾಡುತ್ತಿದ್ದಾಗ ಬ್ರಿಟಿಷರು ಒಂದು ಮಾತನ್ನು ಹೇಳುತ್ತಿದ್ದರು. ನೀವು ಪದೇ ಪದೇ ಹೇಳಿದ್ದನ್ನೇ ಹೇಳುತ್ತಿದ್ದೀರಿ ಎಂದು. ನಿಮಗೆ ಸ್ವಾತಂತ್ರ್ಯ ಏಕೆ, ಅಂದಾಗ ಅದೇನು ಹೊಸದಲ್ಲ ವೆಂಬುದಾಗಿ ಜವಹರ್‌ಲಾಲ್ ನೆಹರೂ ಅವರು ಬಹಳ ಚೆನ್ನಾಗಿ ಉತ್ತರ ಕೊಟ್ಟರು. ಹಿಂದೆ ಒಂದು ಸಾರಿ ಜನರಲ್ ವೇವಲ್ ಅವರು ಹೇಳಿದ ಒಂದು ವಾದವನ್ನು ಪ್ರಪಂಚವೇ ಒಪ್ಪಿತು. ಆ ವಾದ they are really bone headed. ಅದರಲ್ಲಿ ಪದೇ ಪದೇ ಅದೇ ಮಾತನ್ನು ಹೇಳುತ್ತಿ ದ್ದೇವೆ ಎಂದು ಹೇಳಿದರೆ ಪದೇ ಪದೇ ಭ್ರಷ್ಟಾಚಾರವಿರುವಾಗ ಅವಿಶ್ವಾಸ ನಿರ್ಣಯ ಬಂದರೆ ಆಗ ಇವರ ತತ್ವ ಏನಿದೆಯೆಂಬುದು ಗೊತ್ತಾಗುತ್ತದೆ. ನಾವು ಆ ಸಂದರ್ಭದಲ್ಲಿ ಮಾತನಾಡಿದಾಗ ಆಡಳಿತ ಪಕ್ಷದವರೆಲ್ಲರೂ ಸರ್ಕಾರ ಜನರ ಕಲ್ಯಾಣಸಾಧನೆಮಾಡುತ್ತಿದೆ ಎಂಬುದಾಗಿ ಸಲಹೆ ಬರು ತ್ತದೆ. ಮುಖ್ಯವಾಗಿ ಅವರಿಗೆ ಮಾತ್ರ ಒಳ್ಳೆಯದಾಗುತ್ತದೆನ್ನುವ ದೃಷ್ಟಿಯಿಂದ ಈ ಸರ್ಕಾರ ಅಸ್ತಿತ್ವಕ್ಕೆ ಬಂದಿದೆಯೆಂದು ನಾನು ಹೇಳುತ್ತೇನೆ.

ಈ ದೃಷ್ಟಿಯಿಂದ ನಾನು ನಾಲ್ಕು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಈಗ ಉತ್ಪಾದನೆಯ ವಿಷಯವನ್ನೇ ತೆಗೆದುಕೊಳ್ಳಿ, ಪಂಚವಾರ್ಷಿಕ ಯೋಜನೆಯಲ್ಲಿ ಒಂದು ವಿಷಯ ಇದೆ. ಅದು ಏನೆಂದರೆ "The target that we have fixed is less than the capacity and the need of the nation" ಎಂದರೆ ನಾವು ಎಷ್ಟು ಬೆಳೆಯನ್ನು ಬೆಳೆಯುತ್ತೇವೆಯೋ ಅದಕ್ಕಿಂತ ನಮ್ಮ ಗುರಿ ಕಡಿಮೆ ಇದೆ ಎಂದು ಹೇಳಿದ್ದಾರೆ. ಆ ಮೇಲೆ ಯೋಜನೆಯಲ್ಲಿ ಇನ್ನೊಂದು ಅಂಶ ಇದೆ. ಅದು ಏನೆಂದರೆ ಸ್ವಲ್ಪಹೆಚ್ಚು ಕಡಿಮೆ ನಾವು 2 ಪರ್ಸೆಂಟ್ ಪ್ರಗತಿಯನ್ನು ಸಾಧಿಸಿದೇವೆ ಎಂದು. ನಾವು ಅಸೆಂಬ್ಲಿಯಲ್ಲಿ ಹೇಳಿದ್ದನ್ನು ಕೇಳಿದ್ದೇವೆ ಪಂಚವಾರ್ಷಿಕ ಯೋಜನೆಯಲ್ಲಿ ಈ ಬಾಬಿಗೆ ಎಷ್ಟು ಹಣವನ್ನು ಖರ್ಚುಮಾಡಬೇಕೆಂದು ಮುಡುಪಾಗಿಟ್ಟಿತ್ತೋ ಅಷ್ಟು ಹಣವನ್ನೂ ಖರ್ಚು ಮಾಡಿದ್ದೇವೆಂದು. ಒಟ್ಟಿನಲ್ಲಿ ಏನಾಯಿತು ಎಂದರೆ ಹಣ ಖರ್ಚಾಗಿದೆ, ಆದರೆ ಕೆಲಸ ಆಗಲಿಲ್ಲ. ಇದರಿಂದ ಇಲ್ಲಿ ಇಷ್ಟನ್ನು ನೋಡಿದರೆ ಸಾಕು, ರಾಜ್ಯದಲ್ಲಿ ಅಸತ್ಯ ಮತ್ತು ಭ್ರಷ್ಟಾಚಾರ ಆಗಿದೆ ಎನ್ನುವುದು. ಇಷ್ಟೆಲ್ಲಾ ಆದರೂ ಕೂಡ ಭ್ರಷ್ಟಾಚಾರ ಏತಕ್ಕೆ ಆಯಿತು ಎಂದರೆ, ಭ್ರಷ್ಟಾಚಾರ ಎಲ್ಲಿಂದ ಬರಬೇಕಾದರೂ ಕೂಡ ಇದಕ್ಕೆ ಮುಖ್ಯ ಕಾರಣವೇನೆಂದರೆ ಫ್ಯಾಕ್ಟರಿಯಾಗಲೀ ಅಥವಾ ಯಾವುದೇ ಆಗಲೀ ಉತ್ಪಾದನೆ ಮಾಡುವಾಗ "If production is unrelated to requirements .. ..Father of nation. ಹಣ ಖರ್ಚಾದ್ದಕ್ಕೂ ಉತ್ಪಾದನೆಗೂ ಸಂಬಂಧವಿಲ್ಲದೆ ಇದ್ದರೆ, ನಷ್ಟವುಂಟಾಗುವಂತಹ ಸಂದರ್ಭ ಬಂದರೆ ಸಂಬಂಧಪಟ್ಟ ಅಧಿಕಾರವರ್ಗದವರಿಗೆ ಶಿಕ್ಷೆಯನ್ನು ವಿಧಿಸುತ್ತಾರೆ.

ಇನ್ನು ಮೂರನೆಯದಾಗಿ ಹಣ, ಪ್ರಾಪರ್ಟಿ ಎಲ್ಲಾ ಇರುವುದು ಒಳ್ಳೆಯದು. ಅದು ಇರುವುದು ಒಂದು ಉದ್ದೇಶಕ್ಕಾಗಿ. ಈ ದೃಷ್ಟಿಯಿಂದ ನಾನು ಹೇಳುವುದು ಇಷ್ಟೇ. ಸಮಾಜ ವಾದ ಒಂದು ತತ್ವವನ್ನು ಅವಲಂಬಿಸಿರುತ್ತದೆ. ಅದು ಬೇಕು ಎಂದು ಹೇಳುವುದು ಯಾವುದೋ ಒಂದು ತತ್ವ ಇದೆ. ಯಾವುದೇ ಒಂದು ದೇಶ ಮುಂದಕ್ಕೆ ಬರಬೇಕಾದರೆ ಅದು ಒಂದು ತತ್ವದ ಆಧಾರದಮೇಲೆ ಕೆಲಸ ಮಾಡಿದರೆ ಆಗ ಮಾತ್ರ ಅದು ಮುಂದಕ್ಕೆ ಬರುವುದಕ್ಕೆ ಸಾಧ್ಯ. ಪರಿಸ್ಥಿತಿ ಹೀಗಿರುವಾಗ ಇವರು ನೀತಿಯನ್ನು ಬಿಟ್ಟು ಕೆಲಸ ಮಾಡುವುದಕ್ಕೆ ಹೊರಟಿರುವುದರಿಂದ ಹೀಗೆ ಆಗುತ್ತಿದೆ ಎಂದು ನನಗನ್ನಿಸುತ್ತದೆ. ದೇಶದಲ್ಲಿ ಯಾವುದಾದರೂ ಒಂದು ಗಂಡಾಂತರ ಬಂದಾಗ ಯಾರು ತಾನೆ ಅಸೆಂಬ್ಲಿ ಮೀಟಿಂಗ್ ಕರೆಯದೆ ಸುಮ್ಮನೆ ಇರುತ್ತಾರೆ? ಇಂಥಾ ಒಂದು ಪರ್ವಕಾಲದಲ್ಲಿ ಇದನ್ನು ತಿಳಿದಿರುವವರು ಈ ರೀತಿ ಹೇಳಿದ್ದಾರೆ. "It is a sort of phenomenon of loneliness away from the people which leads both individual and the Government to take to absurd measures and justify those absurd measures every time". ಈಗ ನಾನು ಆಹಾರದ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ಆಹಾರದ ಅಭಾವವನ್ನು ನೀಗಬೇಕಾದರೆ ನಾವು

ಹೆಚ್ಚು ಆಹಾರಧಾನ್ಯವನ್ನು ಉತ್ಪಾದನೆ ಮಾಡಬೇಕು. ಇದಕ್ಕಾಗಿ ನಮ್ಮ ಸರ್ಕಾರದವರು ಸುಮಾರು 100 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕು. ಈಗ ಸರ್ಕಾರದವರು ಧಾನ್ಯವನ್ನು ಸಂಗ್ರಹಣೆ ಮಾಡಬೇಕೆಂದು ಹಸಿ ಬತ್ತವನ್ನು ಕೊಂಡುಕೊಳ್ಳುತ್ತಿದಾರೆ, ಅದನ್ನು ಸ್ಟಾಕ್ ಮಾಡುವುದರಿಂದ ಏನಾಗುತ್ತದೆ ಎಂದರೆ ಸ್ವಲ್ಪದಿವಸ ಕಳೆದಮೇಲೆ ಅದು ಗೊಬ್ಬರವಾಗುತ್ತದೆ. ನಿಜವಾಗಿಯೂ ಸಹ ಇದೂ ಒಂದು ಸ್ಕೇರ್ಸಿಟಿಗೆ ಕಾರಣವಾಗುತ್ತದೆ. ಇನ್ನೊಂದು ವಿಷಯ ಏನೆಂದರೆ, ಈಗ ಗುಬ್ಬಿ ತಾಲ್ಲೂಕಿನಲ್ಲಿ ಸರ್ಕಾರದವರು ರೈತರ ಹತ್ತಿರ ಒಂದು ಎಕರೆಗೆ 2 ಕ್ವಿಂಟಾಲ್ ಬತ್ತವನ್ನು ವಸೂಲು ಮಾಡುತ್ತಿದ್ದಾರೆ. ಇದರ ಜೊತೆಗೆ ಮಿಲ್ಲನಲ್ಲಿ ಬೇರೆ ಮಿಲ್ ಮಾಡಿಸುವುದಕ್ಕೆ ತೆಗೆದುಕೊಂಡು ಹೋದ ಬತ್ತದಲ್ಲಿ ಅರ್ಧವನ್ನು ವಸೂಲು ಮಾಡುತ್ತಾರೆ. ಆದರೆ ಇವತ್ತಿನ ಪತ್ರಿಕೆಯಲ್ಲೇನೋ ಇದನ್ನು ಸ್ವಲ್ಪ ಬದಲಾವಣೆ ಮಾಡುತ್ತಾರೆಂದು ಹಾಕಿದ್ದಾರೆ. ಇಂಥಾ ವಿಚಾರಗಳನ್ನು ಸರ್ಕಾರದವರು ತೀರ್ಮಾನ ಮಾಡುವುದಕ್ಕಿಂತ ಮೊದಲು ಅಸೆಂಬ್ಲಿ ಮೀಟಿಂಗ್ ಅನ್ನು ಕರೆದು ಆ ವಿಚಾರವನ್ನು ಕೂಲಂಕಷವಾಗಿ ಚರ್ಚೆಮಾಡಿ ಸರಿಯಾದಂತಹ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂಬ ಮನೋಭಾವ ನಮ್ಮ ಸ್ನೇಹಿತರಾದ ಆಡಳಿತಪಕ್ಷದವರಿಗೆ ಇಲ್ಲ. ಈ ರೀತಿ ಸರ್ಕಾರದವರು ವಿಕಟವಿನೋದವಾದಂತಹ ಕ್ರಮಗಳನ್ನು ತೆಗೆದುಕೊಳ್ಳುವುದರಿಂದ ಜನಗಳಿಗೆ ಬಹಳ ಕಷ್ಟವಾಗುತ್ತದೆ. ಈ ಆಹಾರದ ವಿಷಯದಲ್ಲಿ ಮುಂದೆ ತೊಂದರೆಯಾಗದಂತೆ ಮಾಡಲು ಈಗ ಸರ್ಕಾರದವರು ಏನೊಂದೂ ಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ನಾವು ನೋಡುವುದಾದರೆ ಇವರು ಬರೀ ಅಧಿಕಾರಕ್ಕೆ ಅಂಟಿಕೊಂಡಿರುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡುವುದಕ್ಕೆ ಉದ್ಯುಕ್ತರಾಗಿದ್ದಾರೆ. ಈ ರೀತಿಯಾಗಿ ಇವರು ಕಾನೂನನ್ನು ಮಾಡುವುದಾದರೆ, ಇವರ ಉದ್ದೇಶವಾದರೂ ಹೇಗೆ ಸಫಲವಾಗುತ್ತದೆ ? ಇದನ್ನು ಕೂಲಂಕಷವಾಗಿ ಯೋಚನೆ ಮಾಡಬೇಕಾಗಿದೆ.

ಆಮೇಲೆ ನಾವು ಏನೇನು ಮಾಡಿದರೆ ಆಹಾರದ ಉತ್ಪತ್ತಿ ಜಾಸ್ತಿಯಾಗುತ್ತದೆ ಎನ್ನತಕ್ಕಂಥ ದೂರದೃಷ್ಟಿಯನ್ನು ಇಟ್ಟುಕೊಂಡು ಈಗ ತಾತ್ಕಾಲಿಕವಾಗಿ ಏನೇನು ಕೆಲಸಗಳನ್ನು ಮಾಡಬೇಕೋ ಅದನ್ನು ಮಾಡಬೇಕು. ಫುಡ್ ಗ್ರೈನ್ಸ್ ಇರುವುದನ್ನು ಯಾವರೀತಿ ಹಂಚಬೇಕು ಎನ್ನುತಕ್ಕ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದು ಎಲ್ಲರಿಗೂ ಗೊತ್ತಿದೆ. ಅದರಲ್ಲೂ ಸರ್ಕಾರದವರಿಗೆ ಬಹಳ ಚೆನ್ನಾಗಿ ಗೊತ್ತಿದೆ. ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ, ಹೆಚ್ಚು ಆಹಾರವನ್ನು ಉತ್ಪಾದನೆ ಮಾಡಬೇಕಾದರೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರದವರು ಮಾಡಬೇಕು. ಮತ್ತು ಯಾವ ಒಂದು ಕಾನೂನನ್ನು ಮಾಡಬೇಕಾದರೂ ಸರ್ಕಾರದವರು ಸ್ವಲ್ಪ ಕೂಲಂಕಷವಾಗಿ ಯೋಚನೆ ಮಾಡಿ ಮಾಡಬೇಕು. ಇನ್ನೇನು ಇಷ್ಟರಲ್ಲೇ ಜನರಲ್ ಎಲೆಕ್ಷನ್ ಬಂತು. ಈಗ ನೀವು ಇಂಥಾ ಒಂದು ಕಾನೂನನ್ನು ಮಾಡಿ ಜನತೆಗೆ ತೊಂದರೆಯನ್ನು ಉಂ[illegible]ಮಾಡುವುದಾದರೆ ಆಗ ನಿಮಗೆ ಜನತೆಯ ಬೆಂಬಲ ಎಷ್ಟರಮಟ್ಟಿಗೆ ಸಿಕ್ಕುತ್ತದೆ ಎಂಬುದನ್ನೂ ಸಹ ನೀವು ಯೋಚನೆ ಮಾಡಬೇಕು ಒಟ್ಟಿನಲ್ಲಿ ಸರಕಾರದವರು ಜನತೆಯ ಕಲ್ಯಾಣ ದೃಷ್ಟಿಯಿಂದ ಯಾವ ಕೆಲಸವನ್ನು ಮಾಡಬೇಕೋ ಅದನ್ನು ಮಾಡಬೇಕೇ ಹೊರತು ತಮ್ಮ ಮನಸ್ಸಿಗೆ ಬಂದಹಾಗೆ ಮಾಡುವುದು ಸರಿಯಲ್ಲ. ನಾನು ಇನ್ನು ಕೆಲವು ವಿಷಯಗಳನ್ನ ಹೇಳಬೇಕೆಂದಿದ್ದೆ. ದುರ್ದೈವವಶಾತ್ ಹೆಚ್ಚಿನ ಕಾಲಾವಕಾಶವಿಲ್ಲ. ಈಗ ಸದ್ಯದ ದೃಷ್ಟಿಯಿಂದ ನಾನು ಏನು ಹೇಳಬೇಕೆಂಬುದು ಗೊತ್ತಾಗುವುದಿಲ್ಲ. ರಾಜ್ಯಪಾಲರ ಭಾಷಣದ ಮೇಲಾದರೂ ನನಗೆ ಮಾತನಾಡುವುದಕ್ಕೆ ಸ್ವಲ್ಪ ಜಾಸ್ತಿ ಕಾಲವನ್ನು ಕೊಡಬೇಕೆಂದು ಮಾನ್ಯ ಅಧ್ಯಕ್ಷರನ್ನು ಕೇಳಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Yesterday the Hon'ble Member Sri S. M. Krishna in the course of his speech referred to two instances wherein photostat copies of documents had been made use of. With regard to the photostat copies, I read through the same.

Sri S. M. KRISHNA.—I glanced through the proceedings of the Lok Sabha. This does not contain the statement of Sri T. T. Krishnamachari made on the floor of the House, no sooner he resigned. I will go through the other proceedings.

Mr. SPEAKER.—Did they deal with any photostat copies ?

Sri S. M. KRISHNA.—I did not say photostat copies. I said a file was read. One file was produced by Sri Feroze Gandhi, relating to the Mundhra affair.

Mr. SPEAKER.—I have been trying to understand it. I want to know whether I committed any error.

†ಶ್ರೀ ಡಿ.ಎಂ. ಸಿದ್ದಯ್ಯ (ಬಳಿಗೆರೆ).—ಮಾನ್ಯ ಸಭಾಪತಿಗಳೇ, ಕಳೆದ ಮೂರು ದಿವಸಗಳಿಂದ ಮಾನ್ಯ ವಿರೋಧಪಕ್ಷದ ನಾಯಕರು ಈ ಸಭೆಯ ಮುಂದೆ ಮಂಡಿಸಿದಂಥ ಅವಿಶ್ವಾಸ ನಿರ್ಣಯದ ಮೇಲೆ, ವಿರೋಧಪಕ್ಷದ ಮಾನ್ಯ ಸದಸ್ಯರುಗಳು ಮಾಡಿದಂಥ ಭಾಷಣವನ್ನೆಲ್ಲಾ ಬಹಳ ಕುತೂಹಲ ದಿಂದ ಕೇಳಿದೆ; ಅದರಲ್ಲಿಯೂ ನಿನ್ನೆ ಪ್ರಾರಂಭಮಾಡಿ ಇವತ್ತು ಮುಗಿಸಿದಂಥ ನನ್ನ ಮಾನ್ಯ ಸ್ನೇಹಿತರಾದ ಶ್ರೀ ಕೃಷ್ಣರವರ ಭಾಷಣವನ್ನು ಕೂಡ ಬಹಳ ಕುತೂಹಲದಿಂದ ಕೇಳಿದ್ದಾಯಿತು. ಇವರ ಮುಖ್ಯವಾದ ಆರೋಪಣೆ ಸರಕಾರದ ಮೇಲೆ ಭ್ರಷ್ಟಾಚಾರ. ಅವರು ಅನೇಕ ಸಾದೃಶ್ಯ ಗಳನ್ನೂ, ಸನ್ನಿವೇಶಗಳನ್ನೂ ಸವಿಸ್ತಾರವಾಗಿ ವಿವರಿಸಿ, ಸರ್ಕಾರ ನಿಜವಾಗಿಯೂ ಅಧಿಕಾರ ದಿಂದ ಹೋಗಬೇಕು, ಭ್ರಷ್ಟಾಚಾರ ಮಾಡಿದೆ ಅನ್ನತಕ್ಕಂಥಾದ್ದನ್ನು ಸಾಧಿಸಲು ಬಹಳ ಪ್ರಯತ್ನಪಟ್ಟು ವಿಫಲರಾದರು ಎಂದು ನಾನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸಲು ಆಶೆಪಡುತ್ತೇನೆ. ಅವರು ಮುಖ್ಯವಾಗಿ ಹೇಳಿದ್ದು ಶರಾವತಿಯ ವಿಚಾರ. ವಿರೋಧಪಕ್ಷದ ನಾಯಕರಿಗೆ ಮತ್ತು ಅವರ ಸಹೋದ್ಯೋಗಿಗಳಿಗೆ ಶರಾವತೀದು ಏನೋ ಒಂದು ಗೀಳು ಹಿಡಿದಿದೆ; ಅದು ನಮಗೆ ಕಷ್ಟವಾಗಿದೆ. ಪ್ರತಿಸಾರಿ ಅವಿಶ್ವಾಸ ನಿರ್ಣಯವನ್ನು ಮಂಡಿಸಿದಾಗಲೂ ಸರ್ಕಾರದ ಮೇಲೆ ಇಲ್ಲದ ಸಲ್ಲದ ಆಪಾದನೆಗಳನ್ನು ಹೂಡಿದ್ದಾರೆ. ಅವಿಶ್ವಾಸ ನಿರ್ಣಯವನ್ನು ಈ ಮಾನ್ಯ ಸಭೆಯಲ್ಲಿ ಚರ್ಚಿಸಿ ತೃಪ್ತರಾಗದೆ, ರಾಷ್ಟ್ರಾಧ್ಯಕ್ಷರಿಗೆ ಒಯ್ದು ಕೊಟ್ಟಿದ್ದಾರೆ. ರಾಷ್ಟ್ರಾಧ್ಯಕ್ಷರು ಪರಿಶೀಲನೆ ಮಾಡುವ ತನಕ ತಾಳ್ಮೆ ಇಲ್ಲದೆ, ಈ ಸಾರಿ ನಾವು ಸಭೆ ಸೇರಿದ ಕೂಡಲೆ, ಮೂರನೆ ಸಲ ಅವಿಶ್ವಾಸ ನಿರ್ಣಯವನ್ನು ತಂದು ಸರಕಾರದ ಮೇಲೆ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಶರಾವತಿ ವಿಷಯದಲ್ಲಿ ನಮ್ಮ ಸರಕಾರದವರು ಏನೊಂದು ವೈಟ್‌ಪೇಪರನ್ನು ಹೊರಡಿಸಿದ್ದಾರೊ, ಅದನ್ನು ಮಾನ್ಯ ವಿರೋಧಪಕ್ಷದ ನಾಯಕರೂ ಮತ್ತು ಸದಸ್ಯರುಗಳೂ ಅವಲಂಬಿಸಿದ್ದಾರೆಂದು ನಾನಾದರೂ ಕೂಡ ಭಾವಿಸುತ್ತೇನೆ. ಅದು ಆದಮೇಲೆ ಕೇಂದ್ರ ಸರಕಾರದ ಮಂತ್ರಿಗಳಾದ ಶ್ರೀ ಕೆ. ಎಲ್. ರಾವ್‌ರವರು ಅಂಥ ಭ್ರಷ್ಟಾಚಾರದ ಕೆಲಸ ಏನೂ ನಡೆದಿಲ್ಲ, ಕೆಲಸ ತೃಪ್ತಿಕರವಾಗಿ ನಡೆದಿದೆ ಎಂದು ಒಂದು ಹೇಳಿಕೆಯನ್ನು ಕೊಟ್ಟರು. ಇತ್ತೀಚೆಗೆ ನಮ್ಮ ಸಂಸ್ಥಾನದವರೇ ಆದ ಗತಿಸಿಹೋದ ಶ್ರೀ ದಾಸಪ್ಪನವರು ಶರಾವತಿಗೆ ಭೇಟಿಕೊಟ್ಟು ಶರಾವತಿಯಲ್ಲಿ ಭ್ರಷ್ಟಾಚಾರ ನಡೆದಿಲ್ಲ ಅನ್ನತಕ್ಕಂಥಾದ್ದನ್ನು ಸ್ಪಷ್ಟಪಡಿಸಿದ್ದಾರೆ. ಹೀಗೆ ಕೇಂದ್ರ ಸರಕಾರದ ಇಬ್ಬರು ಮಂತ್ರಿಗಳು ಶರಾವತಿ ಯೋಜನೆ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಮತ್ತು ಏನು ಇವರು ಒಂದು ಆರೋಪಣೆಯನ್ನು ಮಾಡಿದ್ದಾರೊ ಇದರಮೇಲೆ ಸರಕಾರದವರಾದರೂ ಕೂಡ, ಅದರಲ್ಲಿಯೂ ಅದೇ ಇಲಾಖೆಯನ್ನು ವಹಿಸಿಕೊಂಡಿರುವ ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದಲ್ಲಿ ಸಾಕಾದಷ್ಟು ಶ್ರದ್ಧೆಯಿಂದ, ಸಾಕಾದಷ್ಟು ವಿಶ್ವಾಸದಿಂದ ಅದನ್ನು ಚೆನ್ನಾಗಿ ಪರಿಶೀಲಿಸಿದ್ದಾರೆ ಎಂದು ನಾನಾ ದರೂಕೂಡ ನಂಬಿದ್ದೇನೆ. ಅದೂ ಅಲ್ಲದೇನೆ ನಮ್ಮ ಮಹಾಪ್ರಧಾನಿ ಲಾಲ್‌ಬಹದೂರ್ ಶಾಸ್ತ್ರಿ ಯವರ ಹೇಳಿಕೆಯನ್ನು ಈ ಸಭೆಯ ಗಮನಕ್ಕೆ ತರುತ್ತೇನೆ; ಅವರು ಮೈಸೂರು ಸರಕಾರದ ಮೇಲೆ ಏನು ಆಪಾದನೆಗಳನ್ನು ಕೇಂದ್ರ ಸರಕಾರಕ್ಕೆ ಕಳುಹಿಸಿದ್ದರೋ, ಆ ಆಪಾದನೆಗಳನ್ನು ಪರಿಶೀಲಿಸಿ ಅವುಗಳಲ್ಲಿ ಏನೂ ತಿರುಳಿಲ್ಲವೆಂದು ಹೇಳಿದ್ದಾರೆಂದು ಎರಡು ಮೂರು ಸಾರಿ ಒಂದೆರಡು ದೊಡ್ಡ ಪತ್ರಿಕೆ ಗಳಲ್ಲಿ ಬಂದಿರುವುದನ್ನು ನೋಡಿದ್ದೇನೆ. ಇವತ್ತಿನ ದಿವಸದ ಪತ್ರಿಕೆಯಲ್ಲಿ ಓದಿದೆ: ಲಾಲ್‌ಬಹದೂರ್ ಶಾಸ್ತ್ರಿಯವರು, ಕ್ಯಾಬಿನೆಟ್ ಸಬ್‌ಕಮಿಟಿ ಪರಿಶೀಲಿಸುತ್ತಿದೆಯೆಂದು ಹೇಳಿದ್ದಾರೆ. ಅಂದರೆ, ಒಂದು ಕೇಸು ಕೊಟ್ಟಮೇಲೆ, ಅದರ ತೀರ್ಮಾನವಾದಹೊರತು, ಸರಕಾರದಮೇಲೆ ಕಾಂಗ್ರೆಸ್ಸಿ ನವರೇ ಆಗಲಿ, ಅಥವಾ ಈ ಮಾನ್ಯ ಸಭೆಯ ವಿರೋಧಪಕ್ಷದ ಸದಸ್ಯರೇ ಆಗಲಿ ಹೇಗೆ ಆಪಾದನೆ ಗಳನ್ನು ಹೊರಡಿಸಿದ್ದಾರೆ ಎಂಬ ಮಾತನ್ನು ತಮ್ಮ ಮೂಲಕ ಅವರಿಗೆ ಕೇಳುತ್ತೇನೆ. ಆಪಾದನೆ ಗಳನ್ನು ಹೊರಿಸತಕ್ಕಂಥಾದ್ದು ಬಹಳ ಸುಲಭ. ಶ್ರೀ ಕೃಷ್ಣರವರು ಸಂತಾನಂ ಕಮಿಟಿ ವರದಿ ಮೇಲೆ ಬಹಳ ದೀರ್ಘ ಭಾಷಣ ಮಾಡಿದರು. ಹತ್ತು ಜನ ಶಾಸಕರು ಅಥವಾ ಹತ್ತು ಜನ ಪಾರ್ಲಿಮೆಂಟು ಸದಸ್ಯರು ಕೇಂದ್ರ ಸರಕಾರಕ್ಕೆ ಆಪಾದನೆಗಳನ್ನು ಕೊಡಬಹುದು. ಆದರೆ ಆಪಾದನೆಗಳನ್ನು ಕೊಟ್ಟಮೇಲೆ ಆಪಾದನೆಗಳು ಎಷ್ಟರಮಟ್ಟಿಗೆ ನಿಜವಾಗಿವೆ, ಸಾಧುವಾಗಿವೆ, ಈ ಆಪಾದನೆಗಳಲ್ಲಿ ಏನು ತಿರುಳಿದೆ, ಆಪಾದನೆಗಳನ್ನು ಹೇಗೆ ರುಜುವಾತು ಮಾಡಬೇಕು ಅನ್ನುವುದು ಬಹಳಮುಖ್ಯ; ಅನ್ನುವುದನ್ನು ವಕೀಲ ವೃತ್ತಿಯಲ್ಲಿರತಕ್ಕಂಥ ಕೃಷ್ಣರವರಿಗೆ ನಾನು ತಿಳಿಯ ಬಯಸುತ್ತೇನೆ. ವಿರೋಧಪಕ್ಷದವರಿಗೆ ಮೊನ್ನೆ ಬೆಂಗಳೂರಿನಲ್ಲಿ ಆಚಾರ್ಯ ಕೃಪಲಾನಿಯವರು ಕೂಡ ಕೆಲವು ಬುದ್ಧಿವಾದದ ಮಾತನ್ನು ಹೇಳಿದ್ದಾರೆ.

Mr. SPEAKER.—I do not want that names should be mentioned.

ಶ್ರೀ ಡಿ. ಎಂ. ಸಿದ್ದಯ್ಯ.—ಕ್ಷಮಿಸಬೇಕು. I do not mention. ಆ ಮುಖಂಡರು ಕೂಡ ಆಪಾದನೆಗಳನ್ನು ಮಾಡುವಾಗ ಸಾಬೀತು, ರುಜುವಾತು ಕೊಡಬೇಕು, ಇಲ್ಲದೆಹೋದರೆ ಅದರ ಗೋಜಿಗೆ ಹೋಗಕೂಡದು ಎಂದು ಎಚ್ಚರಿಸಿದ್ದಾರೆ. ಮತ್ತು ಅದರ ಜೊತೆಗೆ ಯಾರು ಆಪಾದನೆಯನ್ನು ಮಾಡುತ್ತಾರೊ ಅವರ ಕೂಡ ಹಸ್ತಶುದ್ಧರಾಗಿ, ನಿಷ್ಠೆಯಿಂದ ಸಾರ್ವಜನಿಕ ಜೀವನದಲ್ಲಿರತಕ್ಕಂಥಾದ್ದು ಬಹಳ ಮುಖ್ಯ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ಒಂದು ಸರಕಾರ ಶ್ರೀ ನಿಜಲಿಂಗಪ್ಪನವರ ಮುಖಂಡತ್ವದಲ್ಲಿ ಏನು ಮೂರು ವರ್ಷದ ಕೆಳಗೆ ರಚನೆಯಾಯಿತೊ, ಅದು ಕೆಲಸ ಮಾಡಿಕೊಂಡು ಬಂದಿದೆ. ಈ ಒಂದು ಸರಕಾರ ತನ್ನ ನೀತಿನಿಯಮಗಳನ್ನು ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ನಡೆಸಿಕೊಂಡು ಹೋಗಬೇಕು ಎಂಬ ಆಶೆಆಕಾಂಕ್ಷೆಗಳು ವಿರೋಧಪಕ್ಷದ ನಾಯಕರಿಗೆ ಮತ್ತು ಅವರ ಸಹೋದ್ಯೋಗಿಗಳಿಗೆ ಎಷ್ಟರ ಮಟ್ಟಿಗೆ ಇದೆಯೋ, ಅದಕ್ಕಿಂತಲೂ ಹೆಚ್ಚಿನ ಆಸೆಆಕಾಂಕ್ಷೆ ಕಾಂಗ್ರೆಸ್ ಶಾಸಕರಾದ ನಮಗೆ ಇದೆ ಎಂಬುದನ್ನು ನಾನು ವಿರೋಧಪಕ್ಷದ ನಾಯಕರಿಗೆ ಮತ್ತು ಸಹೋದ್ಯೋಗಿಗಳಿಗೆ ತಿಳಿಯಪಡಿಸುತ್ತೇನೆ. ಯಾರನ್ನು ಮುಖ್ಯಮಂತ್ರಿಯಾಗಿ ಆರಿಸಿದ್ದೇವೆಯೊ, ಯಾರ ಮುಖಂಡತ್ವದಲ್ಲಿ ನಮಗೆ ಅಚಲವಾದ ನಂಬಿಕೆ ಇದೆಯೊ, ಅಂಥವರ ಮಂತ್ರಿಮಂಡಲ ನಿಸ್ಸಂಶಯವಾಗಿ, ನಿಸ್ವಾರ್ಥತೆಯಿಂದ ಸೇವೆ ಮಾಡಿಕೊಂಡು ಹೋಗದಿದ್ದರೆ ನಾವುಗಳು ಸುಮ್ಮನೆ ಕೈಕಟ್ಟಿಕೊಂಡು ಇರುತ್ತೇವೆ, ಕಾಂಗ್ರೆಸ್ ಸದಸ್ಯರುಗಳು ಅವರು ಹೇಳಿದ್ದಕ್ಕೆ ಊಗುಟ್ಟಿಕೊಂಡು ಇರುತ್ತೇವೆನ್ನುವ ತಪ್ಪು ಅಭಿಪ್ರಾಯವನ್ನು ಇಟ್ಟುಕೊಳ್ಳಬಾರದೆಂಬ ಮಾತನ್ನು ಸ್ಪಷ್ಟಪಡಿಸುತ್ತೇನೆ. ನಾವು ಮನಸ್ಸು ಮಾಡಿದರೆ ನಮ್ಮ ಸರಕಾರವನ್ನು ಇಳಿಸಬಹುದು. ಆದ್ದರಿಂದ ಸರಕಾರ ಸರಿಯಾದ ರೀತಿಯಲ್ಲಿ ಹೋಗದೆ ಇದ್ದರೆ ನಾವು ಲಕ್ಷ್ಯಮಾಡುತ್ತಿಲ್ಲವೆಂದು ಅವರು ತಿಳಿದುಕೊಳ್ಳಬಾರದು. ನಿಜವಾಗಿ ವಿರೋಧಪಕ್ಷದವರು ಹೇಳುವ ರೀತಿಯಲ್ಲಿ ವರ್ತಿಸುವ ಪಕ್ಷವಲ್ಲ ಇದು. ನಾವು ಕೂಡ ಕಣ್ಣು ಮುಚ್ಚಿಕೊಂಡು, ಕೈಕಟ್ಟಿಕೊಂಡು ಕೂತಿರುತ್ತೇವೆಯೆ ಸರಕಾರ ದಾರಿ ತಪ್ಪಿದರೆ? ಅವರಷ್ಟೆ ನಿಜವಾದ ನಿಷ್ಠೆ, ಪ್ರಾಮಾಣಿಕತೆ ಮೈಸೂರು ಶಾಸನಸಭಾ ಕಾಂಗ್ರೆಸ್ ಸದಸ್ಯರಿಗೆ ಇಲ್ಲವೆ ಎಂಬ ಮಾತನ್ನು ವಿರೋಧಪಕ್ಷದವರನ್ನು ಕಳಕಳಿಯಿಂದ ಕೇಳುತ್ತಿದ್ದೇನೆ. ವಿರೋಧಪಕ್ಷದವರು ಶಾಸನ ಸಭೆಯಲ್ಲಿ ಇರಬೇಕಾದುದು, ಪ್ರಜಾಪ್ರಭುತ್ವದಲ್ಲಿ ಇರಬೇಕಾದುದು ಬಹಳ ಮುಖ್ಯ. ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷದ ಸದಸ್ಯರಿಗೆ ಬಹಳ ಗೌರವವಿದೆ, ಮಾನ್ಯತೆ ಇದೆ, ಆದ್ದರಿಂದ ವಿರೋಧಪಕ್ಷದ ನಾಯಕರಿಗೆ ಇಂಗ್ಲೆಂಡಿನಲ್ಲಿ ಸಂಭಾವನೆ ಇದೆಯೆಂದು ಮಾನ್ಯ ಶ್ರೀ ಕೃಷ್ಣರವರು ಹೇಳಿದರು. ಈ ಸಂಭಾವನೆ ಏತಕ್ಕೆ ಕೊಡುತ್ತಿದ್ದಾರೆ, ಹೇಳಿ ಅಂದಾಗ, ನೀವು ಈ ಕಡೆಗೆ ಬಂದರೆ ನಿಮಗೆ ಅನುಕೂಲವಾಗಲಿ ಎಂಬ ಒಂದು ದೃಷ್ಟಿಯಿಂದ ಎಂದು ಹಾಸ್ಯವಾಗಿ ತಿಳಿಸಿದರು. ಸರಕಾರದ ನೀತಿ ಬಂದರೆ, ವಿರೋಧಪಕ್ಷದವರು ನಿಜವಾಗಿಯೂ ರಚನಾತ್ಮಕ ಟೀಕೆಗಳನ್ನು ಮಾಡಿ, ಸರ್ಕಾರ ಮಾಡತಕ್ಕಂಥ ತಪ್ಪುಗಳನ್ನು ದೇಶದ ಮುಂದೆ, ಸರಕಾರದ ಮುಂದೆ ಎತ್ತಿಹಿಡಿದರೆ, ಜನತಾ ಸೇವೆಯನ್ನೂ ದೇಶಸೇವೆಯನ್ನೂ ಮಾಡಿದಂತಾಗುತ್ತದೆ. ಹೀಗೆ ಮಾಡಿದರೆ ಮಾತ್ರ ಅವರು ಕೂಡ ಉತ್ತರೋತ್ತರ, ಕಾಲಾನುಕ್ರಮಕ್ಕೆ ಜನರ ನಂಬಿಕೆಗೆ, ವಿಶ್ವಾಸಕ್ಕೆ ಪಾತ್ರರಾಗುತ್ತಾರೆ. ವಿರೋಧಪಕ್ಷದ ನಾಯಕರನ್ನೂ ಮತ್ತು ಅವರ ಅನುಯಾಯಿಗಳನ್ನೂ ನಾನಾದರೂ ಕೇಳುತ್ತೇನೆ: ನಿಮ್ಮ ಪಕ್ಷದವರೇ ಆಗಿದ್ದ, ಅಖಿಲಭಾರತ ಮುಖಂಡರಾದ ಶ್ರೀ ಅಶೋಕ ಮೆಹ್ತಾರವರು ಕಾಂಗ್ರೆಸ್ಸಿಗೆ ಸೇರಬೇಕಾದರೆ, ಭುವನೇಶ್ವರ ಕಾಂಗ್ರೆಸ್ ಸಮಾಜವಾದಿ ಪ್ರಜಾಪ್ರಭುತ್ವ ನಿರ್ಣಯವಾದ ಮೇಲೆ.

Mr. SPEAKER.—The Hon'ble Member should not mention names.

ಶ್ರೀ ಡಿ. ಎಂ. ಸಿದ್ದಯ್ಯ.—ಸಾಧ್ಯವಾದಷ್ಟು ಹೆಸರು ಹೇಳುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅವರು ಸಮಾಜವಾದದಲ್ಲಿ ತಮ್ಮ ಪಕ್ಷಕ್ಕೂ ಕಾಂಗ್ರೆಸ್ಸಿಗೂ ಅಂತಹ ವ್ಯತ್ಯಾಸಗಳೇನೂ ಇಲ್ಲವೆಂದು ಅವರು ತತ್ವಶಃ ಕಾಂಗ್ರೆಸ್ಸಿನಲ್ಲಿ ಐಕ್ಯವಾಗಲು ಸೇರಿಕೊಂಡರು ಎಂದಮೇಲೆ ನಮ್ಮ ಸಂಸ್ಥಾನದಲ್ಲಿಯೂ ಕೂಡ ಕೆಲವಾರು ಮಂದಿ ಸದಸ್ಯರುಗಳು ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡರು. ಅದರಂತೆ ಇಂಡಿಯಾ ದೇಶದ ನಾನಾ ಪ್ರಾಂತಗಳಲ್ಲಿದ್ದ ಪ್ರಜಾ ಸೋಷಿಲಿಸ್ಟು ಪಕ್ಷದ ಅನೇಕ ಮಂದಿ ಸದಸ್ಯರುಗಳು ಕಾಂಗ್ರೆಸ್ ಪಕ್ಷವನ್ನು ಸೇರಿದರು. ಆದುದರಿಂದ ನಮ್ಮ ರಾಜ್ಯದಲ್ಲಿರುವ ಪ್ರಜಾ ಸೋಷಿಲಿಸ್ಟು ಪಕ್ಷದ ಸದಸ್ಯರುಗಳನ್ನು ನಾನು ಪ್ರಾರ್ಥಿಸಿಕೊಳ್ಳುವುದು ಅವರುಗಳೆಲ್ಲ ಏತಕ್ಕೆ ನಮ್ಮ ಪಕ್ಷವಾದ ಕಾಂಗ್ರೆಸ್ ಎನ್ನುವಂತಹ ಮಹಾ ಪಕ್ಷಕ್ಕೆ ಅವರೇಕೆ ಸೇರಲಿಲ್ಲ ಎಂದು ಕೇಳುತ್ತೇನೆ. ನಿಮ್ಮ ಪ್ರಜಾ ಸೋಷಿಲಿಸ್ಟು ಪಕ್ಷದ ತತ್ವವೇನಿದೆ ಅದರಂತೆ ನಿಷ್ಠೆಯಾಗಿ ನಡೆಯುತ್ತಿರುವವರು ಇಂತಹ ಕಾಂಗ್ರೆಸ್ ಪಕ್ಷಕ್ಕೇಕೆ ಸೇರಲಿಲ್ಲ ಎಂದು ನಾನು ಇಲ್ಲಿ ಕೇಳುತ್ತೇನೆ. ಸರಕಾರದ ಗೃಹ ಮಂತ್ರಿಗಳಾದ ಶ್ರೀ ಮಾನ್. ಆರ್. ಎಂ. ಪಾಟೀಲರವರು ಹೇಳುವಾಗ ಅವರಮೇಲೆ ಮಾಡಿದ್ದ ಆಪಾದನೆಗಳು ಹುರುಳಿಲ್ಲದವು, ಇದರಲ್ಲಿ ಹೊಸದಾಗಿ ಯಾವ ಅಭಿಪ್ರಾಯಗಳನ್ನೂ ಇಲ್ಲಿ ಹೇಳಲಿಲ್ಲ. ಆದರಿಂದ

(ಶ್ರೀ ಡಿ. ಎಂ. ಸಿದ್ದಯ್ಯ)

ಇಂತಹ ಒಂದು ನಿರ್ಣಯವನ್ನು ತರುವುದರ ಅವಶ್ಯಕತೆಯಾದರೂ ಏನಿತ್ತು ಎಂದು ಅವರು ಪ್ರಸ್ತಾಪಿಸಿದರು. ಅವರುಗಳು ಮಾಡಿದ ಅಪಾದನೆಗಳು ನಿಜವಾಗಿದ್ದ ಪಕ್ಷದಲ್ಲಿ ನಮ್ಮ ಮಾನ್ಯ ಸ್ನೇಹಿತರಾದ ವಿರೋಧ ಪಕ್ಷದ ನಾಯಕರು ಮತ್ತು ಅವರ ಸಹೋದ್ಯೋಗಿಗಳು ಸಾಕಾದಷ್ಟು ಸಮಜಾಯಿಷಿಗಳನ್ನು ಕೊಡಬೇಕು ಎಂದು ನಾನಾದರೂ ಹೇಳುತ್ತೇನೆ. ನಮ್ಮ ಪೂಜ್ಯ ಮಹಾತ್ಮ ಗಾಂಧಿಯವರು ಹಾಗೂ ಪಂಡಿತ ನೆಹರೂರವರು ಏನು ಕಾಂಗ್ರೆಸ್ಸಿನ ತತ್ವಗಳನ್ನು ದೇಶದಲ್ಲೆಲ್ಲಾ ಹರಡಿದ್ದಾರೋ ಅದರ ಹಿನ್ನೆಲೆಯಲ್ಲಿ ನಮ್ಮಲ್ಲಿರುವ ಮುಖಂಡರುಗಳೂ ಅದರ ತತ್ವಗಳನ್ನೂ ಹಾಗೂ ನಿಯಮಗಳನ್ನೂ ಪಾಲಿಸಿ ಪೋಷಿಸಿಕೊಂಡು ಸಾಧನೆ ಮಾಡಿಕೊಂಡು ಬರುತ್ತಿದ್ದಾರೆ. ಅಂತಹ ಪಕ್ಷಕ್ಕೆ ನಮ್ಮ ವಿರೋಧ ಪಕ್ಷದ ಸಹೋದ್ಯೋಗಿಗಳು ಏಕೆ ನಮ್ಮ ಪಕ್ಷಕ್ಕೆ ಸೇರಬಾರದು ಎಂದು ಇಲ್ಲಿ ಕೇಳುತ್ತೇನೆ. ಇಲ್ಲಿ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀಮಾನ್ ಮರುಳಪ್ಪನವರ ಭಾಷಣವನ್ನು ಕೇಳಿ ನಿಜವಾಗಿಯೂ ನನಗೆ ಬಹಳ ದುಃಖವಾಯಿತು. ಈಗ್ಗೆ ಮೂರು ವರ್ಷಗಳ ಕೆಳಗೆ ಅವರು ಹೇಳಿದ ಭಾಷಣವನ್ನೂ ಕೇಳಿದ್ದೆ. ಅವರೂ ಕೂಡ ನಮ್ಮ ಕಾಂಗ್ರೆಸ್ ಸಂಸ್ಥೆಗೆ ಬರಬೇಕೆಂದು ಪ್ರಯತ್ನ ಮಾಡುತ್ತಿದ್ದರು.

3-00 P. M.

ಶ್ರೀ ಡಿ. ಮರುಳಪ್ಪ (ಕಡೂರು).—ಇಂತಹ ಅನ್ಯಾಯಗಳ್ಯಾವ ಕಾಲಕ್ಕೂ ಆಗುವುದಿಲ್ಲ...

ಶ್ರೀ ಡಿ. ಎಂ. ಸಿದ್ದಯ್ಯ.—ಮಾನ್ಯ ಸದಸ್ಯರಾದ ಮರುಳಪ್ಪನವರು ಹಿಂದೆ ಮಾಡಿದ್ದ ಭಾಷಣಕ್ಕೂ ಮತ್ತು ಈಗ ಮಾನ್ಯ ಸಭೆಯ ಮುಂದೆ ಬಂದಿರುವ ಅವಿಶ್ವಾಸ ನಿರ್ಣಯವನ್ನು ಸಪೋರ್ಟು ಮಾಡುತ್ತ ಮಾಡಿದ ಭಾಷಣಕ್ಕೂ ಒಂದಕ್ಕೊಂದು ಅಜಗಜಾಂತರದಷ್ಟು ದೂರವಾಗಿದೆ. ಆದುದರಿಂದ ನಾನಾದರೂ ಶ್ರೀಮಾನ್ ಮರುಳಪ್ಪನವರಿಗೆ ಸೂಚನೆ ಮಾಡುವುದು ಅವರು ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಸೇರುವುದು ಬೇಡ ಎಂದು ಇಷ್ಟು ಹೇಳಿ ಅದರ ಬಗ್ಗೆ ವಿಚಾರವನ್ನು ಇಲ್ಲಿಗೆ ಮುಗಿಸುತ್ತೇನೆ.

(ಶ್ರೀ ಮರುಳಪ್ಪನವರು ಮಾತನಾಡಲು ಎದ್ದು ನಿಂತರು.)

ಶ್ರೀ ಹೆಚ್. ಆರ್. ಕೇಶಮೂರ್ತಿ.—ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ. ಇಲ್ಲಿ ಈಗ ನೋ ಕಾನ್‌ಫಿಡೆನ್ಸ್ ಮೋಷನ್ನಿನ ಬಗ್ಗೆ ಚರ್ಚೆ ನಡೆಯುತ್ತಿದೆ. ಇಲ್ಲಿ ಮಾತನಾಡುತ್ತಿರುವ ಮಾನ್ಯ ಸದಸ್ಯರು ಎಲ್ಲಾ ಸದಸ್ಯರನ್ನೂ ನಮ್ಮ ಪಾರ್ಟಿಗೆ ಬಂದು ಸೇರಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಇಲ್ಲಿ ಪಾರ್ಟಿಗಳ ವಿಚಾರ ಚರ್ಚೆ ಮಾಡುತ್ತಿದ್ದೇವೆಯೇ? ಇದು ಸರಿಯಾದುದೇ ಎಂದು ನಾನು ತಮ್ಮಲ್ಲಿ ಕೇಳುತ್ತಿದ್ದೇನೆ.

Mr. SPEAKER.—Is relevancy or cogency of argument a Point of Order? The member may kindly revise his opinion and study the subject better.

ಶ್ರೀ ಡಿ. ಎಂ. ಸಿದ್ದಯ್ಯ.—ಶ್ರೀಮಾನ್ ಚನ್ನಬೈರೆಗೌಡರು ಮಾತನಾಡುತ್ತಿದ್ದಾಗ ರೆವಿನ್ಯೂ ಸಚಿವರು ಮತ್ತು ಅವರ ಸಹೋದ್ಯೋಗಿಗಳ ಮೇಲೆ ಮತ್ತು ಅವರ ಮನೆಯಲ್ಲಿರುವವರಮೇಲೆ ಆಪಾದನೆಗಳನ್ನು ಮಾಡುತ್ತ ಅವರು ಬೇಕು ಬೇಕಾದವರಿಗೆಲ್ಲ ಭೂಮಿಯನ್ನು ಕೊಟ್ಟರು, ಬಸ್ಸು ರೂಟು ಪರ್ಮಿಟ್ಟುಗಳನ್ನು ಕೊಟ್ಟರು ಎಂದು ಹೇಳಿದರು. ನಾನಾದರೂ ಅವರಿಗೆ ಈ ದಿವಸ ಇಲ್ಲಿ ಹೇಳಬಯಸುವುದು ಮಂತ್ರಿಗಳಾಗಿರತಕ್ಕವರಿಗೆ ಅವರ ಸಂಬಂಧಿಕರು ಯಾವ ಆಕ್ಷೇಪಣೆಯೂ ಇಲ್ಲದಂತಹ ವೃತ್ತಿಯನ್ನು ತೆಗೆದುಕೊಂಡು ಮಾಡಬಾರದು ಎಂದು ಅವರ ಅಭಿಪ್ರಾಯವೇ? ಮಂತ್ರಿಗಳ ದರ್ಜೆಯಲ್ಲಿ ಎಷ್ಟೋ ಜನರು ನನ್ನಂತೆಯೇ ಬಡವರಾಗಿರುವವರೂ ಇದ್ದಾರೆ. ಅಂತಹವರು ಈ ದೇಶದ ಮಂತ್ರಿಗಳಾಗಿದ್ದಾರೆ. ಅವರು ಬಡವರಾಗಿರುವುದರಿಂದ ಅವರಿಗೆ ಸಂಬಂಧಪಟ್ಟವರು ಅವರನ್ನು ಆಶ್ರಯ ಮಾಡಿಕೊಂಡಿರತಕ್ಕವರು ಯಾವುದಾದರೂ ಗೌರವಯುತವಾದ ವೃತ್ತಿಯನ್ನು ಅವಲಂಬನೆ ಮಾಡಿದರೆ ಅದರಲ್ಲಿ ತಪ್ಪೇನು ಎಂದು ನಾನು ಅವರಲ್ಲಿ ಪ್ರಶ್ನಿಸುತ್ತೇನೆ. ಮಂತ್ರಿಗಳ ಹುದ್ದೆಗಳನ್ನು ದುರುಪಯೋಗ ಮಾಡಿಕೊಳ್ಳದೆ ನ್ಯಾಯವಾದ ಒಂದು ವೃತ್ತಿಯನ್ನು ಅವರ ದರ್ಜೆಗೆ ತಕ್ಕಂತೆ ಮಾಡಿಕೊಂಡರೆ ಅದರಲ್ಲಿ ತಪ್ಪೇನು? ಈ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರಲ್ಲಿ ಹೇಳುವುದು ಅವರ ಸಹೋದ್ಯೋಗಿಗಳಿಗಾಗಿ ಮತ್ತು ಅವರ ಸಂಬಂಧೀ

ಕರುಗಳು ತೀವ್ರ ಮತ್ತು ಹಿತ್ತಾಳೆಯ ಕೆಲಸವನ್ನು ಮಾಡುವುದಕ್ಕಾಗಿ ಬೇಕಾದಷ್ಟು ಏಜನ್ಸಿಗಳನ್ನು ತೆಗೆದುಕೊಂಡಿದ್ದಾರೆ. ಶ್ರೀಮಾನ್ ಶಿವಪ್ಪನವರು ಈ ಮಾನ್ಯ ಸಭೆಯ ನಾಯಕರಾಗಿದ್ದಾಗ ಅವರುಗಳು ಎಷ್ಟು ಜಮೀನುಗಳನ್ನು ತೆಗೆದುಕೊಂಡಿದ್ದಾರೆ ಎನ್ನುವ ಬಗ್ಗೆ ಎಲ್ಲ ವಿವರಗಳೂ ನನ್ನಲ್ಲಿವೇ ಬೇಕಾದರೆ ಅದನ್ನು ಇಲ್ಲಿ ಹೇಳಲು ಸಿದ್ಧವಾಗಿದ್ದೇನೆ.

Sri S. SIVAPPA.—Sir, I challenge his statement : I am prepared for a judicial enquiry.

Sri S. M. KRISHNA.—On a Point of Order, Sir. Serious allegation was made against the Leader of the Opposition. The Leader of the Opposion has offered to place himself unconditionally before an impartial Tribunal. Does the Hon'ble Member, Sri D. M. Siddaiah, who also happens to be the General Secretary of the M. P. C. C., accept that challange and ask all those Ministers against whom allegations have been made to undergo judicial enquiry ?

Mr. SPEAKER.—A Point of Order was raised and it is my elementary duty, an inevitable duty to deal with it. I do not know whether the Hon'ble Member meant it very seriously. There is absolutely no substance. If challenges are made, and if a Point of Order arises, it may be permitted. But, that does not violate any Rule. How many challenges were thrown during the Debate when the Members were participating ? So many challenges were thrown, not one. I did not say then that there was any breach of the Rules for a Point of Order. Therefore, I have to simply reject it.

Sri C. J. MUCKANNAPPA.—He has made a specific charge against the Leader of the Opposition.

Mr. SPEAKER.—Is it a point of order ?

Sri C. J. MUCKANNAPPA.—I am requesting my friend, Mr. Siddiah to yield.

Mr. SPEAKER.—How many times am I to draw the Members to order ? He may yield, but he must obtain my permission. Where is the time ? Every minute is important. I am not allowing any disturbance and if the Member yields, he will be deemed to have closed his speech.

ಶ್ರೀ ಡಿ. ಎಂ. ಸಿದ್ದಯ್ಯ.—ಈ ಸಭೆಯ ಸದಸ್ಯನಾಗಿ ನಾವು ಯಾವ ವಿಚಾರಗಳನ್ನು ಹೇಳಬೇಕಾದರೂ ಕೂಡ ಪ್ರಮುಖವಾದ ಎಲ್ಲ ಅಂಕೆ ಅಂಶಗಳನ್ನೂ ಕೊಡುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ನನ್ನ ಜವಾಬುದಾರಿಯನ್ನರಿತು ತಮ್ಮ ಗಮನಕ್ಕೆ ಇಲ್ಲಿ ತರುತ್ತಿದ್ದೇನೆ. ಈ ಸಂದರ್ಭದಲ್ಲಿ ನಾನು ಹೇಳುವುದು ಗಾಜಿನ ಮನೆಯಲ್ಲಿ ವಾಸಿಸುವವರು ಅವರ ಮನೆಗೆ ಕಲ್ಲನ್ನು ಎಸೆಯಬಾರದು. ಇವೊತ್ತಿನ ದಿವಸ ಏನು ಅಪಾದನೆಗಳನ್ನು ಮಾಡಿದ್ದಾರೆಯೋ ಅಂತಹ ಅಪಾದನೆಗಳಲ್ಲಿ ಎಷ್ಟರ ಮಟ್ಟಿಗೆ ಸರಕಾರದ ಹಸ್ತಕ್ಷೇಪವಿದೆ, ಎಷ್ಟುಮಟ್ಟಿಗೆ ಪ್ರಾಮಾಣಿಕವಾಗಿದೆ ಸಾರ್ವಜನಿಕರ ಜೀವನದಲ್ಲಿ ಹೇಗೆ ಯಾವ ವಿಧವಾದ ಹಂಗೂ ಇಲ್ಲದೆ ನಿಷ್ಪಕ್ಷಪಾತವಾದ ಅಪಾದನೆಗಳನ್ನು ಮಾಡಿದ್ದಾರೆಯೋ ಇಲ್ಲವೇ ಎಂದು ನಾನು ತಮ್ಮಲ್ಲಿ ಹೇಳುತ್ತಿದ್ದೇನೆ, ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು, ಅಪಾದನೆಗಳನ್ನು ಮಾಡುವಾಗ ಅದನ್ನು ಸರಿಯಾಗಿ ಪುಷ್ಟೀಕರಿಸದೆ ಮಾಡಿದರೆ ಜನತೆಯ ಮಟ್ಟ ಎಷ್ಟು ಕೀಳುಮಟ್ಟಕ್ಕೆ ಹೋಗಿದೆ...

Sri C. J. MUCKANNAPPA.—It is a very important matter, Sir.

Mr. SPEAKER.—I am not allowing.

Sri C. J. MUCKANNAPPA.—Sir,......

Mr. SPEAKER.—Every word of the Member will be expunged.

ಶ್ರೀ ಡಿ. ಎಂ. ಸಿದ್ದಯ್ಯ.—* * * *

Mr. SPEAKER.—The Hon'ble Member Sri D. M. Siddaiah is not contributing any new idea. Within the last three minutes he has repeated the same idea ; thrice.

ಶ್ರೀ ಡಿ. ಎಂ. ಸಿದ್ದಯ್ಯ.—ವಿರೋಧ ಪಕ್ಷದ ನಾಯಕರ ಮತ್ತು ಅವರ ಸಹೋದ್ಯೋಗಿಗಳ ವಿಚಾರದಲ್ಲಿ ಈಗಾಗಲೇ,......

Mr. SPEAKER.—I am not allowing him to continue. The time of 15 minutes allotted to the member is over. Now he is bringing in the status of the Leader of the Opposion.

Sri D. M. SIDDIAH.—I will sum-up within two minutes, Sir.

Mr. SPEAKER.—The member is trying to create precedents which are embarrassing to everybody on the Floor of the House.

ಶ್ರೀ ಡಿ. ಎಂ. ಸಿದ್ದಯ್ಯ.—ಕೊನೆಯದಾಗಿ ಮಾನ್ಯ ಅಧ್ಯಕ್ಷರು ಹೇಳಿರುವಂತೆ ಕಾಲಾವಕಾಶವಿಲ್ಲದಿರುವುದರಿಂದ ಬಹುಶಃ ವಿರೋಧಪಕ್ಷದ ನಾಯಕರು ಮತ್ತು ವಿರೋಧಪಕ್ಷದ ಸದಸ್ಯರುಗಳಿಗೆ ಸಾಕಾದಷ್ಟು ಉತ್ತರ ಹೇಳಲು ಕಾಲಾವಕಾಶವಿಲ್ಲದೇ ಇರುವುದರಿಂದ, ಈಗ ಮಾನ್ಯ ಸದಸ್ಯರುಗಳು ಹೇಳಿರುವುದರಲ್ಲಿ ಯಾವ ಹೊಸ ವಿಚಾರಗಳೂ ಇಲ್ಲದಿರುವುದರಿಂದ ಇದನ್ನು ತರುವ ಅವಶ್ಯಕತೆ ಇರಲಿಲ್ಲ ಎಂದು ಈ ಸಭೆಯ ಗಮನಕ್ಕೆ ತರುತ್ತೇನೆ. ಆದರೆ ಒಂದೇ ಒಂದು ಹೊಸ ವಿಚಾರವನ್ನು ಇಲ್ಲಿರುವ ಮಂತ್ರಿಗಳಿಗೇ ತಿಳಿಯದೇ ಇರುವಂತಹುದನ್ನು ತ[illegible]ಲು ಇವರಿಗೆ ಹೇಗೆ ತಿಳಿಯಿತು. ಅದು ಟೆಂಡರು ಕರೆದು ಇನ್ನೂ ಕಂಟ್ರಾಕ್ಟು ಕೊಡುವ ವಿಚಾರವನ್ನು ಇವರು ಹೇಗೆ ತಿಳಿದು ಈ ಸಭೆಯ ಮುಂದೆ ತಂದರು ಎನ್ನುವುದು ಸರಿಯಾಗಿ ಅರ್ಥವಾಗುತ್ತಿಲ್ಲ. ಹೀಗೆ ಈ ಒಂದೇ ಒಂದು ವಿಷಯವನ್ನು ತಂದು ಅದನ್ನು ಪುಷ್ಟೀಕರಿಸದೆ ಇದ್ದರೆ ಅದರಲ್ಲಿ ಏನೇನೂ ಹುರುಳಿಲ್ಲ ಎಂದು ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—Now I have got one or two names that have been suggested to me. I propose to allow this discussion till 3–30 P.M. There are two names. I give each member 10 minutes or 20 minutes in all. If there is nothing more to be mentioned, I will call upon Sri Venkatagiriyappa and close.

ಶ್ರೀ ಪಿ. ವೆಂಕಟಗಿರಿಯಪ್ಪ.—ಸ್ವಾಮಿ, ಕಳೆದ ನಾಲ್ಕು ದಿವಸಗಳಿಂದ ಈ ಮಾನ್ಯ ಸಭೆಯಲ್ಲಿ ಮಂತ್ರಿಮಂಡಲದ ಮೇಲೆ ವಿರೋಧಪಕ್ಷದ ನಾಯಕರಾದ ಶ್ರೀ ಮಾನ್ ಶಿವಪ್ಪನವರು ಮಂಡಿಸಿರುವ ಅವಿಶ್ವಾಸ ನಿರ್ಣಯದ ಮೇಲೆ ನಡೆಯುತ್ತಿರುವ ......

[MR. DEPUTY SPEAKER in the Chair.]

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ಯೂರಿಟಿ ಪರಿಶುದ್ಧತೆ ವಿಷಯ ಮಾತನಾಡಿದರು, ಶ್ರೀ ಮಾನ್ಯ ಸಿದ್ದಯ್ಯನವರು, ಇವರು ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಬಿ. ಟಿ. ಸಿ. ಯ ಜನರಲ್ ಮ್ಯಾನೇಜರ್ ಕೆಲಸಕ್ಕೆ ಪ್ರಯತ್ನ ಮಾಡಿದರು, ಅದು ಪರಿಶುದ್ಧತೆಯೆ ?

Sri D. M. SIDDIAH.—I rise to a point of order. My Hon'ble friend Sri Muckannappa charged me that I went and requested Sri Hanumanthaiah, the then Chief Minister to give the Chairmanship of BTC. Since I became a Congressman for the last 25 years, I have not made use of the Government, beginning from Mr. Reddy's Ministry right uptill now for my personal purpose. I have not, as Congressman, got a single pie ; I have not taken a piece of land. When so may Ministers offered me appointments, in fact I refused.

****Expunged as ordered by the Chair.

Mr. DEPUTY SPEAKER.—While speaking on the point of order, the Hon'ble Member gave a personal explanation. There is no point of order in it.

Sri K LAKKAPPA (Hebbur).—I raise another point of order. The point of order is this : The Hon'ble Member Sri Siddiah made several allegations against the Opposition Members, unfounded allegations. * * *

Mr. DEPUTY SPEAKER.—There is no point of order. Whatever allegations have been made will not go into the record. They will be expunged.

ಶ್ರೀ ಪಿ. ವೆಂಕಟಗಿರಿಯಪ್ಪ.—ಮೈಸೂರು ರಾಜಕೀಯದಲ್ಲಿ ಇದು ಬಹಳ ಪ್ರಾಮುಖ್ಯವಾದ ಘಟನೆ. ಈ ಅವಿಶ್ವಾಸ ನಿರ್ಣಯವನ್ನು ಮೊದಲಬಾರಿ ವಿರೋಧಪಕ್ಷದವರಲ್ಲದೆ ಹತ್ತು ಜನರು, ನೂರಕ್ಕೆ ನೂರು ಕಾಂಗ್ರೆಸ್ ಸದಸ್ಯರು, ಡೆಲ್ಲಿಗೆ ಪ್ರಯಾಣ ಬೆಳಸಿ ಆಪಾದನೆ ಪಟ್ಟಿಯನ್ನು ರಾಷ್ಟ್ರಾಧ್ಯಕ್ಷರಿಗೆ ಸಲ್ಲಿಸಿದ್ದಾರೆ. ಅಲ್ಲದೆ ಇನ್ನೊಂದು ಹೊಸ ಸುದ್ದಿಯನ್ನು ಶ್ರೀ ಮಾನ್ ಸಿದ್ದಯ್ಯನವರಿಗೆ ತಿಳಿಸ ಬಯಸುತ್ತೇನೆ. ಇನ್ನು ಕೆಲವೇ ದಿವಸಗಳಲ್ಲಿ ಇನ್ನೂ ಮೂವತ್ತು ಜನರು ನೂರಕ್ಕೆ ನೂರರಷ್ಟು ಕಾಂಗ್ರೆಸ್ ಸದಸ್ಯರು ಈ ಮಂತ್ರಿಮಂಡಲದ ಮೇಲಣ ಆಪಾದನೆಗಳ ಪಟ್ಟಿಯನ್ನು ಒಪ್ಪಿಸುತಾರೆ. ಹೀಗೆ ಕಾಂಗ್ರೆಸ್ ಪಕ್ಷದವರೇ ಕಾಂಗ್ರೆಸ್ ಆಡಳಿತದ ಬಗ್ಗೆ ಆಪಾದನೆಗಳ ಪಟ್ಟಿಯನ್ನು ರಾಷ್ಟ್ರಾಧ್ಯಕ್ಷರಿಗೆ ಕೊಂಡೊಯ್ಯುತ್ತಿರುವ ಹಿನ್ನೆಲೆಯಲ್ಲಿ ವಿರೋಧಪಕ್ಷದ ನಾವು ಈ ಅವಿಶ್ವಾಸ ನಿರ್ಣಯವನ್ನು ತಂದಿರುವುದು ಎಲ್ಲ ದೃಷ್ಟಿಯಿಂದಲೂ ಸೂಕ್ತ ಮತ್ತು ಸಕಾಲಿಕವಾಗಿದೆ. ಈ ನಿರ್ಣಯವನ್ನು ವಿರೋಧಿಸಿ ಶ್ರೀಗಳಾದ ಬಸಪ್ಪನವರು, ಹೆಗ್ಗಡೆಯವರು, ಆರ್. ಎಂ. ಪಾಟೀಲರು, ಸಿದ್ದಯ್ಯನವರು ಮಾತನಾಡಿದ್ದಾರೆ. ಶ್ರೀ ಮಾನ್ ಪಾಟೀಲ್ ಅವರು ತಮ್ಮ ಕಾಲವನ್ನು ಬಹು ಮಟ್ಟಿಗೆ ಪಬ್ಲಿಕ್ ಪ್ರಾಸೆಕ್ಯೂಟರಾಗಿ ಕಳೆದಿದ್ದಾರೆ. ಸರಕಾರದ ವಕೀಲರಾಗಿ ಸರಕಾರದ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕವರು ಎಂದು ಹೆಸರಾಗಿದ್ದಾರೆ. ಈ ದಿವಸ ಶ್ರೀ ನಿಜಲಿಂಗಪ್ಪನವರ ಕೃಪಾಶ್ರಯದಿಂದ ಪೋಲೀಸ್ ಮಂತ್ರಿಯಾಗಿ ಸರಕಾರದ ಮೇಲಿನ ಆಪಾದನೆಗಳನ್ನು ತಿರಸ್ಕರಿಸಿ ಇದರಲ್ಲಿ ತಿರುಳಿಲ್ಲವೆಂದು ಅವರ ನಿಲುವನ್ನು ಸಮರ್ಥಿಸುವುದಕ್ಕೆ ಬಹಳ ಜಾಣ್ಮೆಯಿಂದ ಪ್ರಯತ್ನಮಾಡುತ್ತಿದ್ದಾರೆ. ಈ ದಿವಸ ಶ್ರೀಮಾನ್ ಆರ್. ಎಂ. ಪಾಟೀಲರವರಿಗೆ ಒಂದು ವಿಷಯವನ್ನು ತಿಳಿಸಬೇಕೆಂದು ಇಚ್ಛಿಸುತ್ತೇನೆ ಅದೇನೆಂದರೆ, ಅವರು ಆಕಾಶವಾಣಿಯಲ್ಲಿ ಆಗಾಗ ಭಾಷಣ ಮಾಡುವಾಗ ಗಂಭೀರವಾದ ಗಡಸು ಧ್ವನಿಯಲ್ಲಿ ಮಾತನಾಡುತ್ತಾರೆ. ಇತ್ತೀಚೆಗೆ ಅವರು ಅಧಿಕಾರಕ್ಕೆ ಬಂದ ಮೇಲೆ ಶಾಂತಿ ಪಾಲನೆಯ ಕೆಲಸ ಬಹಳ ಚೆನ್ನಾಗಿ ನಡೆದಿದೆ, ದೇಶದಲ್ಲಿ ಕ್ರೈಮ್ಸ್, ಎಂದರೆ ಅಪರಾಧಗಳು ಬಹಳ ಕಡಿಮೆಯಾಗಿವೆ, ಕಳ್ಳಕಾಕರ ಬಾಧೆ ಕಡಿಮೆಯಾಗಿದೆ ಎಂದು ಹೇಳಿದ್ದಾರೆ. ಆದರೆ ಒಂದು ಪ್ರಶ್ನೆ ಕೇಳುತ್ತೇನೆ. ಈ ದಿವಸ ಪೋಲೀಸ್ ಇಲಾಖೆ ಮೇಲ್ಪಟ್ಟ ಅಧಿಕಾರಿಗಳ ಕೈಯಲ್ಲಿಲ್ಲ, ಅವರು ಸ್ವತಂತ್ರರಾಗಿದ್ದಾರೆ. ಮುಖ್ಯವಾಗಿ, ಗ್ರಾಮಾಂತರಗಳಲ್ಲಿ ನೋಡುವುದಾದರೆ, ಅಲ್ಲಿನ ಪೋಲೀಸರು ಅಲ್ಲಿನ ಶ್ರೀಮಂತರ ಕೈಗೊಂಬೆಗಳಾಗಿ, ಅಲ್ಲಿ ಏನು ಅಕೃತ್ಯಗಳು ನಡೆದರೂ ಏನು ಖೂನಿಗಳು ನಡೆದರೂ ಕೂಡ ಅವು ಹೊರಗೆ ಬರುವುದಿಲ್ಲ. ಆ ಶ್ರೀಮಂತರು ಪೋಲೀಸರ ಬೆಂಬಲದಿಂದ ಸಾಮಾನ್ಯ ಜನರನ್ನು ತುಳಿಯುತ್ತಿದ್ದಾರೆ. ನನ್ನಲ್ಲಿ ಕೆಲವು ಉದಾಹರಣೆಗಳಿವೆ, ಆದರೆ ಹೆಸರುಗಳನ್ನು ಸಭೆಯಲ್ಲಿ ಹೇಳಬಾರದೆಂದು ಅಧ್ಯಕ್ಷರು ತಿಳಿಸಿದ್ದಾರೆ. ಬೇಕಾದರೆ ಒಂದೆರಡು ಹೆಸರುಗಳನ್ನು ಕೊಡುವುದಕ್ಕೂ ಸಿದ್ಧನಾಗಿದ್ದೇನೆ. ಕೋಲಾರ ಜಿಲ್ಲೆಯಲ್ಲಿ ಒಂದು ಹಳ್ಳಿಯಲ್ಲಿ ಒಬ್ಬ ಶ್ರೀಮಂತ ಕಾಂಗ್ರೆಸಿಗರು ಅವರೇ ಒಂದು ಕೋರ್ಟು ಮಾಡಿಕೊಂಡಿದ್ದಾರೆ. ಅವರ ಮಾತಿಗೆ ವಿರೋಧವಾಗಿ ಯಾರಾದರೂ ಹೋದರೆ ಅವರನ್ನು ತೊಡೆದು ಹಾಕುತ್ತಾರೆ. ಒಬ್ಬರು ಅವರ ಮಾತಿಗೆ ವಿರೋಧವಾಗಿ ನಡೆದರೆಂದು, ಅವರಿಗೆ ಆ ಗ್ರಾಮದಲ್ಲಿ ಇಪ್ಪತ್ತು ಮೂವತ್ತು ಎಕರೆ ಜಮೀನಿದ್ದರೂ ಕೂಡ ಅವರನ್ನು ಅಲ್ಲಿಂದ ಹೊರದೂಡಿ ತಾವೇ ಅವರ ಜಮೀನನ್ನು ಸಾಗುವಳಿ ಮಾಡಿದ್ದಾರೆ. ಹಾಗೆ ತೊಂದರೆಗೀಡಾದವರು ಗೃಹಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಅದನ್ನು ಇವರು ಐ.ಜಿ.ಪಿ. ಗೆ ಕಳುಹಿಸಿದರು, ಅವರು ಡೆಪ್ಯುಟಿ ಐ.ಜಿ.ಪಿ ಗೆ ಕಳುಹಿಸಿದರು. ಅವರು ಅದನ್ನು ಎಸ್.ಪಿ.ಗೆ ಕಳುಹಿಸಿದರು. ಅವರು ಪೋಲೀಸ್ ಇನ್‌ಸ್ಪೆಕ್ಟರಿಗೆ ಕಳುಹಿಸಿದರು ಕೊನೆಗೆ ಅದನ್ನು ಕಸದ ಬುಟ್ಟಿಗೆ ಹಾಕಿದರು. ನಾನಾದರೂ ಹೇಳುತ್ತೇನೆ. ಶಾಂತಿ ಮತ್ತು ಕಾನೂನು ಸರಿಪಾಲನೆ ಬರಿಯ

***Expunged as ordered by the Chair.

(ಶ್ರೀ ಪಿ. ವೆಂಕಟಗಿರಿಯಪ್ಪ)

ಬೆಂಗಳೂರು ನಗರದಲ್ಲಿ ಪೋಲೀಸರು ರಸ್ತೆಗಳಲ್ಲಿ ನಿಂತು ಕೈಕೋರಿಸುವುದರಲ್ಲಿಲ್ಲ. ಹಳ್ಳಿಗಾಡಿನಲ್ಲಿ ಪೋಲೀಸರು ಶ್ರೀಮಂತರ ಏಜೆಂಟುಗಳಾಗಿ ಶ್ರೀಮಂತರಿಗಾಗದೇಯಿರುವವರನ್ನು ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಹೊಡೆದಿರುವ ಸಂದರ್ಭಗಳನ್ನು ತೋರಿಸಿದ್ದೇನೆ. ಇವರು ಶ್ರೀಮಂತರ ಬಾಲಬಡುಕರಾಗಿ ಸಾಮಾನ್ಯಜನರನ್ನು ತುಳಿಯುತ್ತಿದ್ದಾರೆ. ಶಾಂತಿ ಪಾಲನೆ ಮಾಡುತ್ತಿರುವುದು ಬೆಂಗಳೂರು ನಗರದಲ್ಲಿ ವಾಹನಗಳಿಗೆ ಕೈತೋರಿಸುವುದು ಹೊರತು ಸಾಮಾನ್ಯ ಜನರ ಹಿತವನ್ನು ರಕ್ಷಣೆ ಮಾಡುವುದಕ್ಕೆ ಈ ಸರಕಾರಕ್ಕೆ ಶಕ್ತಿಯಿಲ್ಲ.

ಹರಿಜನರ ಬೆಂಬಲ ಪಡೆಯುವುದಕ್ಕೆ ಇವರು ಬಹಳ ಮಾತನಾಡುತ್ತಾರೆ. ಹರಿಜನರು ದೇವ ಸ್ಥಾನಗಳಿಗೆ ಪ್ರವೇಶ ಮಾಡಬಹುದು, ಇದು ಅವರ ಸಾಮಾನ್ಯ ಹಕ್ಕು ಎಂದು ಹೇಳುತ್ತಾರೆ. ಎಷ್ಟು ಗ್ರಾಮಗಳಲ್ಲಿ ಹರಿಜನರನ್ನು ದೇವಸ್ಥಾನಗಳಲ್ಲಿ ಬಿಡಲಿಕ್ಕೆ ಕಾಂಗ್ರೆಸ್ ಸರ್ಕಾರಕ್ಕೆ ಸಾಧ್ಯವಾಗಿದೆ ಎಂದು ಕೇಳುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಹರಿಜನರಿಗೆ ಮುಂದುವರಿದ ಜನ ಚಿತ್ರ ಹಿಂಸೆ ಕೊಡುತ್ತಿದ್ದಾರೆ. ಪೋಲೀಸಿನವರು ಸಹ ಹರಿಜನರ ಪರವಾಗಿ ಸಹಾಯ ಮಾಡುವುದಿಲ್ಲ. ಪೋಲೀಸಿನವರು ಶ್ರೀಮಂತರ ಪರವಾಗಿ ಇದ್ದಾರೆ. ಹಿಂದೆ ಹರಿಜನರು ಯಾವ ರೀತಿ ಕೆಳಮಟ್ಟದಲ್ಲಿದ್ದರೋ ಅದೇ ಮಟ್ಟದಲ್ಲಿ ಅದೇ ರೀತಿಯಾಗಿ ಇಂದಿಗೂ ಹಾಗೆಯೇ ಇದ್ದಾರೆ. ಬಡ ಹರಿಜನರು ಹಳ್ಳಿಗಳಲ್ಲಿ ವಾಸಮಾಡಲು ಸಾಧ್ಯವಿಲ್ಲದಾಗಿದೆ. ಹಳ್ಳಿಯನ್ನು ಬಿಟ್ಟುಕೊಟ್ಟು ಪಟ್ಟಣಕ್ಕೆ ಬಂದು ವಾಸ ಮಾಡುತ್ತಿರುವ ಅನೇಕ ನಿದರ್ಶನಗಳಿವೆ. ಮುಖ್ಯವಾಗಿ ಒಂದು ಮಾತನ್ನು ಗೃಹ ಮಂತ್ರಿಗಳಿಗೆ ತಿಳಿಸಲು ಬಯಸುತ್ತೇನೆ. ಪೋಲೀಸ್ ಇಲಾಖೆಯನ್ನು ಪುನರ್‌ವ್ಯವಸ್ಥೆ ಮಾಡಿ ಹಳ್ಳಿಗಳಲ್ಲಿ ವಾಸ ಮಾಡುವ ಬಡ ರೈತರಿಗೆ ರಕ್ಷಣೆ ಕೊಡುವ ಹಾಗೆ ಒಂದು ವ್ಯವಸ್ಥೆ ಮಾಡಬೇಕು ಅದು ನಿಮಗೆ ಸಾಧ್ಯವಿಲ್ಲದಿದ್ದರೆ ಮಂತ್ರಿಗಳು ರಾಜೀನಾಮೆ ಕೊಟ್ಟು ಹೋಗಬೇಕು ಎಂದು ಒತ್ತಾಯ ಪೂರ್ವಕ ಹೇಳಲು ಬಯಸುತ್ತೇನೆ.

ಶ್ರೀಮಾನ್ ಜಿ. ಮರುಳಪ್ಪನವರು ಶಿವಪ್ಪನವರು ಮಾತನಾಡಿದ್ದಕ್ಕೆ ಮಂತ್ರಿಗಳಿಗೆ ಬಹಳ ಕೋಪ ಬಂದಿದೆ. ಅವರು ಭಾಷಣ ಮಾಡುತ್ತಿದ್ದ ಕಾಲದಲ್ಲಿ ಮಧ್ಯೆ ಮಧ್ಯೆ ಎದ್ದು ಏನಾದರೂ ಕೇಳುತ್ತಿದ್ದರು, ಅವರ ಮುಖ ನೋಡಿದರೆ ಭಯ ಬಂದಹಾಗೆ ಇದ್ದಿತು. ಮಂತ್ರಿಗಳು ಕೋಪ ಮಾಡಿದರೆ ಯಾವ ಸಮಸ್ಯೆ ಬಗೆಹರಿಯುವುದಿಲ್ಲ. ಶ್ರೀ ಜಿ. ಮರುಳಪ್ಪನವರು ಮಾತನಾಡುತ್ತಾ ಖಂಡಾಯ ಮಂತ್ರಿಗಳ ಮೇಲೆ ಬಹಳ ಟೀಕೆ ಮಾಡಿದ್ದಾರೆ. ಕೃಷ್ಣಪ್ಪನವರನ್ನು ನಾನು ಇಷ್ಟೇ ಕೇಳಿಕೊಳ್ಳುತ್ತೇನೆ. ಟೀಕೆ ಮಾಡಿದರೆ ಕೋಪ ಮಾಡಬೇಡಿ. ಈ ಅವಿಶ್ವಾಸ ನಿರ್ಣಯದ ಮೇಲೆ ನಡೆದ ಚರ್ಚೆಗೆ ಉತ್ತರ ಕೊಡುವಾಗ್ಗೆ ಎಲ್ಲ ವಿವರ ಕೊಟ್ಟು ಉತ್ತರ ಕೊಡಬೇಕು. ಈ ಟೀಕೆಯಲ್ಲಿ ಏನಾದರೂ ಅರ್ಧ ಭಾಗ ನಿಜವಾಗಿದ್ದರೆ ಕೃಷ್ಣಪ್ಪನವರು ಮಂತ್ರಿ ಸ್ಥಾನದಲ್ಲಿ ಇರಬಾರದು ಎಂದು ತಿಳಿಸಲು ಬಯಸುತ್ತೇನೆ. ಕೃಷ್ಣಪ್ಪನವರು ಮತ್ತು ನಾನು ಒಂದೇ ಜಿಲ್ಲೆಯವರು. ನಾವಿಬ್ಬರೂ ಬಹಳ ದಿನ ಸ್ನೇಹಿತರಾಗಿದ್ದೆವು. ಆದುದರಿಂದ ನಾನು ಅವರಿಗೆ ಒಂದು ಸಲಹೆ ಮಾಡಲು ಬಯಸುತ್ತೇನೆ. ದೇಶದ ಹಿತ ದೃಷ್ಟಿಯಿಂದ ಮಂತ್ರಿಗಳ ಮೇಲೆ ಪ್ರಬಲ ಆಪಾದನೆ ಕೇಳಿದ ಮೇಲೆ ಅದರಲ್ಲಿ ಅರ್ಧ ಭಾಗ ನಿಜವಿದ್ದರೆ ಮಂತ್ರಿಮಂಡಲ ರಾಜೀನಾಮೆ ಕೊಡಬೇಕೆಂದು ಹೇಳುತ್ತೇನೆ. ದೇಶದ ಹಿತದೃಷ್ಟಿಯ ಮುಂದೆ ನೀವು ದೊಡ್ಡವರಲ್ಲ. ಜನರ ಹಿತದೃಷ್ಟಿಯಿಂದ ಯಾರೇ ಆಗಲಿ ಯಾವದೇ ಸ್ಥಾನದಲ್ಲಿರಲಿ ಅಂಥ ಅಧಿಕಾರ ಸ್ಥಾನ ಬಿಟ್ಟು ಕೊಡಲಿಕ್ಕೆ ಯಾವಾಗಲೂ ತಯಾರಾಗಿರಬೇಕು ಎಂದು ತಿಳಿಸಲು ಬಯಸುತ್ತೇನೆ.

ಇನ್ನೊಂದು ವಿಷಯ. ಹತ್ತು ಜನ ಕಾಂಗ್ರೆಸ್ ಪಕ್ಷದ ಸದಸ್ಯರು ದಿಲ್ಲಿಗೆ ಹೋಗಿ ಮಂತ್ರಿ ಮಂಡಲದ ವಿರುದ್ಧ ಚಾರ್ಜ್‌ಷೀಟ್ ಕೊಟ್ಟು ಬಂದಿದ್ದಾರೆ. ಅವರು ಈಗ ಸಭೆಯಲ್ಲಿ ಸಪ್ಪೆ ಮುಖ ಮಾಡಿಕೊಂಡು ಸುಮ್ಮನೆ ಕುಳಿತುಕೊಂಡಿದ್ದಾರೆ. ತಮ್ಮ ಕ್ಷೇತ್ರಗಳಲ್ಲಿ ಅವರು ಸರ್ಕಾರದ ವಿರೋಧವಾಗಿ ಪ್ರಚಾರ ನಡೆಸುತ್ತಾರೆ. ಆದರೆ ಇಲ್ಲಿ ಸಭೆಯಲ್ಲಿ ಮಾತ್ರ ಮಾತನಾಡದೆ ಸುಮ್ಮನೆ ಇದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಕೈರಾನ್ ಅಂಥವರು ಇದ್ದಾರೆ. ಕೈರಾನ್ ಗತಿ ಏನಾಯಿತು ಎಲ್ಲರಿಗೂ ಗೊತ್ತಿದೆ. ದಿಲ್ಲಿಗೆ ಹೋಗಿ ದಿಟ್ಟತನದಿಂದ ಆಪಾದನೆಗಳನ್ನು ಕೊಟ್ಟು ಬಂದಿದ್ದಾರೆ. ಯಾಕೆಂದರೆ ನಮ್ಮ ಜನ ಕೆಚ್ಚೆದೆಯ ಜನ. ಅನ್ಯಾಯಕ್ಕೆ ಜಗ್ಗುವವರಲ್ಲ. ಹೆದರುವ ಜನ ಅಲ್ಲ. ಅವರು ಈಗ ಮಾತನಾಡಬೇಕೆಂದು ತಾವು ಮಾಡಿರುವ ಆಪಾದನೆಗಳ ವಿವರ ತಿಳಿಸಬೇಕೆಂದು ವಿನಯದಿಂದ ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಬಹಳ ವಿಷಾದದಿಂದ ಹೇಳಬೇಕಾಗಿದೆ. ರವೆನ್ಯೂ ಮಂತ್ರಿಗಳಾದ ಶ್ರೀ ಕೃಷ್ಣಪ್ಪನವರನ್ನು ಬಹಳ ದಿನಗಳಿಂದ ನಾನು ಬಲ್ಲೆ. ಅವರು ಮಧ್ಯಮ ಕುಟುಂಬ ವರ್ಗಕ್ಕೆ ಸೇರಿದವರು. ಅವರು ಶ್ರೀಮಂತರಲ್ಲ. ಅವರು ರೆವೆನ್ಯೂ ಮಂತ್ರಿಯಾದ ಮೇಲೆ ದೇಶದಲ್ಲಿ

ಭೂಸುಧಾರಣೆ ಕೆಲಸ ಜಾಸ್ತಿ ಆಗಬಹುದು ಎಂದು ನಾನು ತಿಳಿದುಕೊಂಡಿದ್ದೆನು. ಅವರು ಮಂತ್ರಿಯಾಗುವುದಕ್ಕೆ ಮುಂಚೆ ಸಾಮಾನ್ಯ ಬಡ ಜನರ ಸಂಪರ್ಕ ಅವರಿಗೆ ಹೆಚ್ಚಾಗಿ ಇದ್ದಿತು. ಬಡವರ ಕಷ್ಟಸುಖ ಅವರು ಚೆನ್ನಾಗಿ ತಿಳಿದುಕೊಂಡಿದ್ದರು. ಆದರೂ ಕೂಡ ಅವರು ರೆವಿನ್ಯೂ ಮಂತ್ರಿಗಳಾದ ಮೇಲೆ ಭೂಸುಧಾರಣಾ ಕಾನೂನನ್ನು ಜಾರಿಗೆ ತರುವುದನ್ನು ಅನಾವಶ್ಯಕವಾಗಿ ವಿಳಂಬ ಮಾಡುತ್ತಿದ್ದಾರೆ. ನಾನು ಒಂದು ಮಾತು ಕೇಳುತ್ತೇನೆ. ಭೂಸುಧಾರಣ ಕಾನೂನು ಜಾರಿಗೆ ತರುವುದು ಕಾಂಗ್ರೆಸ್ಸಿನ ಆವದಿ ಅಧಿವೇಶನದ ನಿರ್ಣಯವಾದ ಸಮಾಜವಾದಕ್ಕೆ ವಿರೋಧ ವಾಗಿದೆಯೇ? ಎಲ್ಲಾ ಸಭೆಗಳಲ್ಲಿ ದಿಲ್ಲಿ ನಾಯಕರಿಂದ ಹಿಡಿದು ಎಲ್ಲರೂ ಸಮಾಜವಾದವೇ ನಮ್ಮ ಗುರಿ ಸಮಾಜವಾದೀ ಸಮಾಜ ರಚನೆ ಮಾಡಬೇಕು ಎಂದು ಹೇಳುತ್ತಲೇ ಇದ್ದಾರೆ. ಭೂಮಿ ಉಳು ವವನೇ ಭೂಮಿಯ ಒಡೆಯನಾಗಬೇಕು ಎಂದು ಉದ್ದುದ್ದ ಭಾಷಣಗಳನ್ನು ಘೋಷಣೆಗಳನ್ನು ಮಾಡುತ್ತೀರಿ. ಎಲ್ಲ ರೀತಿಯಿಂದ ವಿಚಾರಗಳನ್ನು ಜನಗಳ ಮುಂದೆ ನೀವೇ ಇಡುತ್ತಿದ್ದೀರಿ. ಇಷ್ಟು ಹೇಳುತ್ತಿದ್ದರೂ ಕೂಡ ಇದುವರೆಗೆ ಭೂಸುಧಾರಣೆ ಕಾನೂನು 1962 ರಲ್ಲಿ ಪಾಸಾಗಲಿದ್ದರೂ ಕೂಡ ಜಾರಿಗೆ ಬರಲಿಲ್ಲ. ಒಂದೆರಡು ತಿದ್ದುಪಡಿ ತರಬೇಕಾಗಿದೆ ಎಂದು ಹೇಳುತ್ತಾ ಕಾಲ ವಿಳಂಬ ಮಾಡುತ್ತಿರುವುದನ್ನು ನೋಡಿದರೆ ಹಿಂದಿನ ಕೃಷ್ಣಪ್ಪನವರು ಈಗ ಇಲ್ಲ ಅವರು ಬದಲಾವಣೆ ಯಾಗಿದ್ದಾರೆ. ದೊಡ್ಡ ದೊಡ್ಡ ಜಮೀನುದಾರರ ಭೂಮಾಲೀಕರ ಬೆಂಬ ಲಿಗರಾಗಿ ಅವರ ಕೈಗೊಂಬೆಯಾಗಿ ಕೆಲಸ ಮಾಡುತ್ತಾ ಅವರ ಸ್ನೇಹಿತರಾಗಿದ್ದಾರೆ ಎಂದು ಅನ್ನಿಸು ತ್ತದೆ. ಇದರಿಂದ ಬಡ ರೈತರ ವಿಶ್ವಾಸ ಉಳಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂದು ತಿಳಿಸಬಯಸು ತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಭೂಸುಧಾರಣೆ ಕಾನೂನು ಜಾರಿಗೆ ತರುವುದಕ್ಕಾಗಿ ಸೆಂಟ್ರಲ್ ಗವರ್ನಮೆಂಟ್ ಒಂದೆರಡು ಅಮೆಂಡ್‌ಮೆಂಟ್ ತರಬೇಕಾಗಿತ್ತೆಂದು ಇಷ್ಟು ಡಿಲೇ ಆಗುತ್ತಿದೆ. ಕೇಂದ್ರ ಸರ್ಕಾರದವರು ಕಾನೂನು ಬದಲಾವಣೆ ಮಾಡಬೇಕಾಗಿದೆ. ಇದೇ ಕಾರಣದ ಮೂಲಕ ಮದ್ರಾಸ್ ಕಾನೂನು ಸಹ ಜಾರಿಗೆ ಬರಲಿಲ್ಲ.

The Madras Act was struck down, the Travancore Act was struck down and the Centre had to pass an amendment to the Constitution. This was done six months back. We are now going to bring an amendment and execute the Act. ಅದಕ್ಕಾಗಿ ಕಾನ್‌ಸ್ಟಿಟ್ಯೂಷನ್ ಬದಲಾವಣೆ ಮಾಡಬೇಕಾ ಗಿತ್ತು. ನಾವು ಏನಾದರೂ ಕಾನೂನು ಜಾರಿ ಮಾಡಲು ಪ್ರಯತ್ನ ಪಟ್ಟಿದ್ದರೆ ಹೈಕೋರ್ಟು ಸ್ಟೇ ಆರ್ಡರ್ ಕೊಡುತ್ತಿತ್ತು. ಈಗ ತಿದ್ದುಪಡಿಯಾಗಿದೆ. ಈ ಅಧಿವೇಶನದಲ್ಲಿ ಅದನ್ನು ತರುತ್ತೇವೆ. ನಾನು ಶ್ರೀಮಂತರ ಜಮೀನುದಾರರ ಸಹಾಯಕನಲ್ಲ. ಜಮೀನುದಾರರು ಹೊರಟುಹೋಗಿದ್ದಾರೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಈಗಾಗಲೇ ಕೇಂದ್ರ ಸರ್ಕಾರ ತಿದ್ದುಪಡಿ ಮಾಡಿ ಆರು ತಿಂಗಳು ಆಯಿತು ನಿಧಾನವಾಗಿದೆ ಎಂಬುದು ನಿಮಗೆ ಗೊತ್ತಿದೆ. ಇದು ಬಹಳ ಪ್ರಾಮುಖ್ಯವಾದ ಕೆಲಸ. ಇಷ್ಟು ಆತುರವಿದ್ದರೂ ಕೂಡ ಕಳೆದ ಆರು ತಿಂಗಳುಗಳಲ್ಲಿ ಶಾಸನಸಭೆ ಕರೆಯದೆ ಇರುವುದಕ್ಕೆ ಕಾರ ಣವೇನು ಎಂದು ಕೇಳುತ್ತೇನೆ. ಮೊದಲು ಇದ್ದ ಮನೋಭಾವನೆ ಈಗ ಕೃಷ್ಣಪ್ಪನವರಲ್ಲಿ ಇಲ್ಲ. ಇಲ್ಲದಿದ್ದರೆ ವಿಳಂಬ ಮಾಡುವುದಕ್ಕೆ ಕಾರಣವೇನು?

3-30 P.M.

ನಾನು ಈ ಹಿಂದೆಯೇ ಒಂದು ವಿಚಾರವನ್ನು ನಮ್ಮ ಮುಖ್ಯ ಮಂತ್ರಿಗಳಲ್ಲಿ ಕೇಳಿದ್ದೆನು. ಅದೇನೆಂದರೆ-ನಮ್ಮ ರಾಜ್ಯದಲ್ಲಿ ಈಗಾಗಲೇ ಟೆನನ್ಸಿ ಮತ್ತು ಇನಾಂ ರದ್ದಿಯಾತಿ ಶಾಸನಗಳು ಜಾರಿಗೆ ಬಂದಿವೆ ಆದರೆ ಅವುಗಳ ಪರಿಣಾಮವೇನಾಗಿದೆ ಇನಾಂ ಅಬಾಲಿಷನ ಆಕ್ಟಿನ ಪರಿಣಾಮ ವೇನಾಗಿದೆ. ಟನೆನ್ಸಿ ಆಕ್ಟಿನಿಂದ ರೈತರಿಗೇನು ಉಪಕಾರವಾಗಿದೆ ಎಂಬುದನ್ನೆಲ್ಲಾ ತಿಳಿದುಕೊ ಳ್ಳಲು ಒಂದು ಸಮಿತಿಯನ್ನು ನೇಮಕ ಮಾಡಿ ಎಂಬುದಾಗಿ ಕೇಳಿಕೊಂಡಿದ್ದೆನು. ಸರ್ಕಾರದವರು ದೇಶದಲ್ಲಿ ಸುಮ್ಮನೆ ಹೀಗೆಲ್ಲಾ ಕಾನೂನುಗಳನ್ನು ಜಾರಿಗೆ ತಂದರೆ ಅದರಿಂದೇನೂ ಪ್ರಯೋಜನ ವಾಗುವುದಿಲ್ಲ. ದೇಶದಲ್ಲಿರತಕ್ಕ ಬಡ ರೈತನ ಬಗ್ಗೆ ಹೋರಾಟ ಮಾಡತಕ್ಕ ಜನ ಯಾರೂ ಕಾಂಗ್ರೆಸ್ಸಿ ನವರನ್ನು ಬಿಟ್ಟಿರಲ್ಲವೇನೋ ಎಂಬಂತೆ ಇವರಿಲ್ಲಿ ಮಾತನಾಡುತ್ತಿರುತ್ತಾರೆ. ಆದರೆ ಅವರು ಕಾರ್ಯಾಚರ ಣೆಯಲ್ಲಿ ಮಾಡತಕ್ಕ ಕೆಲಸವಿದೇನು ಎಂದು ನಾನು ಕೇಳಬೇಕಾಗಿದೆ? ಒಟ್ಟಿನಲ್ಲಿ ಹೇಳುವುದಾದರೆ ಸರ್ಕಾರದವರ ವರ್ತನೆ ಬಹಳ ವಿಚಿತ್ರವಾಗಿದೆ. ಇವರು ಜನರು ಕೇಳದೆ ಇರತಕ್ಕ ಯೋಜನೆಗಳ ನ್ನೆಲ್ಲಾ ಮಾಡುತ್ತಾರೆ. ಆದರೆ ಅವರು ಹೇಳತಕ್ಕದ್ದೊಂದನ್ನೂ ಅವರು ಸರಿಯಾಗಿ ಮಾಡುವುದಿಲ್ಲ. ಉದಾ:-ಜನರು ಕೇಳದಿದ್ದರೂ ಕೋಲಾರ ಜಿಲ್ಲೆಯ 87 ರೂಟುಗಳನ್ನು ರಾಷ್ಟ್ರೀಕರಣ ಮಾಡುವು

(ಶ್ರೀ ಪಿ. ವೆಂಕಟಗಿರಿಯಪ್ಪ)

ದಾಗಿ ಹೇಳಿದರು ನೋಟಿಫಿಕೇಷನ್ನೂ ಆಯಿತು. ಬಸ್ಸುಗಳ ರಾಷ್ಟ್ರೀಕರಣವಾಗಬೇಕೆಂದು ಜನರಾರು ಚಳವಳಿ ಹೂಡಲಿಲ್ಲ. ನೋಟಿಫಿಕೇಷನ್ ಜಾರಿಯಾದ ನಂತರ ಕೋಲಾರದಲ್ಲಿ ಒಂದು ಡಿವಿಜನ್ ಮಾಡಬೇಕೆಂದು ಹೇಳಿ ಅಲ್ಲಿ ಒಂದು ವರ್ಕ್‌ಷಾಪ್ ಇತ್ಯಾದಿಗಳಿಗಾಗಿ ಸುಮಾರು 3 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಡಗಳನ್ನು ಕಟ್ಟಿಬಿಟ್ಟರು. ಆದರೆ ಈಗ ಇಷ್ಟೆಲ್ಲಾ ಆದಮೇಲೆ ಏನು ಹೇಳುತ್ತಿದ್ದಾರೆಂದರೆ ಕೋಲಾರ ಜಿಲ್ಲೆಯ ಜನರು ಬಹಳ ಬಡವರು ಅದಕ್ಕಾಗಿ ಇದನ್ನು ಸ್ವಲ್ಪ ನಿಧಾನವಾಗಿ ಮಾಡೋಣ ಎಂದು ಹೇಳುತ್ತಿದ್ದಾರೆ. ಈ ಉದ್ದೇಶ ತಮಗೆ ಬೇಕಾದವರಿಗೆಲ್ಲಾ ಬಸ್ ಲೈಸನುಗಳನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಹಾಗೆ ಇವರಿಗೆ ಮನಸ್ಸಿಲ್ಲದ ಮೇಲೆ ಅಲ್ಲಿರತಕ್ಕ ಕಟ್ಟಡಗಳನ್ನಾದರೂ ಏಕೆ ಬೇರೆಯವರಿಗೆ ಮಾರಾಟ ಮಾಡಬಾರದು ? ಇಲ್ಲವೇ ಅಲ್ಲಿ ಬೇಗ ಒಂದು ಡಿವಿಜನ್ನನ್ನು ತೆರೆದು ಕೆಲಸವನ್ನು ಮುಂದುವರಿಸಬಾರದು ಇದನ್ನು ಮಾಡದಿದ್ದರೆ ವೃಥಾ ಸರ್ಕಾರಕ್ಕೆ ಖಂಡಿತ ಹತ್ತಾರು ಲಕ್ಷ ರೂಪಾಯಿ ನಷ್ಟವಾಗುತ್ತದೆ.

[Mr. SPEAKER in the Chair]

ಹೀಗೇ ಅಗ್ರಿಕಲ್ಚರಲ್ ಕಾಲೇಜಿನ ಬಗ್ಗೆಯೂ ಆಗಿದೆ. ಜನರು ಕೇಳದಿದ್ದರೂ ಕಾಲೇಜನ್ನು ಮಾಡಿ ಅಲ್ಲಿಗೆ ಶ್ರೀ ಜಕೀರ್ ಹುಸ್ಸೇನರವರನ್ನು ಕರಸಿ ಅಸ್ತಿಭಾರ ಹಾಕಿಸಿ ಅದನ್ನು ಮಾಡಿ ಈಗ ಅದಕ್ಕೆ ಸಾಕಷ್ಟು ಹಣವಿಲ್ಲವೆಂದು ಹೇಳುತ್ತಿದ್ದಾರೆ. ಅಂತೂ ಅಲ್ಲಿಗೆ 3 ಸಾವಿರ ರೂಪಾಯಿ ಸಂಬಳದ ಒಬ್ಬ ವೈಸ್‌ಛಾನ್ಸಿಲರೂ ಒಬ್ಬ ಟೈಪಿಸ್ಟು ಇಷ್ಟು ಜನರು ವೃಥಾ ಸಂಬಳ ಪಡೆಯುತ್ತಿದ್ದಾರೆ. ಮೊದಲೇ ಇಂಥದನ್ನೆಲ್ಲಾ ಇವರೇಕೆ ಆಲೋಚನೆ ಮಾಡಿ ಮಾಡಲಿಲ್ಲ ? ದೇಶದ ಹಣವನ್ನು ಹೀಗೆಲ್ಲಾ ಪೋಲುಮಾಡುವುದಕ್ಕೆ ಬದಲಾಗಿ ಇವರು ರಾಜೀನಾಮೆ ಕೊಡುವುದೇ ಲೇಸು. ಇನ್ನು ಆಂಧ್ರ ತೆಲಗು ಭಾಷೆಯ ಜನರ ಬಗ್ಗೆ ಪಕ್ಷಪಾತಭಾವನೆ ಮಾಡುತ್ತಿದ್ದಾರೆ.

Mr. SPEAKER.—Is it a point in support of the No-confidence motion ?

Sri P. VENKATAGIRIYAPPA.—Because they are partial...

Mr. SPEAKER.—Partial ?

Sri P. VENKATAGIRIYAPPA.—To the Telugu areas, they have forfeited our confidence.

Mr. SPEAKER.—Now the member is right. Please finish in a minute.

ಶ್ರೀ ಪಿ. ವೆಂಕಟಗಿರಿಯಪ್ಪ.—ತೆಲಗು ಜನರ ವಿಚಾರದಲ್ಲಿ ಇವರು ಮಲತಾಯಿ ಧೋರಣೆ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ತೆಲಗು ಭಾಷೆ ಮಾತನಾಡತಕ್ಕ ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಈ ಜಿಲ್ಲೆಗಳ ಬಗ್ಗೆ ಇವರು ಅಲ್ಲಿ ದೊಡ್ಡ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲವಾದ್ದರಿಂದ ಅಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನಾದರೂ ಮಾಡಿಕೊಡಿ ಎಂದರೆ ಅದು ಇವರ ಕಿವಿಗೇ ಹೋಗುತ್ತಿಲ್ಲ. ಇದಕ್ಕೆ ಒಂದು ಉದಾಹರಣೆ ಆಂಧ್ರದವರು ಕಟ್ಟಿದ ಪೆರೂರು ಡ್ಯಾಂ ಬಗ್ಗೆ ಇಲ್ಲಿ ಮುಳುಗಡೆಯಾದ ಜನರಿಗಿನ್ನೂ ಪರಿಹಾರ ದೊರೆತಿಲ್ಲ. ಆಂಧ್ರ ಸರ್ಕಾರದವರು ಅದನ್ನು ಮೀಸಲಾಗಿಟ್ಟಿದ್ದರೂ ನಮ್ಮ ಸರ್ಕಾರ ಅದನ್ನು ತರಿಸಿ ಇಲ್ಲಿರತಕ್ಕ ಜನರಿಗೆ ಹಂಚಲು ನಿಧಾನ ಮಾಡುತ್ತಿದ್ದಾರೆ. ಇದಕ್ಕಿಂತಲೂ ಉದಾಹರಣೆ ಬೇಕೇ ಇವರ ಪಕ್ಷಪಾತ ಭಾವನೆಗೆ ? ಇದು ಮಲತಾಯಿ ಧೋರಣೆಯಲ್ಲವೇ ಇಂಥ ಸರ್ಕಾರ ಆಡಳಿತ ಮಾಡುವುದಕ್ಕೆ ಅರ್ಹತೆ ಇಲ್ಲ, ಇವರು ಕೂಡಲೇ ಅಧಿಕಾರದಿಂದ ಕೆಳಗಿಳಿಯಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಗೋಪಾಲಗೌಡ.—ಅಧ್ಯಕ್ಷ ಮಹೋದಯ, ಶ್ರೀ ಎಸ್. ನಿಜಲಿಂಗಪ್ಪ ಮತ್ತು ಅವರ ಸಹೋದ್ಯೋಗಿಗಳಿಂದ ಕೂಡಿರತಕ್ಕ ಮಂತ್ರಿ ಮಂಡಲದಲ್ಲಿ ಈ ಸಭೆಗೆ ವಿಶ್ವಾಸವಿಲ್ಲ. ಅವರು ಈ ಸಭೆಯ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಆದುದರಿಂದ ಅವರೆಲ್ಲರೂ ಕೂಡಲೇ ರಾಜೀನಾಮೆ ಕೊಡಬೇಕಾದುದು ಅತ್ಯಗತ್ಯವಾದುದೆಂದು ನಾನು ನನ್ನ ಪರವಾಗಿಯೂ ನಮ್ಮ ಪಕ್ಷದ ಪರವಾಗಿಯೂ ಈ ಮಾನ್ಯ ಸಭೆಯ ಪರವಾಗಿಯೂ ಹಾಗೂ ದೇಶದ ಪ್ರಜೆಗಳ ಪರವಾಗಿಯೂ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಈಗಿರತಕ್ಕ ಮಂತ್ರಿ ಮಂಡಲದ ಬಗ್ಗೆ ಅಕರ್ಮಣ್ಯದಿಂದಲೋ ಅಥವಾ ಕುಕರ್ಮಣ್ಯದಿಂದಲೋ ಈಗಾಗಲೇ ಈ ಸಭೆಯ ಒಳಗೂ ಹೊರಗೂ ಸಾಕಷ್ಟು ಅಂಕಿಸಂಖ್ಯೆಗಳೊಂದಿಗೆ ಈ ಮಂತ್ರಿ ಮಂಡಲದಲ್ಲಿರತಕ್ಕವರೆಲ್ಲಾ ಏನೇನು ಮಾಡಿದ್ದಾರೆ ಎಂಬುದರ ಬಗ್ಗೆ ಸಾಕಷ್ಟು ಜಾಹಿರಾತಾಗಿದೆ. ಆದುದರಿಂದ ನಾನು ಇಲ್ಲಿಯವರೆಗೆ ಏನೇನು ವಿಷಯಗಳನ್ನು ಹೇಳಿರುತ್ತಾರೋ ಅವುಗಳನ್ನು ಮತ್ತೆ ಪ್ರಸ್ತಾಪ ಮಾಡಲಿಕ್ಕೆ, ಪ್ರಶ್ನೆ ಮಾಡಲಿಕ್ಕೆ ಹೋಗುವುದಿಲ್ಲ. ಈಗ ಅದಕ್ಕೆಲ್ಲಾ ಸಾಕಷ್ಟು ಸಮಯವೂ ಇಲ್ಲ. ಆದುದರಿಂದ ನಾನೀಗ ಕೆಲವು ಬಹು ಮುಖ್ಯವಾದ ವಿಷಯಗಳನ್ನು ಮಾತ್ರ ಈ ಸಭೆಯ ಮುಂದಿಡುವುದಕ್ಕೆ ಪ್ರಯತ್ನಪಡುತ್ತೇನೆ, ನಾವೀಗ ಈ ಮಂತ್ರಿ ಮಂಡಲದಮೇಲೆ ತೀವ್ರತರವಾದ ಹಾಗೂ ಗುರುತರವಾದ ಆಪಾದನೆಗಳನ್ನು ಮಾಡಿದ್ದೇವೆ. ಇದೇ ಆಪಾದನೆಗಳ ಪಟ್ಟಿಯೊಂದನ್ನು ತಯಾರಿಸಿ ಅದನ್ನು ನಾವು ಈಗಾಗಲೇ ರಾಷ್ಟ್ರಾಧ್ಯಕ್ಷರಿಗೂ ಕಳುಹಿಸಿದ್ದೇವೆ, ಅದನ್ನು ಅವರು ಈಗಾಗಲೇ ವಿಮರ್ಶೆಗಾಗಿ ಪ್ರಧಾನ ಮಂತ್ರಿಗಳ ಕಡೆಗೆ ಕಳುಹಿಸಿಕೊಟ್ಟಿದ್ದಾರೆ. ಆದರೆ ನಮಗೀಗ ಬಂದಿರತಕ್ಕ ಒಂದು ಸಂದಿಗ್ಧ ಪ್ರಸಂಗವೇನೆಂದರೆ: ನಮ್ಮ ರಾಷ್ಟ್ರದ ಪ್ರಧಾನ ಮಂತ್ರಿಗಳನ್ನು ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ನಾಳೆ ಆ ಶರಾವತಿಯಲ್ಲಿ ನಡೆಯಲಿರುವ ವಿದ್ಯುಚ್ಛಕ್ತಿಯ ಆರಂಭೋತ್ಸವಕ್ಕೆ ಆಹ್ವಾನಿಸಿದ್ದಾರೆ. ನಮಗೂ ಆಹ್ವಾನ ಕೊಟ್ಟಿದ್ದಾರೆ, ನಮ್ಮ ರಾಷ್ಟ್ರದ ಪ್ರಧಾನ ಮಂತ್ರಿಗಳ ಬಗ್ಗೆ ನಮಗೆ ಬಹಳ ಗೌರವವಿದೆ. ಆ ಶರಾವತಿಯಾದರೋ ಕನ್ನಡ ನಾಡಿನ ಭಾಗೀರಥಿ. ಅಲ್ಲಿ ಉತ್ಪತ್ತಿಯಾಗತಕ್ಕ ವಿದ್ಯುಚ್ಛಕ್ತಿಯಲ್ಲಿ ನಮ್ಮ ರಾಜ್ಯ ಹಾಗೂ ಅಕ್ಕಪಕ್ಕದಲ್ಲಿರತಕ್ಕ ನಾಡಿನವರ ಭವಿಷ್ಯ ಅಡಗಿದೆ. ಹೀಗೆ ಈ ಕಣಿಯ ಉಪಯೋಗವೇನು ಎಂಬುದನ್ನು ನಾವೆಲ್ಲರೂ ನೋಡಿದ್ದೇವೆ. ಇಂಥ ಒಂದು ಸಂತೋಷ ಸಮಾರಂಭದಲ್ಲಿ ನಮಗೂ ಭಾಗವಹಿಸಬೇಕೆಂದು ಕೇಳಿದ್ದಕ್ಕೆ ನಾವು ತುಂಬಾ ಸಂತೋಷದಿಂದ ತಮ್ಮೆಲ್ಲರೊಂದಿಗೂ ಇರಬೇಕೆಂಬ ಮನಸ್ಸಿತ್ತು, ಆದರೆ ನಾವು ಈ ಒಂದು ಸಂದರ್ಭದಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಿಲ್ಲವೆಂಬ ಅಂಶವನ್ನು ನಾನು ವಿಷಾದದಿಂದ ತಿಳಿಸಬೇಕಾಗಿದೆ. ಅದೇ ಶರಾವತಿ ವಿದ್ಯುಚ್ಛಕ್ತಿಯ ಯೋಜನೆಯ ಬಗ್ಗೆ ಏನೇನು ಕೆಲವು ಭ್ರಷ್ಟಾಚಾರಗಳೂ, ಅನ್ಯಾಯಗಳೂ, ಅನಾಚಾರಗಳೂ ನಡೆದಿವೆಯೆಂದು ನಾವು ಆಪಾದನೆ ಮಾಡಿದ್ದೇವೋ ಅಂಥ ಆಪಾದನೆಗಳಬಗ್ಗೆ ಈ ಮಂತ್ರಿ ಮಂಡಲವನ್ನು ವಿಚಾರಣೆಗೆ ಗುರಿಪಡಿಸಬೇಕೆಂದು ನಾವು ಕೇಂದ್ರ ಸರ್ಕಾರಕ್ಕೆ ಕೇಳಿಕೊಂಡಿರತಕ್ಕ ಬೇಡಿಕೆಯನ್ನಿನ್ನೂ ಈಡೇರಿಸಿಲ್ಲ. ಹೀಗಿರತಕ್ಕ ಸಂದರ್ಭದಲ್ಲಿ ನಾವೆಲ್ಲ ಈಗ ಭಾಗವಹಿಸುವುದು ಸರಿಯಲ್ಲ, ಉಚಿತವಾದುದಲ್ಲ ಎಂದು ನಾನಾದರೋ ಅಂದುಕೊಂಡಿದ್ದೇನೆ.

ಒಂದು ವಿಷಯವನ್ನು ಇವತ್ತಿನ ದಿವಸ ನಾನು ಈ ಸಭೆಯಲ್ಲಿ ವಿಷಾದದಿಂದ ಮನಗಂಡೆ, ಇದೇ ಲಾಲ್ ಬಹದ್ದೂರ್ ಶಾಸ್ತ್ರಿಯವರನ್ನು ಪ್ರಧಾನಿಯವರನ್ನು ಈ ರಾಜ್ಯದ ಮುಖ್ಯ ಮಂತ್ರಿಗಳು ನಾರಾಯಣಪುರ, ಆಲಮಟ್ಟಿಗೆ ಕರೆದುಕೊಂಡು ಹೋದರು, ನಾರಾಯಣಪುರದಲ್ಲಿ ಅಣೆಕಟ್ಟಿನ ಶಂಕುಸ್ಥಾಪನೆ ಆಯಿತು. ಇವತ್ತು ಈ ಸಭೆಯದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು ತಮ್ಮ ಸ್ವಂತ ಬಾಯಿಂದ ನಾರಾಯಣಪುರ ಅಣೆಕಟ್ಟಿನ ಸೈಟಿನ ಆಖೈರು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗದೆ ಸಿದ್ದಾಪುರದಲ್ಲಿ ಹಾಕಬೇಕೆಂದು ಉದ್ದೇಶ ಇದೆ ಎಂದು ಹೇಳುತ್ತಾರೆ, ಇದು ಒಂದೇ ನಿದರ್ಶನ ಸಾಕು, ಈ ರಾಜ್ಯ ಯಾವ ರೀತಿ ಕೆಲಸ ಮಾಡುತ್ತದೆ, ಸರ್ಕಾರ ಯಾವ ರೀತಿ ತನ್ನ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಾ ಇದೆ ಎನ್ನುವುದಕ್ಕೆ. ಇದು ಒಂದು ಸಣ್ಣ ಅಣೆಕಟ್ಟು ಆಯಿತು. ಪ್ರಧಾನ ಮಂತ್ರಿಯವರು ಶಂಕು ಸ್ಥಾಪನೆ ಮಾಡಿದರು. ಈ ಅಣೆಕಟ್ಟಿನ ಸೈಟಿನ ವಿಷಯದಲ್ಲಿ ಇನ್ನೂ ಆಖೈರು ತೀರ್ಮಾನವಾಗಿಲ್ಲ. ಇದೇ ರೀತಿ ಕಂಬದ ಕಡದ ವಿಷಯ ಪ್ರಧಾನಿಯವರಿಗೆ ಸ್ವಲ್ಪ ಗೊತ್ತಾಯಿತು ಬರುವುದಿಲ್ಲ ಎಂದು ಬರೆದರು. ಕಳೆದ ಮೂರು ತಿಂಗಳಿನಿಂದ ಒಂದೇ ಸಮನೆ ಶ್ರೀಮಾನ್ ನಿಜಲಿಂಗಪ್ಪನವರು ದೆಹಲಿಗೆ ಹೋಗಿ ಅವರ ಹತ್ತಿರ ಮಾತನಾಡುತ್ತಾ ಇದ್ದಾರೆ. ನಿಮ್ಮ ಹೆಸರನ್ನು ಪ್ರಕಟಣೆ, ಮಾಡಿದ್ದೇವೆ, ಕಾರ್ಯಕ್ರಮವನ್ನು ಗೊತ್ತು ಮಾಡಿಕೊಂಡಿದ್ದೇವೆ, ವಿದ್ಯುತ್ತು ಈಗಾಗಲೇ ಉತ್ಪಾದನೆಯಾಗುತ್ತಾ ಇದೆ, ಅದು ತಮ್ಮ ಅಮೃತ ಹಸ್ತದಿಂದ ಉದ್ಘಾಟನೆಯಾಗಬೇಕಾಗಿದೆ ಎಂದು ಹೇಳುತ್ತಾ ಇದ್ದಾರೆ. ನಿಜವಾಗಿಯೂ ಅವರು ಆರಂಭ ಮಾಡುವುದು ಒಳ್ಳೆಯದು. ಆದರೆ ಇಂತಹ ಸಂದರ್ಭಗಳನ್ನು ನಾವು ಮರೆಯಬಾರದು. ಅದಕ್ಕೆ ನಾನು ಈ ಸಭೆಯ ಮೂಲಕ ಶ್ರೀಮಾನ್ ಲಾಲ್ ಬಹದ್ದೂರ್ ಶಾಸ್ತ್ರಿಯವರಲ್ಲಿ, ಶ್ರೀಮಾನ್ ಕೆ. ಎಲ್. ರಾವ್ ಅವರಲ್ಲಿ ಮತ್ತು ಚೆಸ್ಟರ್ ಬವಲ್ಸ್ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ........

Mr. SPEAKER.—Not through this House; I am not going to send any such representations.

ಶ್ರೀ ಎಸ್. ಗೋಪಾಲಗೌಡ.—ತಾವು ಈ ಸಮಾರಂಭಕ್ಕೆ ದಯಮಾಡಿಸುತ್ತಾ ಇದ್ದೀರಿ, ಆದರೆ ಯಾವುದೇ ಕಾರಣದಿಂದಲೂ ಅಲ್ಲಿ ನಡೆದಿರತಕ್ಕ ಅಕ್ರಮಗಳನ್ನು ಮುಚ್ಚಿಕೊಳ್ಳುವುದಕ್ಕೆ ಇದು ಸಹಾಯಕವಾಗದೇ ಇರಲಿ ಎನ್ನುವ ಮಾತನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ.

(ಶ್ರೀ ಎಸ್. ಗೋಪಾಲ ಗೌಡ)

ಸ್ವಾಮಿ, ಈ ಮಂತ್ರಿ ಮಂಡಲದಲ್ಲಿ ನಮಗೆ ವಿಶ್ವಾಸವಿಲ್ಲ, ಅನೇಕ ಕಾರಣಗಳಿಗಾಗಿ ವಿಶ್ವಾಸ ವಿಲ್ಲ. ಆಳುವ ಪಕ್ಷದವರು ಹೇಳಿದಂತೆ ನಮಗೆ ಮಂತ್ರಿ ಮಂಡಲದಲ್ಲಿ ಸ್ಥಾನ ಸಿಕ್ಕಲಿಲ್ಲ, ಪರ್ಮಿಟ್ ಸಿಕ್ಕಲಿಲ್ಲ, ಲೈಸೆನ್ಸ್ ಸಿಕ್ಕಲಿಲ್ಲ, ನಾವೆಲ್ಲ ಅತೃಪ್ತರಾಗಿ ಅವಿಶ್ವಾಸ ನಿರ್ಣಯ ಮಾಡಿಸಿದ್ದೇವೆ ಎಂದು ಹೇಳಿ ಅವರು ಏನು ಹೇಳಿದರು ಈ ಅಪಾದನೆ ಬಹುಶಃ ಎಷ್ಟು ಮಟ್ಟಿಗೆ ಸಮರ್ಥನೀಯ ಎನ್ನುವುದನ್ನು ಅವರೇ ತಿಳಿದುಕೊಳ್ಳಬೇಕು. ಇದು ರಾಜ್ಯದ ಹಿತದ ಪ್ರಶ್ನೆ. ವಿರೋಧ ಪಕ್ಷ ಆಳುವ ಪಕ್ಷಕ್ಕಿಂತ ರಾಜ್ಯದ ಹಿತಾಸಕ್ತಿಗಳಲ್ಲಿ ಹೆಚ್ಚು ಆಸಕ್ತಿ ಇಟ್ಟಿದೆ ಎಂಬುದನ್ನು ಮಾತ್ರ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಶ್ರೀಮಾನ್ ನಿಜಲಿಂಗಪ್ಪನವರು ಮತ್ತು ಮಾನ್ಯ ಆಹಾರ ಮಂತ್ರಿಗಳಾಗಿರತಕ್ಕ ಶ್ರೀಮಾನ್ ಕೃಷ್ಣಪ್ಪನವರು ಕಳೆದ 6 ತಿಂಗಳುಗಳಲ್ಲಿ ಆಹಾರ ಧಾನ್ಯ ಸರಬರಾಜಿನ ಬಗ್ಗೆ ಕೊಟ್ಟಿರತಕ್ಕ ಹೇಳಿಕೆಗಳು, ಅವರು ಮದರಾಸು, ವಿಜಯವಾಡ, ದೆಹಲಿ ಈ ಪ್ರದೇಶಗಳಿಗೆ ಮಾಡಿದ ಯಾತ್ರೆಗಳು ಇವುಗಳ ಬಗ್ಗೆ ಪ್ರತ್ಯೇಕವಾಗಿ ಒಂದು ಜ್ಯುಡೀಷಿಯಲ್ ಎನ್‌ಕ್ವೈರಿ ಆಗಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರ ಹೇಳಿಕೆಯಲ್ಲಿ 'ನಾಟ್' ಎನ್ನುವ ಶಬ್ದ ಬಿಟ್ಟು ಹೋಗಿದೆ ಎಂದು ಹೇಳಿದ್ದಾರೆ. ಎಷ್ಟು ಸಾವಿರ ಟನ್ ಗೋಧಿ, ಅಕ್ಕಿ, ರಾಜ್ಯಕ್ಕೆ ಕೇಂದ್ರದಿಂದ ಬಂತು, ಯಾರು ಅದನ್ನು ತಂದರು; ಲೈಸೆನ್ಸ್‌ದಾರರು ಯಾರು, ಅದನ್ನು ಯಾರ್‍ಯಾರಿಗೆ ಮಾರಿದ್ದಾರೆ ಎಂಬ ಪ್ರತಿಯೊಂದು ಕೆ. ಜಿ. ಲೆಕ್ಕವನ್ನೂ ನಮಗೆ ಈ ಸಭೆಯ ಮುಂದೆ ಮಂಡಿಸಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಮೊದಲನೆಯ ದಿವಸ ತಾವು ಇರಲಿಲ್ಲ ಅದನ್ನು ವಿವರವಾಗಿ ಹೇಳಿದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ತಾವು ಮಂಡಿಸಿದ್ದೇನು ಎಂಬುದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಕಡಿದಾಳ್ ಮಂಜಪ್ಪನವರ ಮಗಳ ಮದುವೆಯ ದಿವಸ ಕಬ್ಬನ್ ಪೇಟೆಯ ಹೆಂಗಸರೆಲ್ಲಾ ತಮ್ಮ ಮನೆಯ ಹತ್ತಿರ ಬಂದರಲ್ಲಾ ಆಗ ತಾವು ತಮ್ಮ ಮನೆಯ ಹಿಂಬಾಗಿಲಿನಿಂದ ಏರೋಡ್ರೋಂಗೆ ಓಡಿ ಹೋದಿರಲ್ಲಾ ಅದು ತಮಗೆ ಜ್ಞಾಪಕವಿದೆಯೇ ?

Sri M. V. KRISHNAPPA.—Sir, I did not run away. The Bombay Plane left at 12-10 and I was in the marriage celebrations of Sri Manjappa's daughter till 11-45 and went to the aerodrome.

ಶ್ರೀ ಎಸ್. ಗೋಪಾಲಗೌಡ.—ನಾನು ಅದನ್ನು ಅಲಂಕಾರಿಕವಾಗಿ ಹೇಳಿದೆನೇ ಹೊರತು ನೀವು ಓಡಿದಿರಿ, ನಾನು ನೋಡಿದೆ ಅಂತ ಅಲ್ಲ (ಸಭೆಯಲ್ಲಿ ನಗು ;) ಆಹಾರವನ್ನು ಒದಗಿಸುವ ಬಗ್ಗೆ ರಾಜ್ಯ ಸರ್ಕಾರ ಕೇಂದ್ರದ ಆದೇಶವನ್ನೂ ಕೂಡ ಪರಿಪಾಲನೆ ಮಾಡಿಲ್ಲ. ತಾವು ಮಾಡಬೇಕಾದ ಪ್ರಥಮ ಕರ್ತವ್ಯವನ್ನೂ ಕೂಡ ಮಾಡಲಿಲ್ಲ. ಜುಲೈ ತಿಂಗಳಿನಲ್ಲಿ ಈ ವಿಧಾನ ಸಭೆಯನ್ನು ಬಿಟ್ಟು ಹೋಗುವಾಗಲೂ, ವಿಧಾನ ಸಭೆ ನಡೆಯುತ್ತಾ ಇದ್ದರೂ ಶ್ರೀಮಾನ್ ಕೃಷ್ಣಪ್ಪನವರು ಅಕ್ಕಿ ತರುತ್ತೇನೆ ಎಂದು ಸಭೆ ಬಿಟ್ಟು ಹೋದದ್ದು ತಮಗೆ ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಕ್ಕಿಯನ್ನು ತಂದು ಕೊಟ್ಟಿದ್ದೇವೆ.

ಶ್ರೀ ಎಚ್. ಗೋಪಾಲಗೌಡ.—ಈ ರಾಜ್ಯದಲ್ಲಿ ಅಕ್ಕಿ ಕೊರತೆ ಇದೆ ಎನ್ನುವುದು ಗೊತ್ತಿದೆ ಮತ್ತು ಮೊದಲು ಬಡ್ಜೆಟ್ ಭಾಷಣದಲ್ಲಿ ಎರಡು ವರೆ ಲಕ್ಷ ಟನ್ ಕೊರತೆ ಇದೆ ಎನ್ನುವುದು ಗೊತ್ತಿತ್ತು, ಆದರೂ ಕೂಡ ಊರಿಗೆ ಒಂದು, ದಿವಸಕ್ಕೆ ಒಂದು, ಅಲ್ಲೊಂದು ಇಲ್ಲೊಂದು ಹೇಳಿಕೆ ಕೊಟ್ಟುಕೊಂಡು, ಯಾವುದೋ ಖಾಸಗೀ ಗೋಡೌನ್ ಮುಂದೆ ಹೋಗಿ ಯಾರದೋ ಚೀಲಗಳನ್ನು ತೋರಿಸಿ, ಫೋಟೋ ತೆಗೆಸಿಕೊಂಡು, ಬೇಕಾದಷ್ಟು ಇದೆ ಎಂದು ಹೇಳಿ ಇದನ್ನೆಲ್ಲಾ ತಾವು ಮಾಡಿದ್ದೀರಿ. ಜನರು ಕೊಟ್ಟಿರತಕ್ಕ ಶಾಪ ತಮಗೆ ತಟ್ಟಬಹುದು ಅದು ಬೇರೆ ಮಾತು.

Mr. SPEAKER.—No question of bringing in curses on the floor of the House ; it is not good.

ಶ್ರೀ ಎಸ್. ಗೋಪಾಲಗೌಡ.—ನೀವು ನಿಮ್ಮ ಕರ್ತವ್ಯವನ್ನು ಮಾಡಿಲ್ಲ, ಕರ್ತವ್ಯ ಚ್ಯುತಿ ಮಾಡಿದ್ದೀರಿ, ಅದಕ್ಕೇ ತಾವು ರಾಜೀನಾಮೆ ಕೊಡಬೇಕು ಮತ್ತು ನಿಮ್ಮ ಜೊತೆಯಲ್ಲಿ ಧ್ವನಿ ಗೂಡಿಸಿದ ಶ್ರೀಮಾನ್ ನಿಜಲಿಂಗಪ್ಪನವರು ನಿಮ್ಮ ಜೊತೆಯಲ್ಲಿ ಮದರಾಸಿಗೆ ಅಕ್ಕಿ ತರುತ್ತೇನೆ ಎಂದು ದಯ

ಮಾಡಿಸಿದ್ದರು ; ಆದ್ದರಿಂದ ಅವರೂ ಕೂಡ ರಾಜೀನಾಮೆ ಕೊಡಬೇಕು. ಈ ಸಂದರ್ಭ ಬರುತ್ತದೆ ಎಂತಲೇ ತಾವು ಜುಲೈ ತಿಂಗಳಿನಿಂದ ಜನವರಿ 12ನೇ ತಾರೀಖಿನವರೆಗೂ ಈ ಮಾನ್ಯ ಸಭೆಯನ್ನು ಕರೆಯಲಿಲ್ಲ. ನೀವು ಈ ಮಾನ್ಯ ಸಭೆಗೆ ಕೊಡತಕ್ಕ ಗೌರವವನ್ನು ಕೊಡಲಿಲ್ಲ. ನಿಮಗೆ ಈ ಸಭೆಯಲ್ಲಿ ವಿಶ್ವಾಸವಿಲ್ಲ, ಆದ್ದರಿಂದ ನಿಮ್ಮಲ್ಲಿ ನಮಗೆ ವಿಶ್ವಾಸವಿಲ್ಲ. ಇಂಥಾ ಒಂದು ಘೋರವಾದ ಕಾರ್ಯವನ್ನು ಇನ್ನೊಂದು ಪ್ರಭುತ್ವ ಮಾಡಿಲ್ಲ. ನೀವು ಊರು ಊರು ತಿರುಗುತ್ತಾ ಇದ್ದರೆ ಜನ ಹೇಗೋ ಬದುಕುತ್ತಾರೆ, ಉಪವಾಸವಿದ್ದರೂ 50-60 ದಿವಸ ಬದುಕುತ್ತಾರೆ. ನೀರು ಕುಡಿದು ಇರುತ್ತಾರೆ, ಗಂಜಿ ಕುಡಿದು, ಸೊಪ್ಪು ತಿಂದು, ಗೆಡ್ಡೆ ತಿಂದು ಬದುಕಿದ್ದಾರೆ. ಜನ ಸತ್ತು ಹೋದರೇನು ಎಂದು ತಾವು ಕೇಳಬಹುದು, ಆದರೆ ನೀವು ಮಾಡಬೇಕಾದ ಕರ್ತವ್ಯ ಮಾಡಿಲ್ಲ, ನಿಮ್ಮ ಜವಾಬ್ದಾರಿಯನ್ನು ನೀವು ನಿರ್ವಹಿಸಿಲ್ಲ, ಜನರ ಜೀವನದ ಜೊತೆಗೆ ಆಟವಾಡಿದ್ದೀರಿ, ಆದ್ದರಿಂದ ಇವತ್ತು ಹೇಳುತ್ತೇನೆ ! ಈ ಸಭೆಗೆ ನೀವು ರಾಜೀನಾಮೆ ಕೊಡಬೇಕು. ಅಲ್ಲದೇ ಕೇಂದ್ರದವರು ಆದೇಶ ಕೊಟ್ಟರೂ ಕೂಡ ಕೇಂದ್ರದಲ್ಲಿ ಹೋಗಿ ನೀವು ಉದ್ದವಾಗಿ ಅಡ್ಡಬಿದ್ದು ಕಂದಾಯವನ್ನು ದುಡ್ಡಿನಲ್ಲಿ ತೆಗೆದುಕೊಳ್ಳುವ ಬದಲು ಕಾಳು ತೆಗೆದುಕೊಳ್ಳುತ್ತೇವೆ ಎಂದು ಸುಬ್ರಹ್ಮಣ್ಯರವರಿಗೆ ದೇಹಲಿಯಲ್ಲಿ ಹೇಳಿ ಬಂದು ಇಲ್ಲಿಗೆ ಬಂದ ಮೇಲೆ ಅಕ್ಕಿ ಮಾಡಿಸುವುದಕ್ಕೆ ಮಿಲ್‌ಗೆ ಹೋದರೆ ಯಾರೇ ಆಗಲಿ 50 ಪರ್ಸೆಂಟ್ ಕೊಡಬೇಕೆಂದು ಕಾನೂನು ಮಾಡಿದಿರಿ. ಜಿಲ್ಲೆಗೆ ಒಂದು ದರ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ದರ, ಧಾರವಾಡದಲ್ಲಿ ಒಂದು ದರ, ಶಿವಮೊಗ್ಗದಲ್ಲಿ ಒಂದು ದರ. ಇದನ್ನು ಸರಿಪಡಿಸುವುದಕ್ಕೆ ಆಗಿಲ್ಲ, ಇವತ್ತು ಬಫರ್ ಸ್ಟಾಕ್ ಮಾಡುತ್ತೇವೆ ಎಂದು ಹೇಳುತ್ತಾ ಇದ್ದೀರಿ.

ಬಫರ್ ಸ್ಟಾಕ್ ವಿಷಯದಲ್ಲಿ ಸರ್ಕಾರ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂಬುದು ನನ್ನ ಅಪಾದನೆ. ಇದನ್ನು ಅನೇಕ ಪ್ರಮುಖರು ಹೇಳಿದ್ದಾರೆ. ನೀವೇನು ಮಾಡುತ್ತಿದ್ದೀರಿ ? ಸಮಸ್ಯೆಯನ್ನು ಸರಿಯಾಗಿ ಅರ್ಥಮಾಡಿಕೊಂಡು ನಿಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುವ ಯೋಗ್ಯತೆ ನಿಮಗಿಲ್ಲ ಎಂದು ವಿಷಾದಪಡಬೇಕಾಗಿದೆ. ನಿಮ್ಮ ಹಿಂದೆ ಕೈ ಎತ್ತುವವರಿರಬಹುದು, ಅದನ್ನು ನೀವೇ ಹೇಳಿದ್ದೀರಿ, ನಿಜ. ಇವತ್ತು ಕಾನೂನುಬದ್ಧವಾಗಿ ನೀವಿರುವ ಜಾಗದಿಂದ ನಿಮ್ಮನ್ನು ಕಿತ್ತುಹಾಕುವುದಕ್ಕೆ ನಮಗೆ ಶಕ್ತಿಯಿಲ್ಲದಿರಬಹುದು. ಆದರೆ ನೀವು ತಪ್ಪು ಮಾಡುತ್ತಿದ್ದೀರಿ ಎಂದು ಹೇಳುವುದು ಸತ್ಯ, ನೂರಕ್ಕೆ ನೂರು ಸತ್ಯ. ಆದುದರಿಂದ ನಾವು ಹೇಳುವುದು ನಿಜಲಿಂಗಪ್ಪನವರು ಮತ್ತು ಅವರ ಮಂತ್ರಿಮಂಡಲ ಬಹಳ ಗುರುತರವಾದ ಅಪಾದನೆಯನ್ನು ಹೊತ್ತು ಜನತೆಯ ಅವಿಶ್ವಾಸಕ್ಕೆ ಒಳಗಾಗಿರುವುದರಿಂದ ಮರ್ಯಾದೆಯಿಂದ ರಾಜೀನಾಮೆ ಕೊಡಬೇಕು, ಇಲ್ಲವಾದ ಪಕ್ಷದಲ್ಲಿ ಕೇಂದ್ರ ಸರ್ಕಾರದವರೇ ನಿಮ್ಮನ್ನು ವಜಾಮಾಡುತ್ತಾರೆ; ಇಲ್ಲದಿದ್ದರೆ ರಾಜ್ಯದ ಜನರು ನಿಮ್ಮನ್ನು ಕಾದಿ ಅಧಿಕಾರದಿಂದ ಕೆಳಗಿಳಿಸುತ್ತಾರೆ. ವಿಚಾರಮಾಡಿ, ಇನ್ನೂ ಕಾಲವಿಳಂಬವಾಗಿಲ್ಲ, ಮಿಂಚಿಲ್ಲ. ಈ ಮಾತುಗಳನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸ್ವಾಮಿ, ಇವತ್ತು ಈ ಸಭೆಯಲ್ಲಿ ವಿರೋಧ ಪಕ್ಷದವರು ಕಡಮೆ ಸಂಖ್ಯೆಯಲ್ಲಿರಬಹುದು. ತಾವು ಈ ಸೂಚನೆಯನ್ನು ಮತದಾನಕ್ಕೆ ಹಾಕಿದಾಗ ಬಿದ್ದುಹೋಗಬಹುದು. ಆದರೆ ಇವತ್ತು ಅನಿವಾರ್ಯವಾಗಿ ಅನೀತಿಗೊಳಗಾಗಿರುವ ಕಾಂಗ್ರೆಸ್ ಪಕ್ಷದವರಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಈ ಮಂತ್ರಿಮಂಡಲದ ವಿಶ್ವಾಸವನ್ನು ಕಳೆದುಕೊಂಡಿದ್ದಾರೆಂದು ಕಾಣುತ್ತದೆ. ಕಾಂಗ್ರೆಸ್ಸಿನವರೇ ಗುರುತರವಾದ ಅಪಾದನೆಯನ್ನು ಮಾಡಿದ್ದಾರೆ. ಇದುವರೆಗೆ ಹಾಗೆ ಮಾಡುತ್ತಿದ್ದರೂ ಎಲ್ಲೋ ಒಳಗೇ ವಿಚಾರಣೆಯಾಗುತ್ತಿತ್ತು. ಮಂತ್ರಿಗಳನ್ನು ಕೆಳಗಿಳಿಸಲು ಕೆಲವರು ಅವರಲ್ಲೂ ಪ್ರಯತ್ನ ಮಾಡುತ್ತಿದ್ದರು. ಈಚೆಗೆ ಕೈರಾನ್‌ರವರ ಪ್ರಕರಣವಾದಮೇಲೆ ಪರಿಸ್ಥಿತಿಯೇ ಬೇರೆಯಾಗಿದೆ. ಕಳೆದ 17 ವರ್ಷಗಳಿಂದ ಯಾರು ಯಾರು ದೇಶದಲ್ಲಿ ತಪ್ಪು ಮಾಡಿದ್ದಾರೆಂಬುದು ಪರಿಶೀಲಿಸಲ್ಪಡಬೇಕು ಎಂಬ ನಿಲುವು ದೇಶದ ಮುಂದಿದೆ, ಇದಕ್ಕೆ ಜನ ಒತ್ತಾಯಮಾಡುತ್ತಿದ್ದಾರೆ. ಶಿವಪ್ಪನವರು ವಿರೋಧ ಪಕ್ಷದ ನಾಯಕರಾಗಿ ಸರ್ಕಾರದಮೇಲೆ ಪ್ರಭಾವ ಬೀರಿ ಅನೇಕ ಸೌಲತ್ತುಗಳನ್ನು ಪಡೆದರೆಂದು ಕಾಂಗ್ರೆಸ್ಸಿನ ಸೆಕ್ರೆಟರಿಗಳು ಹೇಳಿದರು. ಆದರೆ ಯಾವ ಸೌಲತ್ತು ಪಡೆದೆ ಎಂಬ ವಿಚಾರದಲ್ಲಿ ಒಂದು ಜುಡಿಷಿಯಲ್ ಎನ್‌ಕ್ವೈರಿಯಾಗಲಿ ಎಂದು ಶಿವಪ್ಪನವರು ಹೇಳಿದ್ದಾರೆ. ನನ್ನ ಸೂಚನೆ ಹಾಗೆಯೇ ನನ್ನ ಬಗ್ಗೆ ವಿಚಾರಣೆ ತೀರ್ಥಹಳ್ಳಿ, ಪೇಟೆಯಲ್ಲಾಗಲಿ, ಕೃಷ್ಣಪ್ಪನವರ ವಿಚಾರಣೆ ಮುಳುಬಾಗಲಿನಲ್ಲಾಗಲಿ, ನಿಜಲಿಂಗಪ್ಪನವರ ವಿಚಾರಣೆ ಚಿತ್ರದುರ್ಗದಲ್ಲಾಗಲಿ, ಬಾಗಲಕೋಟೆಯಲ್ಲಾಗಲಿ, ನಾವು ಅಪಾದನೆಗಳಿಂದ ಮುಕ್ತರಾಗೋಣ. ಅದರಿಂದ ದೇಶಕ್ಕೆ ಫಾಯಿದೆ ಇದೆ, ನಮಗೆ ಅನುಕೂಲವಾಗಬಹುದು ಅಥವ ಆಗದಿರಬಹುದು. ಆದುದರಿಂದ ಅಪಾದನೆಗಳನ್ನು ಪರಿಶೀಲನೆಗೆ, ವಿಚಾರಣೆಗೆ ಒಳಪಡಿಸಿ ಭ್ರಷ್ಟಾಚಾರಕ್ಕೆ ಒಂದು ಕೊನೆ ಮುಟ್ಟಿಸಿ ದೇಶದಲ್ಲಿ ಒಳ್ಳೆಯ ಕೆಲಸಕಾರ್ಯಗಳಾಗುವುದಕ್ಕೆ ನಾವು ಸಹಾಯಕರಾಗೋಣ ಎಂದು ಕೇಳಿಕೊಂಡು ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಭಾಪತಿಯವರೇ, ನಾಲ್ಕು ದಿವಸಗಳಿಂದ ಅವಿಶ್ವಾಸ ನಿರ್ಣಯದಮೇಲೆ ಚರ್ಚೆ ನಡೆಯುತ್ತಿದೆ. ಈಗ ನಾವು ಕೊನೆಯ ಹಂತದಲ್ಲಿದ್ದೇವೆ, ವಿರೋಧ ಪಕ್ಷದ ಸದಸ್ಯರು ಈ ನಿರ್ಣಯದಮೇಲೆ ಮಾತನಾಡಿದವರೆಲ್ಲರೂ ನಮಗೆ ಈ ಸರ್ಕಾರದಮೇಲೆ ವಿಶ್ವಾಸವಿಲ್ಲ, ಮಂತ್ರಿಗಳಮೇಲೆ ವಿಶ್ವಾಸವಿಲ್ಲ, ಅದಕ್ಕಾಗಿ ನೀವು ತೊಲಗಿಹೋಗಿ ಎಂಬ ಮಾತನ್ನು ಪದೇಪದೇ ಹೇಳುತ್ತಲೇ ಬಂದಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು ಇವತ್ತು ನಮ್ಮಮೇಲೆ ಅವಿಶ್ವಾಸ ನಿರ್ಣಯ ತಂದಿದ್ದರೆ ಮುಂದೆ ಇಡೀ ಮೈಸೂರು ಸಂಸ್ಥಾನದ ಮೇಲೆ, ನಂತರ ಬಹುಶಃ ಇಡೀ ಹಿಂದೂಸ್ಥಾನದಮೇಲೆ, ಅನಂತರ ಜಗತ್ತಿನಮೇಲೆ ತರಬಹುದು ಎಂದು ನಾನು ಮನಸ್ಸಿನಲ್ಲಿ ಅಂದುಕೊಂಡೆ. ಈಗ ಸದ್ಯಕ್ಕೆ ಮೈಸೂರು ದೇಶದ ಜನರಮಟ್ಟಿಗೆ ತಂದಿದ್ದಾರೆ. ನಿಜಲಿಂಗಪ್ಪನವರು ಅಧಿಕಾರಕ್ಕೆ ಬಂದು 3 ತಿಂಗಳು ಕೂಡ ಆಗಿರಲಿಲ್ಲ, ಆಗಲೇ ಒಂದು ನಿರ್ಣಯ ತಂದಿದ್ದರು. ನನಗೆ ಜ್ಞಾಪಕವಿರುವ ಹಾಗೆ ಬಹುಶಃ 62ನೆಯ ಇಸವಿ ಸೆಪ್ಟೆಂಬರಿನಲ್ಲೆಂದು ಕಾಣುತ್ತದೆ. ಯಾವುದೇ ಒಂದು ಮಂತ್ರಿಮಂಡಲ ರಚನೆಯಾದಮೇಲೆ ಅದು ಕೆಲಸಕಾರ್ಯ ತಿಳಿದುಕೊಂಡು ಮಾಡುವುದಕ್ಕೆ ಒಂದು ಸಮಯ ಬೇಕಾಗುತ್ತದೆ. ಬಹುಶಃ ಈಗ ಬಂದಿರುವುದು ನಾಲ್ಕನೆಯ ನಿರ್ಣಯವಾಗಿರಬಹುದು.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮೊದಲನೆಯ ದಿವಸವೇ ಬಂತು.

ಶ್ರೀ ವೀರೇಂದ್ರ ಪಾಟೀಲ್.—ಹಾಗಾದರೆ ನೀವು ಬಹಳ ಹಿಂದೆ ಬಿದ್ದಿದ್ದೀರಿ. ಇನ್ನು 2 ವರ್ಷಗಳಲ್ಲಿ ಬಹುಶಃ ಇಂಥ 2-3 ನಿರ್ಣಯಗಳು ಬರಬಹುದು. ಅವಿಶ್ವಾಸ ನಿರ್ಣಯದಮೇಲೆ ಮಾತನಾಡುತ್ತಾ ಮಾನ್ಯ ಸಭೆಯ ಅನೇಕ ವಿರೋಧ ಪಕ್ಷದ ಸದಸ್ಯರು ಹೇಳಿದ್ದೇ ಹೇಳುತ್ತಿದ್ದೇವೆಂದು ತಾವೇ ಒಪ್ಪಿಕೊಂಡರು. ಏನೂ ಮಾಡಿಲ್ಲ, ಆದ್ದರಿಂದ ಹೇಳಬೇಕಾಗಿದೆ ಎಂದು ಕೃಷ್ಣರವರು ಸ್ಪಷ್ಟವಾಗಿ ಹೇಳಿದರು. ಅದಾದಮೇಲೆ ಬಹುಶಃ ರಾತ್ರಿ ವಿಚಾರಮಾಡಿರಬಹುದು. ಹೇಳಿದ್ದೇ ಹೇಳಿದ್ದೇವೆ, ಹಾಡಿದ್ದೇ ಹಾಡೋ ಕಿಸುಬಾಯ್‌ದಾಸ ಎಂಬ ಗಾದೆ ಇದೆ, ಎಂದು ಯೋಚಿಸಿ ಒಂದು ಹೊಸ ವಿಚಾರ ತಂದರು. ಅದೇನೆಂದರೆ, ಪವರ್ ಡಕ್ಟ್ ಬ್ರೀಚ್ ಆದಮೇಲೆ ಫಿಲ್ಟರ್ ಡ್ರೈನ್ಸ್ ಹಾಕುವುದಕ್ಕೆ ಒಂದು ಟೆಂಡರು ಕರೆದರು, ಅದಾದಮೇಲೆ ಮೊದಲನೆಯ ಟೆಂಡರ್ ರಿಜೆಕ್ಟಾಗಿ ಬೇರೆ ಕರೆದಿದ್ದಾರೆ.

4-00 P.M.

ಅದರಲ್ಲಿ ಯಾರೋ ಒಬ್ಬ ಖದೀಮ ಕಂಟ್ರಾಕ್ಟರಿಗೆ ಆ ಕೆಲಸವನ್ನು ಕೊಡಬೇಕು ಎನ್ನುವ ಮಸಲತ್ತು ನಡೆಯುತ್ತಿದೆ ಎನ್ನುವ ಮಾತನ್ನು ಹೇಳಿದರು. ಅದು ಯಾವಾಗ ಆಗಿದೆ, ಹೊಸ ಟೆಂಡರು ಯಾವುದು ಎಂದು ನನಗೆ ಅಷ್ಟೊಂದು ಗೊತ್ತಾಗಲಿಲ್ಲ. ಬಹುಶಃ 13-1-1965 ಟೆಂಡರುಗಳನ್ನು ಕಳಿಸಲು ಕೊನೆಯ ದಿವಸ ಇತ್ತು ಎಂದು ಕಾಣುತ್ತದೆ. ಸರ್ಕಾರದ ವ್ಯವಹಾರಗಳು ತಿಳಿಯಬೇಕಾದರೆ ತಿಂಗಳುಗಟ್ಟಲೆ ಬೇಕು. ಪ್ರೊಸೀಜರ್ ಪ್ರಕಾರ ಟೆಂಡರುಗಳನ್ನು ಕರೆದಮೇಲೆ ಅವುಗಳಲ್ಲಿ ಯಾವುದು ಲೋಯೆಸ್ಟ್ ಬರುತ್ತದೆ ಆ ಟೆಂಡರುದಾರನಿಗೆ ಕೊಡುತ್ತೇವೆ. ಅದರಲ್ಲಿ ಕೂಡ ಟೆಂಡರುಗಳನ್ನು ಕರೆದಮೇಲೆ ಅವುಗಳನ್ನು ಒಪ್ಪಿಕೊಳ್ಳುವ ಅಧಿಕಾರವನ್ನು ಸರ್ಕಾರ ಕೆಲವು ಹಂತಗಳಲ್ಲಿ ಡೆಲಗೇಟ್ ಮಾಡಿದೆ. ಎಕ್ಸಿಕ್ಯೂಟಿವ್ ಇಂಜನಿಯರ್, ಸೂಪರಿಂಟೆಂಡಿಂಗ್ ಇಂಜನಿಯರ್, ಚೀಫ್ ಇಂಜಿನಿಯರ್ ಇವರಿಗೆಲ್ಲ ಕೆಲವು ಅಧಿಕಾರಗಳು ಇರುತ್ತವೆ. ಇದರಲ್ಲಿ ನೂರಕ್ಕೆ 15ಕ್ಕೆ ಮೇಲ್ಪಟ್ಟು ದರಗಳನ್ನು ಹಾಕಿದ್ದರೆ ಸರ್ಕಾರಕ್ಕೆ ಬರುತ್ತದೆ. ಇಲ್ಲದೆ ಹೋದರೆ ಇಲ್ಲ. ದರಗಳು ಹೆಚ್ಚಾಗಿದ್ದು ಅಂದಾಜಾಗಿರುವ ಮೊಬಲಗಿಂತ ಹೆಚ್ಚು ದುಡ್ಡು ಆಗುವುದಾದರೆ ಸರ್ಕಾರಕ್ಕೆ ಪ್ರತಿಯೊಂದು ಕಾಗದ ಪತ್ರಗಳೂ ಬರಬೇಕಾಗುತ್ತದೆ. ಸರ್ಕಾರದ ಅನುಮತಿ ಇಲ್ಲದೆ ಇದೇನೂ ಆಗುವಹಾಗಿಲ್ಲ. ಅದಕ್ಕಾಗಿ ನಾನು ಪುನಃ ಪುನಃ ಪ್ರಶ್ನಿಸಿದೆ. ಟೆಂಡರ್ ಅಕ್ಸೆಪ್ಟ್ ಆಯಿತೋ, ಟೆಂಡರನ್ನು ಅಂಗೀಕಾರ ಮಾಡಿ ವರ್ಕ್ ಆರ್ಡರ್ ಕೊಟ್ಟಿದ್ದಾರೆಯೋ? ಎಂದು. ಅವರು ಅದಕ್ಕೆ ಏನೂ ಹೇಳಲಿಲ್ಲ. ಜನವರಿ 13ನೇ ತಾರೀಖು ಟೆಂಡರುಗಳನ್ನು ಕಳಿಸಲು ಕೊನೆಯ ತಾರೀಖು ಇತ್ತು. ಅದು ಈಗಲೇ ಅಂಗೀಕಾರವಾಗುವ ಪ್ರಶ್ನೆ ಎಲ್ಲಿಂದ ಬಂತು? ಸರ್ಕಾರದಮೇಲೆ, ನಮ್ಮ ಪ್ರಾಮಾಣಿಕತೆಯ ಮೇಲೆ ಇದು ಒಂದು ಹೊಸ ಅಪಾದನೆ. ನಮ್ಮ ಮೇಲಿನ ಅಪಾದನೆಗಳ ಪಟ್ಟಿಗೆ ಇನ್ನೊಂದು ಸೇರಿತು. ಅದು ಇನ್ನೂ ನಮಗೆ ಬಂದಿಲ್ಲ. ಅನೇಕ ಕೆಲಸ ಕಾರ್ಯಗಳು ತಾಲ್ಲೂಕು ಮಟ್ಟದಲ್ಲಿ ನಡೆಯುತ್ತವೆ, ಜಿಲ್ಲಾ ಮಟ್ಟದಲ್ಲಿ ನಡೆಯುತ್ತವೆ, ಬೆಂಗಳೂರು ಮಟ್ಟದಲ್ಲಿಯೂ ಅನೇಕ ಕೆಲಸಗಳು ನಡೆಯುತ್ತವೆ. ಅನೇಕ ಇಲಾಖೆಗಳಿವೆ, ಅನೇಕ ಅಧಿಕಾರಿಗಳಿದ್ದಾರೆ, ಅವರಿಗೆ ಅನೇಕ ಅಧಿಕಾರಗಳನ್ನು (ಪವರ್ಸ್) ಕೊಟ್ಟಿದ್ದೇವೆ, ರೂಲ್ಸ್ ಮತ್ತು ಪ್ರೊಸೀಜರ್ ಇದೆ. ಪ್ರತಿ

ಯೊಂದು ಹಂತದಲ್ಲಿಯೂ ಅನೇಕ ಕೆಲಸಕಾರ್ಯಗಳು ನಡೆಯುತ್ತವೆ. ಆದರೆ ದುರ್ದೈವ, ವಿಜ್ಞಾನ ಎಷ್ಟು ಮುಂದೆ ಹೋದರೂ ನಮ್ಮ ಪ್ರಾಮಾಣಿಕತೆಯನ್ನು ಅಳತೆ ಮಾಡುವ ''ಥರ್ಮಾಮೀಟರ್'' ಬಂದಿಲ್ಲ. ಬಂದಿದ್ದರೆ ದಿನಕ್ಕೆ ನಾಲ್ಕು, ನಾಲ್ಕೂವರೆ ಸಾವಿರ ರೂಪಾಯಿ ಖರ್ಚು ಮಾಡಿ ನಾವು ಇಲ್ಲಿ ಚರ್ಚೆ ಮಾಡುವ ಅವಶ್ಯಕತೆ ಬರುತ್ತ ಇರಲಿಲ್ಲ. ರಾಜ್ಯದಲ್ಲಿ ಎಲ್ಲೆಲ್ಲಿ ಏನೇನು ನಡೆಯುತ್ತಿದೆ ಎನ್ನುವುದನ್ನು ಬೆಂಗಳೂರಿನಲ್ಲಿ ಸೆಕ್ರೆಟೇರಿಯೆಟ್‌ನಲ್ಲಿ ಕುಳಿತು ನೋಡುವಂಥ ಟೆಲಿವಿಷನ್ ಇನ್ನೂ ಬಂದಿಲ್ಲ. ಮಾನ್ಯ ಸದಸ್ಯರು ಹೇಳಿದುದನ್ನು ವಿಚಾರಿಸಬೇಕು ಎಂದರೆ ನಮ್ಮ ಅಧಿಕಾರಿಗಳಲ್ಲಿ ಶರಾವತಿಯಲ್ಲಿ ಮೈಸೂರು ರಾಜ್ಯಕ್ಕೆ ಕರ್ಣಾಟಕಕ್ಕೆ ಮುಖ್ಯವಾದಂಥ ಕಾರ್ಯ ನಡೆಸುವ ಸಮಾರಂಭದಲ್ಲಿ ವ್ಯವಸ್ಥೆ ಮಾಡಲು ಹೋಗಿದ್ದಾರೆ. ನಾನು ಈ ಸಭೆಗೆ ಒಂದು ಆಶ್ವಾಸನೆಯನ್ನು ಕೊಡುತ್ತೇನೆ. ಶರಾವತಿಯಿಂದ ತಿರುಗಿ ಬಂದಮೇಲೆ ಅದರಬಗ್ಗೆ ಎಲ್ಲ ವಿವರಗಳನ್ನೂ ಕೊಡಲು ತಯಾರಿದ್ದೇನೆ. ಮಾನ್ಯ ಸದಸ್ಯರ ಮನಸ್ಸಿನಲ್ಲಿ ಏನಾದರೂ ಸಂಶಯ ಬಂದರೆ ಇಂಥ ಸಂಶಯವಿದೆ ಎಂದು ಕೇಳಬಹುದು. ಆ ವಿಚಾರಗಳನ್ನು ನನಗೆ ತಿಳಿಸಿಕೊಡಿ. ಹಾಗೆ ಮಾಡದೆ ಯಾರೋ ಒಬ್ಬ ಕದೀಮ ಕಂಟ್ರಾಕ್ಟರಿಗೆ ಕೆಲಸ ಕೊಟ್ಟಿದ್ದಾರೆಂದು ಭ್ರಷ್ಟಾಚಾರದ ಆಪಾದನೆಗಳನ್ನು ಮಾಡುವುದಕ್ಕೆ ಇದನ್ನು ಒಂದು 'ಫೋರಂ' ಮಾಡಿಕೊಂಡು ಹೊರಟರೆ ದೇಶದ ಗತಿ ಏನು ?

ಶ್ರೀ ಎಸ್. ಶಿವಪ್ಪ.—ಹೋದಸಲ ಈ ವಿಷಯ ಬಂದಾಗ ಇದರಲ್ಲಿ ಒಂದೆರಡು ಲಕ್ಷ ರೂಪಾಯಿ ನಷ್ಟವಾಗುತ್ತದೆಂದು ಹೇಳಿದರು. ಈಗ 25 ಲಕ್ಷ ರೂಪಾಯಿಗೆ ಅಂದಾಜು ಮಾಡಿದ್ದಾರೆ.

ಶ್ರೀ ವೀರೇಂದ್ರಪಾಟೀಲ್.—ನಾನು ಹೇಳಿದ್ದನ್ನು ಮಾನ್ಯ ಸದಸ್ಯರು ಕೇಳಿದರೋ ಇಲ್ಲವೋ ಗೊತ್ತಿಲ್ಲ. ಎಷ್ಟಕ್ಕೆ ಅಂದಾಜು ಮಾಡಿದ್ದಾರೆ, ಟೆಂಡರ್ ಏಕೆ ಕರೆದರು, ಏಕೆ ಟೆಂಡರನ್ನು ರಿಜೆಕ್ಟ್ ಮಾಡಿದರು ಎನ್ನುವುದನ್ನೆಲ್ಲ ತಿಳಿದುಕೊಂಡು ಬಂದು ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದೇನೆ. ಇನ್ನೂ ಒಮ್ಮೆ ಅದನ್ನೇ ಹೇಳುತ್ತೇನೆ. ಮಾನ್ಯ ಸದಸ್ಯರಿಗೆ ಏನಾದರೂ ಸಂಶಯ ಬಂದರೆ ಏನೋ ನಡೆಯುತ್ತಿದೆ ಎನ್ನುವ ಸಂಶಯ ಬಂದರೆ ಅದನ್ನು ಕೇಳುವುದಕ್ಕೆ ಅವಕಾಶವಿದೆ. ಎಲ್ಲೋ ಯಾರೋ ಏನೋ ಮಾಡುತ್ತಾರೆ ಎಂದು, ಅದರಲ್ಲಿ ನಮಗೆ ಪರ್ಸೆಂಟೇಜ್ ಇದೆ ಎನ್ನುವಂಥ ಭಾವನೆಯಿಂದ ಈ ರೀತಿ ಆಪಾದನೆಗಳನ್ನು ಮತ್ತು ಪ್ರತ್ಯಾಪಾದನೆಗಳನ್ನು ಮಾಡುವುದಕ್ಕೆ ಈ ಒಂದು ಮಹಾ ಸಭೆಯನ್ನು ನಾವು ಉಪಯೋಗ ಮಾಡಿಕೊಳ್ಳುತ್ತೇವೆಂದರೆ ಅದಕ್ಕಿಂತಲೂ ದುರ್ದೈವದ ಸಂಗತಿ ಮತ್ತೊಂದಿಲ್ಲ ಎಂದು ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಜತ್ತಿಯವರ ಮಂತ್ರಿಮಂಡಲದ ಮೇಲೆ ಆಪಾದನೆಗಳನ್ನು ಮಾಡಿದ್ದಿರಲ್ಲ ಅದು ಏನು ಸ್ವಾಮಿ ?

ಶ್ರೀ ಎಸ್. ಎಂ. ಕೃಷ್ಣ.—ಅದು ಸುದೈವ, ಇದು ದುರ್ದೈವ ;

Mr. SPEAKER.—Order, order.

ಶ್ರೀ ವೀರೇಂದ್ರ ಪಾಟೀಲ್.—ನಾನು ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಒಂದು ಗಂಟೆಯ ಕಾಲ ಮಾತನಾಡುವವನು. ನನ್ನ ಮೇಲೆ ಪ್ರಾಮಾಣಿಕತೆಯ ಬಗ್ಗೆ ಆಪಾದನೆ ಬಂದಿದೆ, ನನ್ನ ಮೇಲೆ ಭ್ರಷ್ಟಾಚಾರದ ಆಪಾದನೆಯನ್ನು ಮಾಡಿದ್ದಾರೆ. ಇದೊಂದು ಸುದೈವ, ಒಳ್ಳೆಯ ಅವಕಾಶವನ್ನು ಒದಗಿಸಿಕೊಟ್ಟುದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ. ನಮ್ಮ ಮೇಲೆ ಮಾಡಿರುವ ಆಪಾದನೆಗಳ ಬಗ್ಗೆ ಹೇಳುವುದಕ್ಕೆ ನಮಗೆ ಸಂಪೂರ್ಣವಾಗಿ ಅವಕಾಶವಿದೆ. ನಾನು ಮಾತನಾಡುವಾಗ ಯಾರಾದರೂ ಎದ್ದು ಮಧ್ಯೆ ಮಾತನಾಡುವುದಕ್ಕೆ ಪ್ರಯತ್ನ ಮಾಡಿದರೆ ನಾನು ಏನು ಹೇಳಬೇಕು ಎಂದು ಇದ್ದೇನೆಯೋ ಅದನ್ನೆಲ್ಲ ಹೇಳುವುದಕ್ಕೆ ಸಾಧ್ಯವಾಗದೆ ಇರಬಹುದು. ಆದುದರಿಂದ ನಾನು ಹೇಳುವುದನ್ನೆಲ್ಲ ಹೇಳಿದ ಮೇಲೆ ಮಾನ್ಯ ಸದಸ್ಯರಿಗೆ ಉಂಟಾಗುವ ಅನುಮಾನಗಳನ್ನು ಪರಿಹರಿಸಲು ನಾನು ಸಿದ್ಧನಾಗಿದ್ದೇನೆ. ಆದ್ದರಿಂದ ನಾನು ಹೇಳಬೇಕಾಗಿರುವ ವಿಚಾರಗಳನ್ನು ಮುಗಿಸುವುದಕ್ಕೆ ಅವಕಾಶ ಕೊಡಿ.

ನಾನು ನಿನ್ನೆ ಮತ್ತು ಈ ದಿವಸ ಶ್ರೀ ಕೃಷ್ಣ ಅವರ ಭಾಷಣವನ್ನು ಕೇಳಿದೆ. ಬಹಳ ಉದಾತ್ತವಾದ ವಿಚಾರಗಳನ್ನು ಅವರು ಹೇಳಿದ್ದಾರೆ! ಆ ವಿಚಾರಗಳು ಬಹುಶಃ ಹೊಸದೇನೂ ಅಲ್ಲ. ಅವರು ಹೇಳುವ ರೀತಿಯನ್ನು ನೋಡಿದರೆ ಮನುಷ್ಯನ ಮನಸ್ಸಿನ ಮೇಲೆ ಪರಿಣಾಮವಾಗುವ ರೀತಿಯಲ್ಲಿ ಹೇಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನಮ್ಮ ದೇಶದಲ್ಲಿ ತತ್ವಗಳಿಗೆ ಕೊರತೆ ಇಲ್ಲ, ವಿಚಾರಗಳ ಕೊರತೆ ಇಲ್ಲ. ಆದರೆ ಕೊರತೆ ಇರುವುದೆಂದರೆ ಅದನ್ನು ಕೃತಿ ರೂಪಕ್ಕೆ ತರುವುದರಲ್ಲಿ ; ಅದನ್ನು ಪಾಲಿಸುವುದರಲ್ಲಿ ಕೊರತೆ ಇದೆ. ತಮ್ಮೆಲ್ಲರಿಗೂ ಗೊತ್ತಿರಬಹುದು, ಪ್ರಜಾ ಪ್ರಭುತ್ವದಲ್ಲಿ ವಿರೋಧ ಪಕ್ಷದವರಿಗೆ ಸಿಕ್ಕಂಥ ಪವಿತ್ರವಾದ ಅಸ್ತ್ರವೆಂದರೆ ಅವಿಶ್ವಾಸ ನಿರ್ಣಯದ ಮಂಡನೆ. ಈ ಒಂದು ಅಸ್ತ್ರವನ್ನು ಯಾವಾಗ ಉಪಯೋಗಮಾಡಬೇಕು ಎನ್ನುವುದರಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ.

ಆದರೆ ಪದೇ ಪದೇ ಆರು ತಿಂಗಳಿಗೊಮ್ಮೆ, ವರ್ಷಕ್ಕೆ ಒಂದೆರಡು ಸಲ, ಹೇಳಿದ್ದನ್ನೇ ಹೇಳುವ ಸಲುವಾಗಿ ಈ ಅಸ್ತ್ರವನ್ನು ಉಪಯೋಗ ಮಾಡಬಾರದು. ಹಾಗೆ ಉಪಯೋಗ ಮಾಡಿದರೆ ಅದರ ಕಿಮ್ಮತ್ತು ಉಳಿಯುವುದಿಲ್ಲ. ಇಂಥ ಅಸ್ತ್ರವನ್ನು ಆಗಿಂದಾಗ್ಗೆ ಉಪಯೋಗ ಮಾಡಿಕೊಳ್ಳುವುದಕ್ಕೆ ಪ್ರಯತ್ನಪಟ್ಟರೆ ಅದರ ಕಿಮ್ಮತ್ತು ಹೋಗುತ್ತದೆ.

ಶ್ರೀ ಎಸ್. ಗೋಪಾಲ ಗೌಡ.—ಆರು ತಿಂಗಳ ಕಾಲ ವಿಧಾನ ಸಭೆಯನ್ನು ಕರೆಯದೆ ಇದ್ದರೆ ನಾವು ಮತ್ತೇನು ಮಾಡಬೇಕು ?

Mr. SPEAKER.—I want to tell the hon'ble member Sri Gopala Gowda that casual remark may be permitted once, but if he goes on making running commentaries time and again......

ಶ್ರೀ ಎಸ್. ಗೋಪಾಲಗೌಡ.—ಅವರು ಉಪದೇಶ ಕೊಟ್ಟಾಗಲೆಲ್ಲ ನಾನು ಮತ್ತೊಂದು ಉಪದೇಶವನ್ನು ಕೊಡಲೇ ಬೇಕಾಗುತ್ತದೆ.

Mr. SPEAKER.—I am not going to permit it. The Hon'ble Member may kindly note that.

ಶ್ರೀ ಎಸ್. ಗೋಪಾಲ ಗೌಡ.—ನಾವು ಹಾಗೆ ಹೇಳುವ ಹಾಗೆ ಇಲ್ಲ ಎಂದು ನಾನು ಹೇಳುತ್ತೇನೆ.

Mr. SPEAKER.—When I am on my legs the Hon'ble Member must hear me. The member just now said that because the Hon'ble Minister is going to make a statement he is going to make a counter-statement. He has disclosed his mind and so thereafter there will be no question of further explanation. So I warn the member not to interrupt or to make running commentary or to disturb.

ಶ್ರೀ ಎಸ್. ಗೋಪಾಲಗೌಡ.—ನನಗೆ ಮಧ್ಯೆ ಇಂಟರಪ್ಟ್ ಮಾಡಲು ಹಕ್ಕಿದೆ, ಸ್ವಾಮಿ.

Mr. SPEAKER.—I am telling the member that the right of interruption does not mean right to interrupt at every point. I say that it is not a right, but if the Hon'ble Member Sri Gopal Gowda still persists that it is a right I will deal with it properly. There should be no interjections and there should be no commentaries.

An HON'BLE MEMBER.—No doubt, we have framed certain rules.

Mr. SPEAKER.—Before the member proceeds further let him answar me. The hon'ble member Sri Gopal Gowda said "for every statement made by the Minister I am going to make a counter-statement, I will persist and I will do it at all costs." Is this the proposition to which the member subscribes ?

Sri S. M. KRISHNA.—Not that I am subscribing to the proposition which Sri Gopala Gowda makes, but on the contrary it may be very difficult for us to subscribe to the proposition that you have been pleased to make earlier.

Mr. SPEAKER.—The Hon'ble Member may please tell me what I have said.

Sri S. M. KRISHNA.—You have shut out interjections and interruption..........

Mr. SPEAKER.—For every sentence of the Minister's statement, if the Hon'ble Member is going to say that he is going to interrupt every statement, let me deal with it.

ಶ್ರೀ ಪಿ. ವೆಂಕಟಗಿರಿಯಪ್ಪ.—ತಾವು ಹೇಳುವುದನ್ನು ಸಮಾಧಾನವಾಗಿ ಹೇಳಬಹುದು. ತಾವೇ ಇಷ್ಟು ಕೋಪವಾಗಿ ಹೇಳಿದರೆ ಹೇಗೆ ?

Mr. SPEAKER.—If the Hon'ble Member is not able to know that I am not getting angry, I cannot help it.

Sri V. S. PATIL (Belgaum I).—May I say a word. The only thing which we want is that when an Hon. Minister makes any statement, which is apparently false, we have to interject.

Mr. SPEAKER.—That is not what his Hon. friend is saying. He asserts that he has a right. Where is the rule ? What is the rule in support of it ?

Sri V. S. PATIL.–In order to facilitate the debate being enlivened and being humorous and not to become dull, is it not necessary to interject ?

Mr. SPEAKER.—Does it follow that for every statement made, a Member is entitled to interrupt ? Can he say that he is determined to interrupt ? He wants to say that all that I say here is more trash.

Sri V. S. PATIL.—I submit that the Chair may not be unduly excited.

Mr. SPEAKER.—I am not.

Sri V. S. PATIL.—If the Chair gets excited, the whole House will go to chaos. I request the Speaker to be calm and try to enliven the Debate.

Mr. SPEAKER.—Should not the timely advise be given to the Hon. Member who is bent upon interrupting as a matter of policy ? He discloses his intention ? He says "I am going to interrupt. It is my right and what I have said is known". Is that to be permitted ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಹೇಳುವ ಉಪದೇಶಕ್ಕೆ ನಾವೂ ಒಂದು ಉಪದೇಶ ಹೇಳಬೇಕಾಗುತ್ತದೆ. ಆದರೆ ಮಾನ್ಯ ಸದಸ್ಯರು ತಾವು ಆಡಳಿತ ಪಕ್ಷಕ್ಕೇ ಸೈಡ್ ಮಾಡುತ್ತಿದ್ದೀರೆಂದು ಹೇಳಲಿಲ್ಲ. ತಾವು ಇಲ್ಲಿರುವ ಮುಖ್ಯ ಉದ್ದೇಶ, just to bring the whole thing under control.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಇದೇ ತತ್ವವನ್ನು ಆ ಕಡೆ ಹೇಳಿ. ನಾವು ಏನಾದರೂ ಹೇಳಬೇಕೆಂದಾಗ ಈಲ್ಡ್ ಆಗುವ ತತ್ವವನ್ನು ಅವರೂ ಸಹ ಅನುಸರಿಸಬೇಕು.

Mr. SPEAKER.—When more serious allegations were being made, I did not permit any disturbance. Now when they are required to listen, if it does not suit the argument or if they feel that the statement is incorrect, can they say that they are determined to interrupt ? This disclosed something very unhappy on the Floor of the Houe. The Hon'ble Minister will continue.

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳುತ್ತಿದ್ದೆ. ಯಾವಾಗಲಾದರೂ ಈ ಸಭೆಯಲ್ಲಿ ಅವಿಶ್ವಾಸ ನಿರ್ಣಯ ಚರ್ಚೆಗೆ ಬಂದಿದೆ ಎಂದು ಹೇಳಿದಾಗ ಸಂಸ್ಥಾನದ ಜನತೆಯ ಎಲ್ಲರ ಕಿವಿಗಳು ಈ ಕಡೆಯೇ ಇರುತ್ತವೆ. ಅದರ ಸಲುವಾಗಿ ಈ ಅವಿಶ್ವಾಸ ನಿರ್ಣಯ ತರುವ ಮುಂದೆ ವಿರೋಧ ಪಕ್ಷದ ಮೇಲೆ ಒಂದು ಕಟುತರವಾದ ಜವಾಬ್ದಾರಿ ಇರುತ್ತದೆ. ಅದನ್ನು ಆ ಪಕ್ಷದವರು ತಿಳಿದುಕೊಂಡು ಈ ನಿರ್ಣಯವನ್ನು ತಂದರೆ ಅದಕ್ಕೆ ಮರ್ಯಾದೆ ಬರುತ್ತದೆ ಮತ್ತು ಈ ಚರ್ಚೆಗೆ ಕಿಮ್ಮತ್ತು ಬರುತ್ತದೆ. ಆಗ ಆ ಭಾಗದಲ್ಲಿ ಕುಳಿತವರು ನಮ್ಮ ತಪ್ಪು ಏನಿದೆ ಎಂಬುದನ್ನು ಸರಿಯಾಗಿ ತಿಳಿದುಕೊಂಡು ಹೇಳುವುದರಿಂದ ನಮಗೆ ಅದನ್ನು ತಿದ್ದಿಕೊಳ್ಳುವುದಕ್ಕೆ ಅವಕಾಶ ಬರುತ್ತದೆ.

[Sri S. Gopala Gowda stood and interrupted].

Mr. SPEAKER.—I will not permit this kind of commentry. If the Member is unable to agree with my ruling, he can do whatever he likes. But if he ignores what I have said, if he seems to think that he is something above the House, that is something I will not permit.

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳುತ್ತೇನೆ, ಇದರಲ್ಲಿ ಪುನರಾವೃತ್ತಿಗಳಾಗಿವೆ. ಕೆಲವು ವಿಚಾರಗಳನ್ನು ಅವರು ಬಂದಾಗಿನಿಂದ ಏನು ಹೇಳುತ್ತಿದ್ದಾರೋ ಅವನ್ನೇ ಈಗಲೂ ಹೇಳುತ್ತಿದ್ದಾರೆ. ಶರಾವತಿ ವಿಚಾರ, ರಾಕ್‌ಫಿಲ್ ವಿಚಾರ, ಯಾವನೋ ಒಬ್ಬ ಕಂಟ್ರಾಕ್ಟರಿಗೆ ಅವಾರ್ಡ್ ಪಾಸ್‌ಮಾಡಿದ ವಿಚಾರ, ಆಹಾರ ಪರಿಸ್ಥಿತಿ ವಿಚಾರ, ಅವಿಶ್ವಾಸ ನಿರ್ಣಯ, ಶ್ವೇತಪತ್ರ, ಮುಂತಾದುವುಗಳ ವಿಚಾರವಾಗಿ ಹಿಂದೆ ಬಡ್ಜೆಟ್ ಅಧಿವೇಶನದಲ್ಲಿ ಬೇಕಾದಷ್ಟು ಚರ್ಚೆಮಾಡಿದ್ದೇವೆ. ನಾವೂ ಸಹ ಉತ್ತರಕೊಟ್ಟಿದ್ದೇವೆ. ಮತ್ತೆ ಅದನ್ನೇ ಅವರೂ ತೆಗೆದುಕೊಂಡು ಬಂದಿದ್ದಾರೆ. ನಾನು ಈ ಪ್ರಶ್ನೆಯನ್ನು ಏಕೆ ಒತ್ತಿ ಹೇಳುತ್ತೇನೆಂದರೆ, ಯಾವನೋ ಒಬ್ಬ ಕಂಟ್ರಾಕ್ಟರಿಗೆ ಅವಾರ್ಡ್ ಕೊಟ್ಟ ವಿಷಯದಲ್ಲಿ ಜವಾಬ್ದಾರಿಯಿಂದ ಅಪಾದನೆ ಮಾಡಬೇಕಾದರೆ, ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿಮಂಡಲದಮೇಲೆ ಅಪಾದನೆಮಾಡುವುದಕ್ಕೆ ಸಾಧ್ಯವಿಲ್ಲ. ರಾಕ್‌ಫಿಲ್ ಬಗ್ಗೆ ಯಾವನೋ ಒಬ್ಬ ಕಂಟ್ರಾಕ್ಟರ್ ಇದಕ್ಕೆ ಡಿಸೈನ್ ಬದಲಾಯಿಸಿ ಇನ್ನೊಂದು ಟೆಂಡರ್ ಕೊಟ್ಟಾಗ್ಗೆ ಆ ಚಾರ್ಜು ಸರ್ಕಾರದ ಮೇಲೆ ಮಾಡುವುದಕ್ಕಾಗುವುದಿಲ್ಲ. ಅವರಲ್ಲೂ ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿಮಂಡಲದಮೇಲೆ ಈ ರೀತಿ ಚಾರ್ಜುಮಾಡುವುದಕ್ಕೆ ಸಾಧ್ಯವಿಲ್ಲ.

ಈ ಕಾಂಗ್ರೆಸ್ ಸರ್ಕಾರದ ಮೇಲೆ ಶ್ರೀಮಾನ್ ಶಿವಪ್ಪನವರು ಈ ಅವಿಶ್ವಾಸ ನಿರ್ಣಯವನ್ನು ತಂದು ಆ ಬಗ್ಗೆ ಮಾತನಾಡುವಾಗ ಪ್ರತಿಯೊಂದು ವಿಚಾರವನ್ನು ಚೆನ್ನಾಗಿ ತೆಗೆದುಕೊಂಡು ಅವೇಲೆ ನಮ್ಮ ಮೇಲೆ ಚಾರ್ಜು ಮಾಡಿದ್ದರೆ ಬಹಳ ಚೆನ್ನಾಗಿತ್ತು. ಇವರು ಆ ರೀತಿ ಮಾಡಲಿಲ್ಲವೆಂದು ನನಗೆ ತೋರುತ್ತದೆ. ಮೊದಲಿನಿಂದಲೂ ಇವರು ಏನೇನು ಹೇಳಿದ್ದಾರೋ ಅವೆಲ್ಲವೂ ಸತ್ಯಕ್ಕೆ ದೂರವಾದುದೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇವರು ನಮ್ಮ ಮಂತ್ರಿಮಂಡಲದಮೇಲೆ ವಿಶ್ವಾಸವಿಲ್ಲವೆಂಬ ರಾಗವನ್ನೇ ಹಾಡುತ್ತಿದ್ದಾರೆ. ರಾಕ್‌ಫಿಲ್ ಪ್ರಕರಣ ಮುಗಿದುದು ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗುವುದಕ್ಕೆ ಮುಂಚೆ, ಯಾವನೋ ಒಬ್ಬ ಕಂಟ್ರಾಕ್ಟರಿಗೆ ಅವಾರ್ಡ್ ದುಡ್ಡು ಕೊಟ್ಟದ್ದು ಅವರು ಮುಖ್ಯಮಂತ್ರಿಗಳಾಗುವುದಕ್ಕೆ ಮುಂಚೆ. ಆದ್ದರಿಂದ ಇವರು ನಮ್ಮ ಮೇಲೆ ಭ್ರಷ್ಟಾಚಾರದ ಮಾತನ್ನು ಹೇಳುವುದು ಸಾಧ್ಯವಾದುದಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಎಸ್. ಶಿವಪ್ಪ.—ಕಂಟ್ರಾಕ್ಟರಿಗೆ ದುಡ್ಡು ಕೊಟ್ಟದ್ದು ನಿಮ್ಮ ಕಾಲದಲ್ಲಿ.

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿದ್ದಾದಮೇಲೆ ಮಾನ್ಯ ಸದಸ್ಯರು ಕೇಳುವುದನ್ನು ಕೇಳಲಿ. ಇವತ್ತು 16 ಚಾರ್ಜುಗಳನ್ನೆಲ್ಲಾ ಕಟ್ಟಿಕೊಂಡು ದೆಹಲಿಗೆ ಹೋಗಿ ಅಲ್ಲಿ ವಿರೋಧಪಕ್ಷದಲ್ಲಿರತಕ್ಕ ಕೆಲವರೊಡನೆ ನಮ್ಮ ದೇಶದ ರಾಷ್ಟ್ರಪತಿಗಳಿಗೆ ಒಪ್ಪಿಸಿ ಬಂದಿದ್ದಾರೆ. ಈ ನಾಲ್ಕು ದಿವಸಗಳಿಂದಲೂ ಸತತವಾಗಿ ಇಲ್ಲಿ ಕುಳಿತು ಅಪಾದನೆಗಳ ವಿಚಾರದಲ್ಲಿ ಎಷ್ಟು ನಿಜಾಂಶವಿದೆ ಎಂಬುದನ್ನು ನೋಡಲಾಗಿ ಇವತ್ತು ಅವೆಲ್ಲವೂ ಬಯಲಿಗೆ ಬಂದಿದೆ. ಇದರಲ್ಲಿ ಏನು ಗೊತ್ತಾಗುತ್ತಿದೆಯೆಂದರೆ, ಅವರು ಪದೇಪದೇ ಹೇಳುವ ಚಾರ್ಜಸ್ಸನ್ನೇ ಮತ್ತೆ ರಿಪೀಟ್ ಮಾಡಿದ್ದಾರೆಯೇ ಹೊರತು ಹೊಸದೇನೂ ಅವರ ಬಾಯಿನಿಂದ ಬರಲಿಲ್ಲವೆಂಬುದು ವ್ಯಕ್ತವಾಗುತ್ತಿದೆ. ಅವರು ಅಲ್ಲಿ ಕೊಟ್ಟಿರತಕ್ಕ ವಿಷಯಗಳ ಮೇಲೆ ಏನೊಂದೂ ಮಾತನಾಡಲಿಲ್ಲ, ಇಲ್ಲಿ ಕೊಟ್ಟ ಚಾರ್ಜಸ್ ಬೇರೆಯಾಗಿವೆ. ಅವರು ಅಲ್ಲಿ ಹೇಳಿ ಬಂದಿರುವುದು ಕೇವಲ 3—4 ಚಾರ್ಜುಗಳು.

ಶ್ರೀ ಎಸ್. ಎಂ. ಕೃಷ್ಣ.—ಅವರಿಗೂ ಕಳುಹಿಸಿರುತ್ತೇವೆ. ನಿಮ್ಮಲ್ಲಿ ನಮಗೆ ಅಂಜಿಕೆ ಇಲ್ಲ, ಬೆದರಿಕೆ, ಹೆದರಿಕೆ ಇಲ್ಲ.

[Sri Patil rose to speak]

Mr. SPEAKER.—Is this the way to interrupt. He calls it humour. There must be a limit to this kind of humour.

ಶ್ರೀ ವೀರೇಂದ್ರಪಾಟೀಲ್.—ವಿರೋಧಪಕ್ಷದವರಲ್ಲಿ ಬತ್ತಳಿಕೆಯಲ್ಲಿದ್ದ ಬಾಣಗಳೆಲ್ಲವೂ ಸೋತು ಹೋಗಿರಬಹುದು. ಈ ನಾಲ್ಕುದಿವಸಗಳ ಚರ್ಚೆಯಲ್ಲಿ ಇದ್ದಂಥ ಹಳೆಯ ಬಾಣಗಳೂ ಸಹ

ಬಹುಶಃ ಸೋತುಹೋಗಿರಬಹುದು. ಇವರು ಕುರುಕ್ಷೇತ್ರದ ಯುದ್ಧದ ಹಾಗೆ 15—16 ಸಲ ಈ ರೀತಿ ಮಂತ್ರಿಮಂಡಲದ ಮೇಲೆ ಚಾರ್ಜಸ್ ಕಟ್ಟಿಕೊಂಡು ದೆಹಲಿಗೆ ತೀರ್ಥಯಾತ್ರೆ ಮಾಡಿದ್ದಾರೆ. ಅದು ಏಕೆ ಎಂಬುದು ನನಗೆ ಅರ್ಥವಾಗಲಿಲ್ಲ. ಇದರ ಹಿಂದೆ ಏನೋ ಒಂದು ಗುಟ್ಟು ಇದೆ ಇಲ್ಲಿ ಚರ್ಚೆಮಾಡಿ ಹಿಂದೆ ಮುಗಿಸುತ್ತಿದ್ದೆವು. ಈಗ ಈ ಸಭೆಗೆ ಒಮ್ಮೊಂದೊಮ್ಮೆ ಈ ರೀತಿ ನಿರ್ಣಯ ಬರುತ್ತಿರುವುದಲ್ಲದೆ ನಮ್ಮ ಮೇಲೆ ಮಾಡಿರತಕ್ಕ ಚಾರ್ಜಸ್ ಪತ್ರಿಕೆಗಳಲ್ಲಿಯೂ ಬಂದುವು. ಎರಡನೆಯವರು ಮೊದಲಿನವರಿಗಿಂತ ಮುಂದೆ ಹೋಗಿದ್ದೀರೆಂದು ಹಾಗೆ ಮಾಡುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅದು ಯಾರು, ಎರಡನೆಯವರು ?

ಶ್ರೀ ವೀರೇಂದ್ರ ಪಾಟೀಲ್.—ಯಾರೋ ಬೇರೆಯವರು. ಹಿಂದೆ ಮೊದಲು 24 ಚಾರ್ಜುಗಳನ್ನು ನಮ್ಮ ಮಂತ್ರಿಮಂಡಲದಮೇಲೆ ಮಾಡಿದ್ದರು. ಈಗ ಅದೇ 16 ಆಯಿತು. ಅವು ಈಗ ಪತ್ರಿಕೆಗಳಲ್ಲಿ ಬಂದುವು. ಅವರ ಅಂತರಾತ್ಮ ಸಾಕ್ಷಿಯಾಗಿ ಹೇಳಲಿ, ಆ ಚಾರ್ಜಸ್ ಹಿಡಿದುಕೊಂಡು ಎರಡನೆಯವರ ಮುಂದೆ ಇವರು ಓಡುತ್ತಿದ್ದಾರೆ. ಅವರಿಗೆ ಸೇರಿದ ಹಕ್ಕನ್ನು ನಮಗೆ ಬಿಡಬಾರದೆಂದು ತೀರ್ಥಯಾತ್ರೆ ಮಾಡಿದ್ದಾರೆ. ಈ ಹೋತ್ತು ಬೆಳಿಗ್ಗೆ ಶ್ರೀಮಾನ್ ಲಾಲ್‌ಬಹದ್ದೂರ್ ಶಾಸ್ತ್ರಿಯವರನ್ನು ಕಂಡು ಹೇಳಿರುವ ಹಾಗೆ ಕಾಣುತ್ತದೆ, ಅದು ಅಲ್ಲಿ ಕ್ಯಾಬಿನೆಟ್‌ನಲ್ಲಿ ಇನ್ನೂ ವಿಚಾರ ಮಾಡಲಿಲ್ಲ, ಪರಿಶೀಲನೆ ಮಾಡುತ್ತೇವೆ ಎಂಬುದಾಗಿ ಹೇಳಿದ್ದಾರೆ. 16 ಚಾರ್ಜಸ್ ಪಟ್ಟಿಯನ್ನು ರಾಷ್ಟ್ರಪತಿಗಳಿಗೂ ಸಹ ತಿಳಿಸಿದ್ದಾರೆ. ಪ್ರಧಾನಮಂತ್ರಿಗಳು ಕ್ಯಾಬಿನೆಟ್ಟಿಗೆ ಅದನ್ನು ಕಳುಹಿಸಿರುವುದರಿಂದ ಅವರು ಅಲ್ಲಿ ಅದನ್ನು ಪರಿಶೀಲನೆಮಾಡುತ್ತಾರೆ. ಅಲ್ಲಿ ಅವಿಶ್ವಾಸ ನಿರ್ಣಯದ ಬಗ್ಗೆ ಅವರು ಏನು ನಿರ್ಣಯಮಾಡುತ್ತಾರೋ ಅದಕ್ಕೆ ನಾವೂ ಅವರೂ ಇಬ್ಬರೂ ತಲೆಬಾಗಿಸೋಣ, ವಿರೋಧ ಪಕ್ಷದವರು ಆರೋಪಗಳ ಪಟ್ಟಿಯನ್ನು ಹೊತ್ತು ದೆಹಲಿಯಾತ್ರೆ ಮಾಡಿ ಅದನ್ನು ರಾಷ್ಟ್ರಪತಿಯವರಿಗೆ ಒಪ್ಪಿಸಿರುವಾಗ ಅಲ್ಲಿ ಅವರು ಏನುಮಾಡುತ್ತಾರೆ ಎನ್ನುವಂಥಾದ್ದನ್ನು ಕಾದು ನೋಡುವುದಕ್ಕೆ ತಾಳ್ಮೆ ಇಲ್ಲದೆ ಇಲ್ಲಿ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದಾರೆ.

Sri C. J. MUCKANNAPPA.—He has a number of bad boys ; he has no courage to deal with them.

Mr. SPEAKER.—Is the Honourable Member assuming that he is a bad boy ?

Sri C. J. MUCKANNAPPA.—They are assuming.

Mr. SPEAKER.—Let the member not accept that.

Sri C. J. MUCKANNAPPA.—He has no courage to deal with the ex-ministers.

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ನಮಗೆ ಬಿಡಿ. ನಮ್ಮ ಸಂಸಾರವನ್ನು ನಾವು ಮಾಡಿಕೊಳ್ಳುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿಮ್ಮ ಸಂಸಾರ ಎಂದು ನೀವು ಏನುಬೇಕಾದರೂ ಮಾಡಿಕೊಳ್ಳಬಹುದು.

ಶ್ರೀ ವೀರೇಂದ್ರಪಾಟೀಲ್.—ವಿರೋಧ ಪಕ್ಷದವರಾದ ನೀವು ಪ್ರೆಸ್ ಕಾನ್‌ಫರೆನ್ಸ್‌ಮಾಡಿ ಹೇಳಿಕೆಗಳನ್ನು ಕೊಟ್ಟಿದ್ದೂ, ಕೊಟ್ಟಿದ್ದೆ !

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನೀವು ಅಸೆಂಬ್ಲಿ ಮೀಟಿಂಗ್ ಅನ್ನು ಏತಕ್ಕೆ ಕರೆಯಲಿಲ್ಲ ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆ ಬೇರೆ ಕಾರಣಗಳಿವೆ. ಆದರೆ ನಾವು ಪ್ರೆಸ್ ಸ್ಟೇಟ್‌ಮೆಂಟ್ ಹೇಳುವುದಕ್ಕೆ ಸಾಧ್ಯವಿಲ್ಲ. ನಾವು ಒಂದು ಜವಾಬ್ದಾರಿಯನ್ನು ಹೊತ್ತಿದ್ದೇವೆ. ನಾವು ಏನಾದರೂ ಒಂದು ಸ್ಟೇಟ್‌ಮೆಂಟ್ ಕೊಡಬೇಕಾದರೆ...

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮುಖ್ಯಮಂತ್ರಿಗಳು ಡಿಲ್ಲಿಗೆ ಹೋಗಿ ಬಂದರೆ ಸ್ಟೇಟ್‌ಮೆಂಟ್ ಬರುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಅನೇಕ ಸರ್ಕಾರದ ಧೋರಣೆಗಳು ಇವೆ. ಆ ಸ್ಟೇಟ್‌ಮೆಂಟ್‌ಗಳು ಪತ್ರಿಕೆಯಲ್ಲಿ ಬರುವುದು ಬೇರೆ, ಭ್ರಷ್ಟಾಚಾರದ ಸ್ಟೇಟ್‌ಮೆಂಟ್‌ಗಳು ಬರುವುದು ಬೇರೆ. ಅದನ್ನು ಮಾನ್ಯ ಸದಸ್ಯರು ಸ್ವಲ್ಪ ತಿಳಿದುಕೊಳ್ಳಬೇಕು. ಎಲ್ಲಾ ಸ್ಟೇಟ್‌ಮೆಂಟ್‌ಗಳೂ ಒಂದೇ ಆಗು

(ಶ್ರೀ ವೀರೇಂದ್ರ ಪಾಟೀಲ್)

ವುದಿಲ್ಲ. ಈ ಚರ್ಚೆಯಲ್ಲಿ ಭಾಗವಹಿಸಿದಂತಹ ಮಾನ್ಯ ಸದಸ್ಯರ ಪೈಕಿ, ವಿರೋಧಪಕ್ಷದ ಕೆಲವು ಮಾನ್ಯ ಸದಸ್ಯರು ಬಹಳ ಮೇಲ್ಮಟ್ಟದಲ್ಲಿ ಮಾತನಾಡಿದ್ದಾರೆ. ಆದರೆ ಕೆಲವರ ಭಾಷಣ ಯಾವ ಮಟ್ಟದಲ್ಲಿ ಇರಬೇಕೋ ಆ ಮಟ್ಟದಲ್ಲಿ ಇರಲಿಲ್ಲ ಎನ್ನುವ ಮಾತನ್ನ ನಾನು ಸ್ಪಷ್ಟವಾಗಿ ಹೇಳಬಯಸು ತ್ತೇನೆ. ನಿಜವಾಗಿಯೂ ನಾನು ಬಹಳ ದುಃಖದಿಂದ ಹೇಳಬೇಕಾಗುತ್ತದೆ. ವಿಚಾರಗಳನ್ನಾದರೂ ಹೇಳುವುದಕ್ಕೆ ಒಂದು ಮಿತಿ ಇದೆ. ವಿಚಾರಗಳನ್ನು ಹೇಳುವುದರಲ್ಲಿ ಬೈದು ಹೇಳಿದರೂ ನಮಗೆ ಗೊತ್ತಾಗುತ್ತದೆ. ಶ್ರೀಮಾನ್ ಕೃಷ್ಣಾ ಅವರು ಹೇಳುವ ಭಾಷೆಯಲ್ಲಿ ಮಾತನಾಡಿದರೂ ನಮಗೆ ಗೊತ್ತಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ನನ್ನನ್ನು ಅವಹೇಳನಮಾಡುವುದಕ್ಕೆ ನೀವು ಆ ರೀತಿ ಹೇಳು ತ್ತಿದ್ದೀರಾ?

ಶ್ರೀ ವೀರೇಂದ್ರ ಪಾಟೀಲ್.—ಹಾಗೇನೂ ಇಲ್ಲ. ಈಗ 3 ವರ್ಷಗಳಿಂದಲೂ ಶ್ರೀಮಾನ್ ಮರುಳಪ್ಪನವರ ವಿಷಯ ನನಗೆ ಗೊತ್ತಿರಲಿಲ್ಲ. ಅವರ ಹೆಸರಿಗೆ ತಕ್ಕಂತೆ ಅವರು ಇರಬೇಕೆಂದು ನಾನು ತಿಳಿದುಕೊಂಡಿದ್ದೆ. ನಿಜವಾಗಿಯೂ ಅವರ ಭಾಷಣವನ್ನು ಕೇಳಿ ನನಗೆ ಬಹಳ ದುಃಖ ವಾಯಿತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮರುಳಸಿದ್ಧನ ಪೂಜೆಯನ್ನು ಮಾಡಿ ಮುಕ್ತಿಯನ್ನು ಪಡೆಯೋ ಹೇ ಮಾನವಾ ಎಂದು ಹೇಳಿರುವಾಗ ನೀವು ಹೀಗೆ ಹೇಳಿದರೆ ಹೇಗೆ ಸ್ವಾಮಿ ? (ನಗು)

ಶ್ರೀ ವೀರೇಂದ್ರ ಪಾಟೀಲ್.—ನಿಜವಾಗಿಯೂ ಅವರ ಭಾಷಣವನ್ನು ಕೇಳಿ ನನಗೆ ಬಹಳ ದುಃಖವಾಯಿತು. ಅವರಿಗೆ ಅದೆಷ್ಟು ಕೋಪ ಬಂದಿತ್ತೋ ಏನೋ, ಅವರು ರುದ್ರಾವತಾರವನ್ನೇ ನಾದರೂ ತಾಳಿದ್ದರೋ ಏನೋ ಎಂದು ನನಗೆ ಭಾಸವಾಯಿತು. ಒಂದೊಂದು ಸಲ ಅವರು ಡ್ರಾಮಾವನ್ನೇನಾದರೂ ಅಭಿನಯಿಸುತ್ತಿದ್ದಾರೋ ಏನೋ ಎಂದು ನನಗೆ ಗೊತ್ತಾಯಿತು. ಅವರು ಮಾತನಾಡುತ್ತಾ ಎಲ್ಲಿಯವರೆಗೂ ಹೋದರು ಎಂದರೆ ಮುಖ್ಯಮಂತ್ರಿಗಳು ಮುತ್ಸಾಳತನದ ವರ್ತನೆಯನ್ನು ಮಾಡುತ್ತಿದ್ದಾರೆ ಎಂದು ಹೇಳಿದರು. ಆ ಒಂದು ಮಟ್ಟದವರೆಗೂ ಮಾತನಾಡುವುದಾದರೆ ಅದು ನಮ್ಮ ಸಂಸ್ಕೃತಿಗೆ ಶೋಭೆಯನ್ನು ತರುತ್ತದೆಯೇ? ಅದನ್ನು ವಿಚಾರ ಮಾಡುವುದಕ್ಕೆ ಅವರಿಗೇ ಬಿಟ್ಟುಬಿಡುತ್ತೇನೆ.

ಇನ್ನೊಂದು ವಿಚಾರ. ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಾವು ಪ್ರಜಾರಾಜ್ಯದ ಎಳೆಯವಯಸ್ಸಿನಲ್ಲಿದ್ದೇವೆ. ಶ್ರೀಮಾನ್ ಕೃಷ್ಣಾ ಅವರು ಹೇಳಿದ ಹಾಗೆ ನಮ್ಮ ಸಮಾಜ ಹೇಗಿದೆ ಎಂಬುದು ನಮಗೆ ಗೊತ್ತಿದೆ. ಈ ದೃಷ್ಟಿಯಿಂದ ಇವೊತ್ತು ನಮ್ಮ ವಿರೋಧಪಕ್ಷದ ನಾಯಕರಿಗೆ ಅವರ ಮುಖಾಂತರ ತಮ್ಮೆಲ್ಲರಿಗೂ ನಾನು ಹೇಳುವುದು ಏನೆಂದರೆ, ಡೆಮಾಕ್ರಸಿ ಉಳಿಯಬೇಕಾದರೆ ವಿರೋಧಪಕ್ಷದವರು ಕೊನೆಯವರೆಗೂ ವಿರೋಧ ಪಕ್ಷದಲ್ಲೇ ಇರುತ್ತೇವೆಂದು ತಿಳಿದುಕೊಂಡು ಅವರು ಪಕ್ಷವನ್ನು ಕಟ್ಟಿದರೆ ಡೆಮಾಕ್ರಸಿ ಬೆಳೆಯುವುದಿಲ್ಲ. ಅವರು ಒಂದಲ್ಲ ಒಂದು ದಿವಸ ನಾವೂ ಈ ಕಡೆ ಬರುವವರಿದ್ದೇವೆ ಎಂದು ಮಾತನಾಡಿದರೆ ಒಳ್ಳೆಯದು.

ಶ್ರೀ ಜಿ. ಮರುಳಪ್ಪ.—ವಿರೋಧಪಕ್ಷದವರಿಗೆ ಪವರ್ ಬಂದರೆ ನಾನು ನಿಮ್ಮ ಕಡೆ ಬರುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಇದು ಅಷ್ಟು ಲಘುವಾಗಿ ಮಾತನಾಡುವಂಥ ವಿಷಯವಲ್ಲ. ಪ್ರಜಾರಾಜ್ಯದಲ್ಲಿ ಮುಖ್ಯಮಂತ್ರಿಗಳಾಗತಕ್ಕಂಥವರೆಲ್ಲರೂ ಬರೀ ದುಡ್ಡು ಹೊಡೆಯುವುದಕ್ಕೆ ಬರು ತ್ತಾರೆಯೆ ? ಅವರು ಅಧಿಕಾರಕ್ಕೆ ಬರುವುದಕ್ಕಿಂತ ಮೊದಲು ಅವರೇನು ಕೇರ್ ಆಫ್ ಫುಟ್‌ಪಾತ್ ಆಗಿರುವುದಿಲ್ಲ. ಅವರಿಗೇನು ಅವರ ತಂದೆ ತಾಯಿಗಳ ಆಸ್ತಿಪಾಸ್ತಿಗಳು ಏನೂ ಇರುವುದಿಲ್ಲವೇ ? ಮುಖ್ಯಮಂತ್ರಿಗಳು ಮಹಡಿಯ ಮನೆಯ ಮೇಲೆ ಮಹಡಿಯನ್ನು ಕಟ್ಟಿದರು, ಲಕ್ಷಾಂತರ ರೂಪಾಯಿ ಗಳನ್ನು ಗಳಿಸಿದರು ಎಂದು ಹೇಳತಕ್ಕಂಥಾದ್ದು ಸರಿಯಲ್ಲ. ನಾವು ಅಂಥಾ ಒಂದು ಸಮಾಜವನ್ನು ಬೆಳೆಸುತ್ತಾ ಹೋದರೆ, ಆ ರೀತಿ ಬೆಳೆಸುವುದಕ್ಕೆ ಪ್ರೋತ್ಸಾಹ ಕೊಟ್ಟರೆ, ಆ ಭೂತ ನಮ್ಮನ್ನು ಸುಟ್ಟು ಹಾಕುತ್ತದೆ. ಅದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕಾಗುತ್ತದೆ. ಇವೊತ್ತು ಮನುಷ್ಯನಿಗೆ ನೀರು, ಆಹಾರ, ಗಾಳಿ ಎಷ್ಟು ಮುಖ್ಯವೋ ಆತ್ಮಗೌರವವೂ ಅಷ್ಟೇ ಮುಖ್ಯ. ನಾನು ಬಹಳ ದುಃಖದಿಂದ ಈ ಮಾತನ್ನು ಹೇಳುತ್ತೇನೆ, ನಾನು ಲಘುವಾಗಿ ಹೇಳುತ್ತಿಲ್ಲ. ವಿರೋಧಪಕ್ಷದ ಮಾನ್ಯ ಸದಸ್ಯರು ಇಂಥಾ ಮಾತುಗಳನ್ನು ಆಡತಕ್ಕದ್ದು ಸರಿಯಲ್ಲ. ಎಂ. ಎಲ್. ಎ. ಗಳಾಗಲೀ ಅಥವಾ ಬೇರೆ ಯಾರಾದರೂ ಆಗಲೀ ನಮ್ಮ ಸಮಾಜದಲ್ಲಿ ನಿಂದಕರಿಗೇನೂ ಕಡಿಮೆ ಇಲ್ಲ.

ಬಹುಶಃ ಪುರಂದರದಾಸರೂ ಹೇಳಿಕೊಂಡು ಬಂದಿದ್ದಾರೆ. ಅನೇಕ ಮಹಾನುಭಾವರು ತಮ್ಮ ಅಹಂಭಾವವನ್ನು ತ್ಯಜಿಸಿದ್ದಾರೆ. ಆದರೆ ಸಮಸ್ಯಾ ದೃಷ್ಟಿಯಿಂದ ನಾವು ಸಮಾಜ ನಿರ್ಮಾಣ ಮಾಡುತ್ತೇವೆ. ಅದನ್ನು ತಿಳಿದುಕೊಳ್ಳಬೇಕು. ಇವತ್ತು ಎಲ್ಲಾ ಮನುಷ್ಯರಿಗೂ ನೀರು, ಹವೆ, ಅನ್ನ ಎಷ್ಟು ಮುಖ್ಯವೋ, ಅಷ್ಟೇ ಅಭಿಮಾನವೂ ಮುಖ್ಯ. ವಿರೋಧ ಪಕ್ಷದವರಿಗೆ ಆತ್ಮಗೌರವ ಎಷ್ಟಿದೆಯೋ, ನಮ್ಮ ಕಡೆಯವರಿಗೂ ಅಷ್ಟೇ ಇದೆ. ಆದ್ದರಿಂದ ಹೀಗೆ ನಮ್ಮ ಆತ್ಮಗೌರವಕ್ಕೆ ಭಂಗತರುವ ಕೆಲಸ ವಿರೋಧ ಪಕ್ಷದವರು ಮಾಡಬಾರದು. ಅದಕ್ಕಾಗಿ ನಮ್ಮ ದೇಶದ ಒಬ್ಬ ಗಣ್ಯ ನಾಯಕರು ಹೇಳಿದ ಹಾಗೆ, ಯಾರು ಭ್ರಷ್ಟಾಚಾರದ ಆರೋಪಗಳನ್ನು ಮಾಡುತ್ತಿದ್ದಾರೋ ಅವರು ಮೊದಲು ತಮ್ಮ ಅಂತರಾತ್ಮವನ್ನು ಶೋಧಿಸಿಕೊಳ್ಳಬೇಕು. ಬೇರೆಯವರಮೇಲೆ ಅಪಾದನೆಗಳನ್ನು ಮಾಡುವುದಕ್ಕೆ ಮುಂಚೆ ಹಾಗೆಮಾಡುವವರು ತಮ್ಮಲ್ಲಿ ಎಷ್ಟು ಪ್ರಾಮಾಣಿಕತೆ ಇದೆ, ಆ ಅಪಾದನೆಗಳು ನಿಜವೇ ಎಂದು ವಿಚಾರಮಾಡಿ, ಚಾರ್ಜಸ್ ಮಾಡಿ ಎಂದು ಹೇಳಿದ್ದಾರೆ ಶ್ರೀ ಶಿವಪ್ಪನವರು. ಇದು ಕ್ಯಾರೆಕ್ಟರ್ ಅಸ್ಸಾಸಿನೇಶನ್ ಅಲ್ಲ, ಇದು ಕ್ಯಾರೆಕ್ಟರ್ ಪ್ಯೂರಿಫಿಕೇಷನ್ ಎಂದು ಹೇಳಿದರು. ಹೀಗೆಲ್ಲಾ ತಾವು ಸ್ಕ್ರೀನ್ ಮಾಡುವುದಾದರೆ ಕ್ಯಾರೆಕ್ಟರ್ ಪ್ಯೂರಿಫೈ ಮಾಡುವ ಸ್ವತ್ತು ತಮ್ಮ ಕೈಯಲ್ಲಿದ್ದರೆ, ದೇವರೇ ಗತಿ! ತಾವು ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರ ಮೇಲೆ ಇದೀಗ ಮೊದಲನೆಯ ಸಲ ಭ್ರಷ್ಟಾಚಾರದ ಆರೋಪಣೆ ಮಾಡಿದ್ದೀರಿ ಇದು ಮೊದಲನೆಯಸಾರಿ ಅನ್ನುವುದನ್ನು ನಾನು ಒಪ್ಪುತ್ತೇನೆ. ಮುಖ್ಯಮಂತ್ರಿಗಳಿಗೆ 'ನಿಮ್ಮ ಕಾಲದಲ್ಲಿ ಈ ರೀತಿಯಾದರೆ, ನಿಮಗೆ ಕೆಟ್ಟ ಹೆಸರು ಬರುತ್ತದೆ, ಆದ್ದರಿಂದ ಎನ್‌ಕ್ವೈರಿ ಮಾಡಿ' ಎಂದು ಹೇಳಿದ್ದು ಕೇಳಿದ್ದೇನೆ. ಇದಕ್ಕೆ ಮೊದಲು ಎರಡುಸಾರಿ ನೊ-ಕಾನ್‌ಫಿಡೆನ್ಸ್ ಮೋಷನ್ ತಂದಿದರೂ, ಬಹುಶಃ ಇದೇ ಮೊದಲನೇ ಸಾರಿ, ಅವರ ನಾಲ್ವತ್ತು ವರ್ಷಗಳ ರಾಜಕೀಯ ಜೀವನದಲ್ಲಿ ಅವರಮೇಲೆ ಭ್ರಷ್ಟಾಚಾರ ಆರೋಪಣೆ ಮಾಡಿದ್ದು. ಇಂತಹ ತಿರುಳಿಲ್ಲದ ಆರೋಪವನ್ನು ಮಾಡಿ ರಾಜ್ಯದ ಹಿತಕ್ಕೆ ಧಕ್ಕೆ ತರುತ್ತಿದ್ದೀರಿ ಎಂದು ತಾವು ತಿಳಿದುಕೊಳ್ಳಬೇಕು. ದೇಶದ ಮುಂದೆ, ಅಂದರೆ ನಮ್ಮ ರಾಜ್ಯದ ಮುಂದೆ, ಗಹನವಾದ ಸಮಸ್ಯೆಗಳಿವೆ. ಮೂರನೆ ಯೋಜನೆಗೆ ನಮ್ಮ ರಿಸೋರ್ಸಸ್ ಹೆಚ್ಚು ಮಾಡುವುದರಲ್ಲಿ ನಮಗೆ ಶಾರ್ಟ್‌ಫಾಲ್ ಆಗಿದೆ. ನಾಲ್ಕನೆಯ ಯೋಜನೆಗೆ ನಮ್ಮ ಔಟಲೆಯನ್ನು ಐನೂರು ಕೋಟಿ ರೂಪಾಯಿ ಮಾಡಬಹುದು ನಮಗೆ ಇನ್ನೂ ಜಾಸ್ತಿ ಸೆಂಟ್ರಲ್ ಅಸಿಸ್ಟೆನ್ಸ್ ಬೇಕು ಎಂದು ಪ್ರೆಸ್ ಮಾಡುವಾಗ, ನಮ್ಮ ಮುಖ್ಯಮಂತ್ರಿಗಳ ಕೈಯನ್ನು ಬಲಪಡಿಸುವುದು ಎಲ್ಲರ ಕರ್ತವ್ಯ. ಹೋದಸಲ ನಮಗೆ 56 ಪರ್ಸೆಂಟು ಸಹಾಯ ಕೊಟ್ಟರು. ಈ ಸರ್ತಿ ಪ್ಲಾನಿಂಗ್ ಕಮಿಷನ್ನಿನವರಿಗೆ ನಮ್ಮ ಹಣಕಾಸಿನ ಶಕ್ತಿ ಎಷ್ಟಿದೆ ಎಂದು ತೋರಿಸಿ, 80 ಪರ್ಸೆಂಟ್ ಅಸಿಸ್ಟೆನ್ಸು ಕೊಡಿ ಎಂದು ಒತ್ತಿ ಹೇಳಬೇಕಾಗಿದೆ. ಈ ಮುಖ್ಯ ಪ್ರಶ್ನೆ ನಮ್ಮ ಮುಂದಿದೆ. ಇಂಥ ಕಾಲದಲ್ಲಿ ಒಂದು ಸ್ಟ್ರಾಂಗ್ ಲೀಡರ್‌ಶಿಪ್ಪಿಗೆ ಹಾನಿತರುತ್ತಿರುವುದು ಬಹಳ ಶೋಚನೀಯ. ಕೇಂದ್ರದಿಂದ ಹೆಚ್ಚು ಸಹಾಯ ಪಡೆಯುವ ಪ್ರಶ್ನೆಯಂತೆ, ಕೃಷ್ಣ-ಗೋದಾವರಿ ನೀರಿನ ಹಂಚಿಕೆಯಲ್ಲಿ ಸರಿಯಾದ ಪಾಲು ದೊರಕಿಸಿಕೊಳ್ಳುವ ಒಂದು ಸಮಸ್ಯೆ ನಮ್ಮ ರಾಜ್ಯದವರು ಎದುರಿಸುತ್ತಾ ಇದ್ದೇವೆ. ಅದೇರೀತಿ ನಮ್ಮ ಸ್ಟೇಟಿಗೆ ಸ್ಟೀಲ್ ಪ್ಲಾಂಟ್ ಬೇಕೂ ಎಂದು ಒಂದೇ ಸಮನೆ ನಾವೂ ನೀವೂ ಕೇಳುತ್ತಾ ಇದ್ದೇವೆ. ಅದೇ ರೀತಿ ಅಲ್ಯೂಮಿನಿಯಂ ಫ್ಯಾಕ್ಟರಿ ಬೇಕು, ಫರ್ಟಿಲೈಸರ್ ಫ್ಯಾಕ್ಟರಿ ಬೇಕು ಎಂದು ಹೇಳುತ್ತಿದ್ದೇವೆ. ಅಷ್ಟೇ ಅಲ್ಲದೆ ನಮ್ಮ ಕನ್ನಡ ನಾಡಿನಲ್ಲಿ ಒಂದು ಅಂಗುಲ ಭೂಮಿಯೂ ಮಹಾರಾಷ್ಟ್ರಕ್ಕೆಹೋಗಬಾರದು ಎಂತ ಹೇಳುತ್ತಿದ್ದೇವೆ. ಅದೇ ರೀತಿ ಯಿಂದ ಗೋವೆಯನ್ನೂ ತಾವೂ, ನಾವೂ ಒತ್ತಿ ಒತ್ತಿ ಹೇಳುತ್ತಿದ್ದೇವೆ. ನಮ್ಮ ರಾಜ್ಯದ ಮುಂದೆ ಇಷ್ಟು ಗಹನವಾದ, ಜಟಿಲವಾದ ಸಮಸ್ಯೆಗಳಿವೆ. ಕೇಂದ್ರದಲ್ಲಿ ಹೋಗಿ ಒತ್ತಾಯ ಪಡಿಸುವುದಕ್ಕಿಂತ ಮುಂಚೆ, ಈ ಸಮಸ್ಯೆಗಳನ್ನು ಪರಿಹಾರಮಾಡಿ ಎಂದು ಹೇಳುವಮುಂದೆ, ಭದ್ರವಾದ ನಾಯಕತ್ವ ಬೇಕು; ಅದಿಲ್ಲದೆ ನಮ್ಮ ಆಸೆ ಆಕಾಂಕ್ಷೆಗಳು ಈಡೇರುವುದಿಲ್ಲ. ನೀವು ಇವತ್ತು ನಮ್ಮ ಮುಖ್ಯಮಂತ್ರಿಗಳನ್ನು ಗವರ್ನ್‌ಮೆಂಟ್ ಆಫ್ ಇಂಡಿಯ ಕೋರ್ಟಿನ ಮುಂದೆ ಅಕ್ಯೂಸ್ ಮಾಡುವ ಪ್ರಯತ್ನ ಮಾಡಿದರೆ, ನಮ್ಮ ಧ್ಯೇಯಗಳನ್ನು ಸಾಧಿಸುವುದು ಹೇಗೆ ? ಮೈಸೂರು ಸ್ಟೇಟಿನಲ್ಲಿ ನಾಯಕರ ಕೊರತೆ ಇದೆ. ನಾಯಕನನ್ನು ಸೃಷ್ಟಿಸಬೇಕಾದರೆ , ಕಟ್ಟಬೇಕಾದರೆ ಬಹಳ ಕಾಲ ಹಿಡಿಯುತ್ತದೆ; ಆದರೆ ಕೆಡಿಸಬೇಕಾದರೆ ಕಾಲ ಹಿಡಿಯುವಹಾಗಿಲ್ಲ. ದೇಶದಲ್ಲಿ, ನಾನು, ಮುಕ್ಕಣ್ಣಪ್ಪನವರು, ಎಲ್ಲರೂ ನಾಯಕರು ಅನ್ನುವುದಾದರೆ, ದೇಶದಲ್ಲಿ ಫಾಲೋಯರ್ಸೇ ಇರುವುದಿಲ್ಲವೆಂದು ಹೇಳಬೇಕಾಗುತ್ತದೆ. ನೀವು ಎಸ್. ಎಸ್. ಪಿ. ಕಟ್ಟಿದಿರಿ. ಆದರೆ ನಿಮ್ಮಲ್ಲಿ ನಾಯಕತ್ವ ಬೆಳೆಯಿತೇನೆ.....

ಶ್ರೀ ಎಸ್ ಗೋಪಾಲಗೌಡ—ಅವರ ಅಭಿಪ್ರಾಯ ಕೇಳೋಣ ಸ್ವಾಮಿ, ಉಪದೇಶ ಕೇಳೋಣವೋ? ಅವರ ಉಪದೇಶ ಕೇಳುವುದಕ್ಕೆ ನಾವು ಇಲ್ಲಿದ್ದೇವೆಯೋ ?

ಅಧ್ಯಕ್ಷರು.—ಈಗ ಮೂರು ಗಂಟೆ ಕೇಳಿದ್ದರಲ್ಲಿ ಒಂದೂ ನ್ಯೂ ಪಾಯಿಂಟ್ ಇಲ್ಲ, ಉಪದೇಶ ಬೇಕಾದಷ್ಟಿದೆ ಎಂದು ಅವರು ಹೇಳಿದರು. ಅದೇರೀತಿ ಇದನ್ನೆಲ್ಲಾ ಕೇಳುತ್ತಾ ಇದ್ದೇವೆ.

Sri B. P. KADAM (Karwar).—One clarification Sir..........

Mr. SPEAKER.—Not now.

ಶ್ರೀ ವೀರೇಂದ್ರ ಪಾಟೀಲ್.—ಇಷ್ಟು ಎಲ್ಲಾ ಸಮಸ್ಯೆಗಳು ನಮ್ಮ ಮುಂದೆ ಇರುವಾಗ ಭ್ರಷ್ಟಾಚಾರದ ಅಪಾದನೆಯನ್ನು ಅಂಗೀಕೃತಿ ತೆಗೆದುಕೊಂಡು ನಾವು ವಿಚಾರ ಮಾಡಬಹುದೇ ? ಕೆಲವು ಫೋಟೋಸ್ಟ್ಯಾಟ್ ಕಾಪಿಗಳನ್ನು ತಂದು ನಮ್ಮ ಮುಂದೆ ತೋರಿಸಿದ್ದಾರೆ ಅದರಲ್ಲಿ ಎಷ್ಟರ ಮಟ್ಟಿಗೆ ನಿಜವಿದೆಯೋ, ಸುಳ್ಳಿದೆಯೋ ಅದು ನಮಗೆ ಗೊತ್ತಿಲ್ಲ. ಒಂದುವೇಳೆ ತಮ್ಮ ಲೆಕ್ಕದಂತೆ, ನಿಜವೆ ಎಂದು ತಿಳಿದುಕೊಂಡರೆ ಇಲಾಖೆ ಸೆಕ್ಷನ್ ಫೋಟೋಗ್ರಾಫರನು. ಬಂದು ತೆಗೆದುಕೊಂಡಿರಬಹುದು. ಇಲ್ಲವೇ ಫೈಲನ್ನೇ ಅವನ ಹತ್ತಿರ ತೆಗೆದುಕೊಂಡು ಹೋಗಿರಬಹುದು. ಈ ಎರಡರಲ್ಲಿ ಒಂದು ....

Mr. SPEAKER.—The position is clear. The Hon'ble Member Sri Lakkappa said that those copies were given to him by Sri Patil Puttappa. That has gone into the record. I asked him whether he still persisted, and still insisted He said "Yes" and it should go into the record and it has gone into the record. I have to tell the House that I have received a letter from Sri Patil Puttappa wherein he denies and says that he never met him, nor did he have a discussion with him nor did he correspond with him on any matter at any time. He further says that the Hon'ble Member has misused the privilege and protection afforded to him under the Constitution. He has sought the indulgence and protection of the Speaker. He has also requested to take proper steps to safeguard the rights of the citizens.

ಶ್ರೀ ಎಂ. ವಿ. ಕೃಷ್ಣಪ್ಪ.—ಸದಸ್ಯರು ಹೇಳುತ್ತಿರುವುದು ಸುಳ್ಳು.

Sri K. LAKKAPPA.—How can he enlighten ?

Sri C. J MUCKANNAPPA.—The Hon'ble Minister must withdraw that statement.

ಶ್ರೀ ಎಸ್. ಎಂ. ಕೃಷ್ಣ.—ಸುಳ್ಳು ಹೇಳಿದರು ಅನ್ನುವುದನ್ನು ಪ್ರತಿಭಟಿಸುತ್ತೇವೆ.

Mr. SPEAKER.—Would Sri Lakkappa like to say anything ?

Sri S. M. KRISHNA.—How has this letter come on the Floor of the House ?

ಶ್ರೀ ಎಸ್. ಗೋಪಾಲಗೌಡ.—ಈ ತರಹ ಎಲ್ಲಾ ಹೇಳಿದೆ ಎಂದು ತಾವು ಶ್ರೀ ಪಾಟೀಲ್ ಪುಟ್ಟಪ್ಪನವರಿಗೆ ತಿಳಿಸಿದರೋ ಹೇಗೆ ಸ್ವಾಮಿ ?

Mr. SPEAKER.—Would the member kindly tell me on what basis he is telling this ?

Sri S. M. KRISHNA.—There are situations where we are claiming that we are not inferior to any Court of Law in the land. We say what we feel like saying. The only limitation is that we must be fully convinced. You must believe in all the statements that we make. Now, Sir, just now you said that a certain person has written a letter to you. On the basis of that, can you ask for the explanation of the House ?

Mr. SPEAKER.—Why does the Hon'ble Members say a certain person whose name I have already mentioned his name. He has written to me. I would certainly like to probe into the matter further, and that is why I am asking Sri Lakkappa whether he would enlighten me or whether he will still stick to what he has said.

Sri S. M. KRISHNA.—Supposing if any contractor writes to you, can you ask for the explanation of the House ?

Mr. SPEAKER.—The Hon'ble Member Sri Krishna will kindly remember that whenever any name was mentioned I objected to it. In fact, a person's name appeared to have been mentioned some time back. I shall look into it. But, if the Member thinks .....

Sri S. SIVAPPA.—So many people may go on writing letters !

Mr. SPEAKER.—I have heard everybody.

(Hon'ble Member Sri S. Gopala Gowda stood up)

Mr. SPEAKER.—Is sri S. Gopala Gowda raising a Point of Order ?

Sri S. GOPALA GOWDA.—Yes, Sir. ಮಾನ್ಯ ಸದಸ್ಯರು ಮಾತನಾಡುತ್ತ ಇರುವಾಗ ಫೋಟೋಸ್ಟ್ಯಾಟ್ ಕಾಪಿ ವಿಷಯ ಬಂದಾಗ ಅದರ ಬಗ್ಗೆ ತಾವು ಅವಕಾಶವನ್ನು ಕೊಡದೇ ಇದ್ದಾಗ ಅದನ್ನು ಪುನಃ ಹೇಗೆ ಇಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ ?

Mr. SPEAKER.—Whether it amounts to a breach of Rule, a breach of Privilege whether it becomes a Point of Order. Three things are rolled into one,

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀಮಾನ್ ಲಕ್ಕಪ್ಪನವರು ಇದರ ಕಾಪಿಯನ್ನು ಕೊಟ್ಟು ಹೇಳುವುದಕ್ಕೆ ಹೋದರೆ ಅದರಲ್ಲಿ ರೂಲ್ಸುಗಳಿಗೆ ವಿರೋಧವಾಗುತ್ತವೆ ಎಂದು ಅವರು ಇಲ್ಲಿ ಆ ರೀತಿ ಹೇಳುವುದರಲ್ಲಿ ಒಂದು ತರಹ ಔಚಿತ್ಯವಿದೆ ಎಂದು ನನಗೆ ತೋರುತ್ತದೆ.

Mr. SPEAKER.—I told Sri K. Lakkappa that If he wanted more time to think, I was prepared to give time. If he does not hear what I am saying, what can I do ?

ಶ್ರೀ ಎಸ್. ಗೋಪಾಲಗೌಡ.—ನಾನು ಈಗಾಗಲೇ ಎತ್ತಿದ ಪಾಯಿಂಟು ಆಫ್ ಆರ್ಡರು ಬಗ್ಗೆ ತಮ್ಮ ರೂಲಿಂಗ್‌ನ್ನು ಕೊಡಲೇ ಇಲ್ಲವಲ್ಲ.

Mr. SPEAKER.—In the Point of Order raised, as I have already said, three things have been rolled into one. I say that, there is not the least of substance in the Point of Order.

(The Hon'ble Member, Sri G. Marulappa stood up)

Mr. SPEAKER.—Is it a point of Order ?

Sri G. MARULAPPA.—Yes, Sir. ಈ ಸಂದರ್ಭ ಯಾವ ರೀತಿ ಈ ಸಭೆಯಲ್ಲಿ ಬರಬೇಕು ಮತ್ತು ಇಲ್ಲಿ ಫೋಟೋಸ್ಟ್ಯಾಟು ಕಾಪಿಯನ್ನು ತಂದು ಮಾತನಾಡತಕ್ಕ ಕಾಲದಲ್ಲಿ ತಾವು ಕೂಡ ಇಂತಹ ಅವಕಾಶವನ್ನು ಕೊಡಲು ಸಂಶಯವಾಗಿದೆ ಎನ್ನುವ ಪ್ರಶ್ನೆ ಬಂದಿದೆ ಎಂದು ಅಪ್ಪಣೆ ಕೊಡಿಸಿರಿ. ಇವೆರಡೂ ಒಂದೇ ಸ್ವರೂಪದ್ದೇ ಎನ್ನುವ ಸ್ವಲ್ಪ ಸಂಶಯಕ್ಕೆ ಕಾರಣವಾಗಿರುವುದರಿಂದ ಇದನ್ನು ಸಾವಧಾನವಾಗಿ ಬಗೆಹರಿಸಬೇಕು

Mr. SPEAKER.—With the vast experience of parliamentary practice, Sri Marulappa is informed that the suspicion may be unfounded absolutely. Does he want to call it a point of Order ? If such Points of Order are raised, the time of the House is simply exhausted for nothing at all.

ಶ್ರೀ ಪಿ. ವೆಂಕಟಗಿರಿಯಪ್ಪ.—ನಾವು ಹಳ್ಳಿಗಳಿಗೆ ಹೋಗಿ ಎಲ್ಲ ವಿಚಾರಗಳನ್ನೂ ತಿಳಿದುಕೊಂಡು ಬಂದು ಸರಕಾರಕ್ಕೆ ಇಲ್ಲಿ ಹೇಳಿದರೆ ಅದಕ್ಕೆ ಪ್ರತಿಯಾಗಿ ಏನು ಉತ್ತರವನ್ನೂ ಕೊಡದೇ ಹೋದರೆ ನಾವು ಏತಕ್ಕಾಗಿ ಇಲ್ಲಿ ಬಂದು ಕುಳಿತಿರಬೇಕು ?

Mr. SPEAKER.—The Member must not put such an inconvenienr question to me. He wants me to tell him why I should sit here ? Fot that, it is better for the Member to go to his constituency and ask his voters. Is it the parliamentary practice ? Am I to ask this question ? Does he want to enlighten me or does he want to improve my knowledge ?

ಶ್ರೀ ವೀರೇಂದ್ರ ಪಾಟೀಲ್.—ನಾನು ಇಲ್ಲಿ ಫೋಟೋಸ್ಟ್ಯಾಟ್ ಕಾಫಿ ವಿಷಯ ಹೇಳುವುದು, ಅಡ್ವರ್ಟೈಸ್‌ಮೆಂಟು ವಿಷಯವನ್ನಲ್ಲ. ಮಾನ್ಯ ಸದಸ್ಯರಾದ ಶ್ರೀ ಮಾನ್ ಶಿವಪ್ಪನವರೂ ಓರ್ ಕ್ವಾರೀಯಿಂಗ್ ರೋಡು ಬಗೆಗೂ ಒಂದು ಫೋಟೋಸ್ಟ್ಯಾಟ್ ಕಾಫಿಯನ್ನು ತೆಗೆದುಕೊಂಡು ಬಂದು ಇಲ್ಲಿ ತೋರಿಸುತ್ತಿದ್ದರೋ ಏನೋ ನನಗೆ ಅದೊಂದೂ ಗೊತ್ತಿಲ್ಲ. ಅವರಿಗೆ ನಾನು ಈ ಸಂದರ್ಭದಲ್ಲಿ ನಿವೇದಿಸಿಕೊಳ್ಳುವುದು, ಒಂದು ವೇಳೆ ಅವು ಜನುಯ್ಯನ್ ಆಗಿದೆ ಎನ್ನುವುದಕ್ಕೆ ಎರಡು ಮಾರ್ಗಗಳಿವೆ. ಫೋಟೋಗ್ರಾಫರು ವಾಸಮಾಡುವ ಸ್ಥಳಕ್ಕೆ ಹೋಗಿ ಫೋಟೋ ತೆಗೆಸಿರಬೇಕು, ಫೈಲನ್ನು ಅವರ ಬಳಿಗೆ ತೆಗೆದುಕೊಂಡು ಹೋಗಿದ್ದಿರಬೇಕು. ಇದು ಹೇಗೆ ಹೋಯಿತೋ ಇಲ್ಲವೋ ಎನ್ನುವುದು ನನಗೆ ತಿಳಿಯುತ್ತಿಲ್ಲ.........

ಶ್ರೀ ಎಸ್. ಶಿವಪ್ಪ.—ಅದು ಹೇಗಾದರೂ ಇರಲಿ. ಅದು ಸರಿಯೋ ಇಲ್ಲವೋ ಅದನ್ನು ಮಾತ್ರ ಹೇಳಿದರೆ ಸಾಕು. We have the information which we have read through a photostat copy or any other copy. The only course for the Government is to refute it: whether it is true or not.

ಶ್ರೀ ವೀರೇಂದ್ರ ಪಾಟೀಲ್.--ಇವೊತ್ತು ಫೋಟೋಸ್ಟ್ಯಾಟು ಕಾಫಿ ಜೆನ್ಯುಯ್ನನೇ ಅಲ್ಲವೇ ಎನ್ನುವುದನ್ನು ಹೇಳಲು ಅದನ್ನು ಸರಿಯಾಗಿ ಓದಿ ನೋಡುವುದಕ್ಕೆ ಅವಕಾಶ ಕೊಡಲಿಲ್ಲ. ಅದರ ಮೇಲೆ ಈ ಕಾಫಿ ಹೇಗೆ ಬಂದಿತು ಎನ್ನುವ ರಿಕಾರ್ಡುಗಳಾವುವೂ ನನಗೆ ಗೊತ್ತಾಗಿಲ್ಲ ಆದುದರಿಂದ ಇದು ಜೆನ್ಯುಯಿನ್ನೇ ಅಥವಾ ಸುಳ್ಳೇ ಎಂಬುದನ್ನೂ ನಾನು ಇಲ್ಲಿ ಏನೂ ಹೇಳುವುದಕ್ಕಾಗುವುದಿಲ್ಲ. ಅವರೇ ಹೇಳುವಂತೆ ನಿಮ್ಮ ಲೆಕ್ಕ ಜೆನುಯ್ನಿನ ಎಂದು ಹೇಳಲು ನಾನು ಈ ಮೊದಲೇ ಹೇಳಿದಂತೆ ಎರಡು ಮಾರ್ಗಗಳನ್ನು ಬಿಟ್ಟರೆ ಬೇರಾವ ಮಾರ್ಗವೂ ಇಲ್ಲ. ಇದಕ್ಕಾಗಿಯೇ ನಾವು ಇವೊತ್ತು ಇರುವಂತಹ ಅಡ್ಮಿನಿಸ್ಟ್ರೇಟಿವ್ ಮೆಷಿನರಿಯನ್ನು ಬದಲಾವಣೆ ಮಾಡುವುದು ಸಾಧುವಾದುದೇ ಎನ್ನುವುದನ್ನೂ ತಾವು ಇಲ್ಲಿ ಸ್ವಲ್ಪ ವಿಚಾರ ಮಾಡಬೇಕಾಗಿದೆ. ಒಂದು ವೇಳೆ ತಾವುಗಳೂ ಆಡಳಿತ ಪಕ್ಷಕ್ಕೆ ಬರುತ್ತೇವೆಂದು ಹೇಳುತ್ತಿರುವಂತ ನೀವೂ ಬಂದಾಗ ಇದೇ ಮೆಷಿನರಿಯೇ ಇರುತ್ತದೆ. ಆಗಲೂ ಕೂಡ ನೀವುಗಳು ಇರುವಂತಹ ಮೆಷಿನರಿಯನ್ನೂ ಬದಲಾವಣೆ ಮಾಡಲಿಕ್ಕೆ ಬರುವುದಿಲ್ಲ. ನೀವು ಎಲ್ಲವನ್ನೂ ಓವರಾಲ್ ಮಾಡುವುದಕ್ಕೆ ಎಂದು ಹೊರಟರೆ ಯಾವ ಬ್ರಹ್ಮ ಬಂದರೂ ಅವರಿಗೆ ಸ್ಯಾಟಿಸ್‌ಫೈ ಮಾಡುವುದಕ್ಕೆ ಹೇಗೆತಾನೇ ಸಾಧ್ಯವಾದೀತು ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರೂ ಜನತೆಯೊಡನೆ ಹೋಗುತ್ತಾರೆ.

Sri S. SIVAPPA.—If that machinery is not suitable, we will disband it.

Sri C. J. MUCKANNAPPA.—It is his own teaching. He has no control over his officers and he wants to have control over us.

Mr. SPEAKER—Now, the Member must have control over himself.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರ ಹೆಸರು ಗೋಪಾಲ ಗೌಡರು ಗೋಪಾಳಗೌಡ ಎಂದು ಉಚ್ಚರಿಸುತ್ತಾರೆ. ಗೋಪಾಳ ಅಲ್ಲ (ನಗು) ಗೋಪಾಳ ಎಂದರೆ ನನಗೆ ಬಹಳ ಸಂಕಟವಾಗುತ್ತದೆ, ಏಕೆಂದರೆ ನಾನು ಹಸುಗಳ ಬಗ್ಗೆ ಬಹಳ ವಿಶ್ವಾಸದಿಂದ ಇರುವವನು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಗೋಪಾಳ ಎಂದರೆ ಭಿಕ್ಷ ಎಂದು ಅರ್ಥವಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಇವೊತ್ತು ನಮ್ಮ ಮೇಲೆ ಬಂದಿರುವ ಭ್ರಷ್ಟಾಚಾರದ ಅಪಾದನೆಗಳು ಒಂದು ಪಕ್ಷ ವಿಚಾರ ಮಾಡುವಂತಹುದಾಗಿದ್ದರೆ ಪ್ರಜೆಗಳು ಮತ್ತು ಪ್ರಜೆಗಳ ಪ್ರತಿನಿಧಿಗಳ ಮುಖಂಡರುಗಳು ಸರಕಾರದ ಆಡಳಿತವನ್ನು ಕಾರ್ಯಭಾರವನ್ನು ನಡೆಸುತ್ತಿದ್ದಾರೆ. ನಾವೂ ಅವರೂ ಎಲ್ಲರೂ ಪ್ರಜಾಪ್ರತಿನಿಧಿಗಳಾಗಿರುವುದರಿಂದ ಈಗ ನಮಗೆ ಸರಕಾರ ನಡೆಸಲು ಅವಕಾಶ ಕೊಟ್ಟಿದ್ದಾರೆ. ಪ್ರಜಾರಾಜ್ಯದಲ್ಲಿ ಸರಕಾರ ನಡೆಸುವುದಕ್ಕೆ ಯಾವ ಪಕ್ಷದವರು ಅಧಿಕಾರಕ್ಕೆ ಬಂದರೂ ಅಲ್ಲಿರುವ ಮೆಷಿನರಿಯನ್ನು ಕಿತ್ತೊಗೆಯಲು ಯಾವ ಬ್ರಹ್ಮನಿಂದಲೂ ಸಾಧ್ಯವಾಗುವುದಿಲ್ಲ. ಯಾವ ಬ್ರಹ್ಮ ಬಂದರೂ ಈಗಿರುವ ಮೆಷಿನರಿಯನ್ನು ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಸರಕಾರದ ಕೆಲಸಗಳನ್ನು ನಡೆಸುವುದಕ್ಕಾಗಿ ಅಡ್ಮಿನಿಸ್ಟ್ರೇಟರುಗಳಿದ್ದಾರೆ, ಡೆವಲಪ್‌ಮೆಂಟು ಆಫೀಸರುಗಳಿದ್ದಾರೆ, ಟೆಕ್ನಿಕಲ್ ಆಫೀಸರುಗಳಿದ್ದಾರೆ. ಅವರಿಗೆಲ್ಲ ಕೆಲವು ನಿಯಮಗಳಿರುತ್ತವೆ. ಅದನ್ನು ನೋಡಿಕೊಂಡು ಮೇಲಿನ ಅಧಿಕಾರಿಗಳಿಗೆ ಅಡ್ವೈಸು ಮಾಡುತ್ತಾರೆ ಮತ್ತು ಸರಕಾರ ಪಾಲಿಸಿಗಳನ್ನು ಹಾಕಿಕೊಡುತ್ತಾರೆ ಅದರಂತೆ ಕಾರ್ಯಗಳನ್ನು ಮಾಡುತ್ತಾರೆ.

ಈ ರೀತಿಯಿಂದ ಸರಕಾರ ನಡೆಯುತ್ತಿದೆ, ಮೊದಲಿನಿಂದಲೂ ಹೀಗೆ ನಡೆದುಕೊಂಡು ಬರುತ್ತಿದೆ. ಪಾಲಿಸಿ ಮೇಕರ್ಸ್, ಎಂದರೆ, ನೀತಿ ನಿರ್ಧಾರಕರು ನಾವು, ಅವರ ಸಲಹೆಯ ಪ್ರಕಾರ ಆಡಳಿತ ಮಾಡುತ್ತಿದ್ದೇವೆ. ಎದೆತಟ್ಟಿ ದೇಶದಲ್ಲಿ ಭ್ರಷ್ಟಾಚಾರ ಇಲ್ಲವೇ ಇಲ್ಲವೆಂದು ನಾವು ಹೇಳಿಲ್ಲ. ಇಲ್ಲದಿದ್ದರೆ ಸದಾಚಾರ ಸಮಿತಿ, ವಿಜಿಲೆನ್ಸ್ ಸಮಿತಿ, ಲಂಚನಿರೋಧಕ ಇಲಾಖೆ ಇರುತ್ತಲೇ ಇರಲಿಲ್ಲ. ನಾವು ನೀತಿ ನಿರ್ಮಾಪಕರು ಇವೆಲ್ಲ ಇರಬೇಕೆಂದು ಹೇಳಿದ್ದೇವೆ. ಎಂದ ಮೇಲೆ ತಾವೇ ವಿಚಾರ ಮಾಡಿ, ನಾವು ಮೇಲೆ ಕುಳಿತು ರಾಜ್ಯಭಾರ ಮಾಡುತ್ತಿದ್ದೇವೆ, ಅನೇಕ ಮಟ್ಟಗಳಲ್ಲಿ ಅಧಿಕಾರಗಳನ್ನು ಕೊಟ್ಟಿದ್ದೇವೆ. ಅದನ್ನು ಚಲಾಯಿಸಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ, ಕೆಲವರು ನಿಷ್ಠೆಯಿಂದ ಮಾಡುತ್ತಿದ್ದಾರೆ. ಮತ್ತೆ ಕೆಲವರು ನೀತಿಬಾಹಿರವಾಗಿ ಮಾಡುತ್ತಾರೆ, ಇದನ್ನು ಇಲ್ಲವೆಂದು ಹೇಳುವುದಿಲ್ಲ. ಯಾವನೋ ಅಸಿಸ್ಟೆಂಟ್ ಇಂಜಿನಿಯರು ಅಥವಾ ಎಗ್ಸಿಕ್ಯೂಟಿವ್ ಇಂಜಿನಿಯರು ದುಡ್ಡು ಹೊಡೆದಿದ್ದಾನೆ ಎಂದರೆ, ಅದರಲ್ಲಿ ಮಂತ್ರಿಗೆ ಪಾಲಿರಬಹುದು, ಇಲ್ಲದಿದ್ದರೆ ಅವನೇಕೆ ಮಾಡುತ್ತಾನೆ ಎನ್ನುವ ಭಾವನೆ ಅವರ ಮನಸ್ಸಿನಲ್ಲಿ ತುಂಬಿದೆ ಎನ್ನುವುದಕ್ಕೆ ಅನೇಕ ನಿದರ್ಶನಗಳು ಬರುತ್ತಿವೆ. ಈ ಸಭೆಯಲ್ಲಿ ಪ್ರಶ್ನೋತ್ತರಗಳ ಮೂಲಕ ಅನೇಕ ಲೋಪದೋಷಗಳನ್ನು ಗಮನಕ್ಕೆ ತರುತ್ತಿದ್ದಾರೆ. ಅನೇಕ ಕಡೆ ಕಟ್ಟಿದ ಸೇತುವೆಗಳು ಬಿದ್ದುಹೋಗಿವೆ. ಮೊನ್ನೆ ಒಬ್ಬರು ವಿರೋಧ ಪಕ್ಷದವರ ಕ್ಷೇತ್ರಕ್ಕೆ ನಾನು ಹೋದಾಗ, ಅಲ್ಲಿ ಕಟ್ಟುತ್ತಿದ್ದ ಒಂದು ಸೇತುವೆ ಬಿದ್ದುಹೋಗಿ ಮತ್ತೆ ಕಟ್ಟಬೇಕಾಗಿದ್ದ ಕೆಲಸ ಬಹಳ ನಿಧಾನವಾಗಿದೆ, ಅದು ಶೀಘ್ರವಾಗಿ ತಯಾರಾಗಬೇಕೆಂದು ಹೇಳಿದ್ದರು, ಆದರೆ ನಾನು ಅಲ್ಲಿಗೆ ಹೋದದ್ದು ಎನ್‌ಕ್ವೈರಿ ಪ್ರಾರಂಭ ಮಾಡುವುದಕ್ಕೆ. ಆಗ ಅವರು ಸೇತುವೆ ತೀವ್ರವಾಗಿ ಆಗಬೇಕೆಂದು ನಾವು ಹೇಳಿದರೆ ಎನ್‌ಕ್ವೈರಿ ಮಾಡಲು ಪ್ರಾರಂಭಿಸಿದರಲ್ಲ ಎಂದು ಕೇಳಿದರು. ಆದರೆ ಎಲ್ಲಾದರೂ ತಪ್ಪಿದ್ದರೆ, ಕರ್ತವ್ಯ ಭ್ರಷ್ಟತೆ ಇದ್ದರೆ ಅದನ್ನು ವಿಚಾರಣೆ ಮಾಡಬೇಕಾದುದು ನನ್ನ ಕರ್ತವ್ಯ. ಟೆಕ್ನಿಕಲ್ ಆಡಿಟ್ ಸೆಲ್ ಮೂಲಕ ಅನೇಕ ಲೋಪದೋಷಗಳು ನಮ್ಮ ಗಮನಕ್ಕೆ ಬರುತ್ತವೆ, ಅದರ ಮೇಲೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಭ್ರಷ್ಟಾಚಾರದ ಅಪಾದನೆ ನೇರವಾಗಿ ಮಂತ್ರಿಗಳ ಮೇಲೆ ಬರಬೇಕಾದರೆ ಯಾರಿಗೋ ಒಬ್ಬರಿಗೆ ಸಹಾಯ ಅಥವಾ ಫೇವರ್ ಮಾಡಬೇಕೆಂದು ಕಾನೂನು ಅಥವಾ ನಿಬಂಧನೆಗಳಿಗೆ ವಿರೋಧವಾಗಿ ಬರೆದರೆ ಅಥವಾ ಆಜ್ಞೆ ಮಾಡಿದರೆ ಆಗ ಬರಬೇಕು. ಹಾಗಿಲ್ಲದೆ ಯಾರೋ ಒಬ್ಬ ಹಣ ತಿಂದಿದ್ದಾನೆ, ಆದುದರಿಂದ ಮಂತ್ರಿಗಳಿಗೆ ಅದರಲ್ಲಿ ಒಂದು ಪಾಲಿದೆ ಎಂದುಹೇಳಿದರೆ ಅದು ನ್ಯಾಯವಲ್ಲ. ಯಾರೇ ಅಧಿಕಾರಕ್ಕೆ ಬಂದರೂ, ವಿರೋಧಪಕ್ಷದವರೇ ಅಧಿಕಾರಕ್ಕೆ ಬಂದರೂ ಇದು ಪೂರ್ತಿಯಾಗಿ ನಿಲ್ಲುವುದಿಲ್ಲ. ಯಾವುದೇ ಕಡೆ, ಯಾರೇ ತಿಂದರೂ ನಮ್ಮ ಮೇಲೆಯೇ ಬರುತ್ತದೆ ಎಂದು ಅವರು ಹೇಳಬಹುದು, ಆದರೆ ನಮ್ಮ ಆತ್ಮಗೌರವಕ್ಕೆ ಧಕ್ಕೆ ಬರುತ್ತದೆ. ಬಿಟ್ಟು ಹೋಗುವುದಕ್ಕೆ ....

ಶ್ರೀ ಎಸ್. ಎಂ. ಕೃಷ್ಣ.—ದೇಶಕ್ಕೆ ಬಹಳ ಉಪಕಾರವಾಗುವ ಒಂದು ವಿಷಯವನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಕೇಂದ್ರ ಮಂತ್ರಿಗಳಾಗಿದ್ದ ಶ್ರೀಮಾನ್ ಕೆ. ಡಿ. ಮಾಳವೀಯರ ಮೇಲೆ ಅಪಾದನೆ ಬಂದಾಗ ಪ್ರಧಾನ ಮಂತ್ರಿ ನೆಹರು ಅವರು ಲೋಕ ಸಭೆಯಲ್ಲಿ ಹೇಳಿದ ಒಂದು ಮಾತನ್ನು ಗಮನಕ್ಕೆ ತರುತ್ತೇನೆ.

> "Even though I am not personally convinced that Sri Malaviya has done anything which casts a reflection on his impartiality and integrity, yet I accepted his resignation and in doing so, I have followed and must follow those high principles of parliamentary Government by which the office of a Minister is governed and I have discharged my duty accordingly."

ಎಂದು ಅವರು ಹೇಳಿದರು. ಇದಕ್ಕೇನು ಹೇಳುತ್ತೀರಿ? ಅರ್ಥವಾಗಲಿಲ್ಲವೆ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಓದಿದ್ದು ಅರ್ಥವಾಯಿತು, ಆದರೆ ಅವರು ಏನು ಹೇಳುತ್ತಾರೋ ಅದು ಅರ್ಥವಾಗಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಭ್ರಷ್ಟಾಚಾರದ ವಿಚಾರ ಮಾತನಾಡಿದರು, ಈ ವಿಧಾನಸೌಧವನ್ನು ಕಟ್ಟಿದಾಗ ಶ್ರೀಮಾನ್ ಹನುಮಂತಯ್ಯನವರು ಕಂಟ್ರಾಕ್ಟರರ ಮೂಲಕ ಹಣವನ್ನು ಹೊಡೆದಿದ್ದಾರೆ ಎಂದು ಅಪಾದನೆ ಬಂದಾಗ.........

Mr. SPEAKER.—We are not concerned with the construction of Vidhana Soudha and the persons who are responsible for the expenditure connected with it.

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳುತ್ತಿದ್ದುದು, ಈ ರೀತಿ ಅಪಾದನೆ ಮಾಡುವಾಗ ಕೂಲಂಕಷವಾಗಿ ವಿಚಾರ ಮಾಡಿಕೊಂಡು ಅಮೇಲೆ ಮಾಡಬೇಕು.

[MR. DEPUTY SPEAKER in the Chair]

ಈಗ ಮಾಡಲಾಗಿರುವ ಅಪಾದನೆಗಳಿಗೆ ಬರುತ್ತೇನೆ. ಶರಾವತಿಯಲ್ಲಿ ರಾಕ್‌ಫಿಲ್ ಕೆಲಸವನ್ನು ಮೂರು ಜನ ಕಂಟ್ರಾಕ್ಟರುಗಳಿಗೆ ಕೊಟ್ಟಿದ್ದೇವೆಂದು ನೇರವಾದ ಅಪಾದನೆ ಮಾಡಿದ್ದಾರೆ. ಇದನ್ನು ಹೇಗೆ ಕೊಟ್ಟೆವು ಎನ್ನುವುದನ್ನು ವೈಟ್ ಪೇಪರಿನಲ್ಲಿ ವಿವರಿಸಿದ್ದೇವೆ. ಆದರೂ ಅವರಿಗೆ ಸಮಾಧಾನವಾಗಿಲ್ಲ, ಆದರೂ ನನ್ನ ಕರ್ತವ್ಯವನ್ನು ನಾನು ಮಾಡಬೇಕಾಗಿದೆ, ಇನ್ನೊಮ್ಮೆ ಹೇಳುತ್ತೇನೆ. ಮೊಟ್ಟ ಮೊದಲನೆಯದಾಗಿ ಒಂದು ವಿಷಯವನ್ನು ತಮ್ಮ ಮುಂದೆ ಹೇಳಬಯಸುತ್ತೇನೆ. ಶರಾವತಿ ಯೋಜನೆಯ ಸಂಬಂಧದಲ್ಲಿ ಇನ್‌ವೆಸ್ಟಿಗೇಷನ್ ಯಾವ ರೀತಿ ಪರಿಪೂರ್ಣವಾಗಿ ಸಮರ್ಪಕವಾದ ಇನ್‌ವೆಸ್ಟಿಗೇಷನ್ ನಡೆಯಬೇಕೆಂದು ನಾವೂ ಅವರು ಬಯಸಿದ್ದೆವೊ ಅಷ್ಟು ಸಮರ್ಪಕವಾಗಿ ಅಗಲಿಲ್ಲ. ಆದರೆ ಮೊದಲು ಪ್ಲಾನಿನಲ್ಲಿ ಮತ್ತು ಅಂದಾಜಿನಲ್ಲಿ ಹೇಗಿರುತ್ತದೆಯೋ ಹಾಗೆಯೇ ಮಾಡಬೇಕೆಂದು ಹೇಳಿದರೆ ಬಹುಶಃ ಅನೇಕ ದೊಡ್ಡ ದೊಡ್ಡ ಯೋಜನೆಗಳನ್ನು ಕೈಬಿಡಬೇಕಾಗುತ್ತದೆ, ಆ ಯೋಜನೆಗಳು ನಮ್ಮ ರಾಜ್ಯಕ್ಕೆ ಇಲ್ಲದಂತಾಗುತ್ತದೆ. ಈ ಹೊತ್ತು ತಯಾರಾಗುತ್ತಿರುವ ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಿಮಗೆ ಯಾವ ವಿದ್ಯುಚ್ಛಕ್ತಿ ಯೋಜನೆಯನ್ನು ಸೇರಿಸಬೇಕೆಂದು ಕೇಂದ್ರ ಸರ್ಕಾರದವರು ಕೇಳುತ್ತಾರೆ, ನಾವು ಕಾಳಿನದಿ ಯೋಜನೆ ಎಂದು ಹೇಳುತ್ತೇವೆ. ಪ್ರಥಮ ಅಂದಾಜಿಗಿಂತ ನಾವು ಒಂದು ಪೈಸ ಕೂಡ ಹೆಚ್ಚು ಖರ್ಚು ಮಾಡಬಾರದೆಂದರೆ, ಅಷ್ಟಕ್ಕೇ ಮಾಡಲು ನಾಲ್ಕು ವರ್ಷ ಕಾಲ ಇಲ್ಲಿ ಪ್ರಯತ್ನ ಮಾಡಬೇಕಾಗುತ್ತದೆ. ನಾಲ್ಕು ವರ್ಷಗಳವರೆಗೆ ಕೇಂದ್ರ ಸರ್ಕಾರದವರು ನಮಗಾಗಿ ಕಾಯುತ್ತಾರೆಯೆ? ಎರಡು ಸಾವಿರ ಕೋಟಿ ರೂಪಾಯಿಗಳನ್ನು ನಾಲ್ಕನೆಯ ಯೋಜನೆಯಲ್ಲಿ ಪವರ್ ಪ್ರಾಜೆಕ್ಟ್‌ಗಳಿಗೆ ವಿನಿಯೋಗಿಸಲಾಗಿದುತ್ತಾರೆ ಎಂದು ಹೇಳುವಾಗ ಅನೇಕ ರಾಜ್ಯಗಳು ಆತುರವಾಗಿ ತಮ್ಮ ಯೋಜನೆಗಳ ಬ್ಲೂಪ್ರಿಂಟ್‌ಗಳನ್ನು ಹಾಕಿಕೊಂಡ ಹೋಗುವಾಗ, ನಾವು ಮೊದಲೇ ಕೂಲಂಕಷವಾಗಿ ಇನ್‌ವೆಸ್ಟಿಗೇಷನ್ ಮಾಡಬೇಕೆಂದರೆ, ಕ್ಯೂನಲ್ಲಿ ಹಿಂದೆ ನಿಲ್ಲಬೇಕಾಗುತ್ತದೆ. ಕಾಳಿನದಿ ಯೋಜನೆ ನಿಧಾನವಾಗುತ್ತದೆ. ಈ ರೀತಿ ಶರಾವತಿ ಯೋಜನೆಯ ಇನ್‌ವೆಸ್ಟಿಗೇಷನ್ ಆಗಿದೆ. ಇದು ಎಷ್ಟು ಕಷ್ಟದ ವಿಚಾರ ಎಂಬುದನ್ನು ಯೋಚಿಸಿ ನೋಡಬೇಕು. ಅಲ್ಲದೆ ಕೂಲಂಕಷವಾಗಿ ಮೊದಲಬಾರಿಗೇ ಶರಾವತಿಯಂತಹ ಯೋಜನೆಯನ್ನು ಇನ್‌ವೆಸ್ಟಿಗೇಟ್ ಮಾಡಬೇಕಾದರೆ ಬಹಳ ಕಷ್ಟ. ಆ ಪ್ರದೇಶದಲ್ಲಿ ನಾನಾ ರೀತಿಯ ಹುಳುಗಳಿರುತ್ತವೆ, ಅವು ನಮಗೆ ಕಚ್ಚಿಕೊಂಡರೆ ಬಿಡಿಸಿಕೊಳ್ಳುವುದೇ ಕಷ್ಟ, ಇವುಗಳನ್ನು ಜಿಗಣೆಗಳೆಂದು ಕರೆಯುತ್ತಾರೆ. ಅಲ್ಲದೆ ಆ ದಟ್ಟವಾಗಿದ್ದ ಕಾಡಿನಲ್ಲಿ ಕಾಡಾನೆಗಳು ಓಡಿಸಿಕೊಂಡು ಬಂದಾಗ ನಮ್ಮ ಅಧಿಕಾರಿಗಳು ಅನೇಕ ದಿವಸ ತಮ್ಮ ಜೀವನವನ್ನು ಮರಗಳ ಮೇಲೆ ಕಳೆದಿದ್ದಾರೆ. ಹೀಗೆಲ್ಲ ಇರುವಾಗ ಮೊದಲೇ ಸಂಪೂರ್ಣ ಇನ್‌ವೆಸ್ಟಿಗೇಷನ್ ಮಾಡಬೇಕೆಂದರೆ ಬಹಳ ಕಷ್ಟ.

ಶ್ರೀ ಎಚ್. ಆರ್ ಕೇಶವಮೂರ್ತಿ.—(ಗಂಡಸಿ) ನಾವು ಅವಿಶ್ವಾಸ ನಿರ್ಣಯ ತಂದು ನಾಲ್ಕು ಮಾತುಗಳನ್ನಾಡಿದರೆ ನೀವು ಎಷ್ಟೋ ಹೆದರುತ್ತೀರಿ. ಹಾಗಿದ್ದ ಮೇಲೆ ಅಲ್ಲಿನ ಕೆಲಸ ಮಾಡುವಾಗ ಅಧಿಕಾರಿಗಳಿಗೇ ಎಷ್ಟೋ ಧೈರ್ಯವಿತ್ತು.

ಶ್ರೀ ವೀರೇಂದ್ರ ಪಾಟೀಲ್.—ಐದು ಆರನೆಯ ಸೆಕ್ಷನ್‌ಗಳಲ್ಲಿ ಮೇಸನರಿ ಡ್ಯಾಮಿನ್ ಡಿಸೈನ್ ಬದಲಾಯಿಸಬೇಕಾಗಿ ಬಂತು. ಏಕೆಂದರೆ 50 ಅಡಿ ಆಳದ ಮೇಲೆ ಹೋಗಿ ಎಪ್ಪತ್ತು ಅಡಿ ಅಗೆದರೂ ಸರಿಯಾದ ಭೂಮಿ ಫೌಂಡೇಷನ್ನಿಗೆ ಸಿಕ್ಕದೇಯಿದ್ದುದರಿಂದ, ಅಲ್ಲಿ ಮೇಸನರಿ ಡ್ಯಾಮ್ ಬೇಡ ಅರ್ದನ್ ಡ್ಯಾಮ್ ಹಾಕಬೇಕೆಂದು ತೀರ್ಮಾನ ಮಾಡಬೇಕಾಯಿತು ನಾಲ್ಕನೆಯದರಲ್ಲಿ ಈ ಪ್ರಶ್ನೆ ಬರಲಿಲ್ಲ. ಐದರಲ್ಲಿ ಸ್ವಲ್ಪ ಭಾಗ ಮತ್ತು ಆರರಲ್ಲಿ ಅರ್ದನ್ ಡ್ಯಾಮ್ ಮಾಡಬೇಕೆಂದು ಹೇಳಿದಾಗ ಯಾವ ಕಂಟ್ರಾಕ್ಟರಿಗೆ ಆ ಕೆಲಸವನ್ನು ವಹಿಸಿದ್ದೆವೋ ಅವರಿಗೆ ಕೊಟ್ಟಿದ್ದ ಕೆಲಸದ ಪ್ರಮಾಣದಲ್ಲಿ ಸೇಕಡ 40ರಷ್ಟು ಕಡಿಮೆಯಾಯಿತು. ಒಪ್ಪಂದದ 27 ಮತ್ತು 28ನೆಯ ಷರತ್ತುಗಳ ಪ್ರಕಾರ ಯಾವಾಗ ಕೊಟ್ಟ ಕೆಲಸದ ಪ್ರಮಾಣದಲ್ಲಿ ಕಡಿಮೆಯಾದರೆ ಆಗ ಅದಕ್ಕೆ ತಕ್ಕಷ್ಟು ಬೇರೆ ಕೆಲಸವನ್ನು ಎಂದರೆ ಸಬ್‌ಸ್ಟಿಟ್ಯೂಟ್ ಕೊಡಬೇಕಾದುದು ಸರ್ಕಾರದ ಜವಾಬ್ದಾರಿ.

5-00 P.M.

ನಮ್ಮ ಇಲಾಖೆಯಲ್ಲಿ ತಜ್ಞರಿಂದ ಇದನ್ನು ಪರಿಶೀಲನೆ ಮಾಡಿ ನೋಡಿದಮೇಲೆ ಮೇಸನರಿ ಕೆಲಸ ಮಾಡುವುದರ ಬದಲು ಅರ್ದನ್ ಡ್ಯಾಂ ಮಾಡಬೇಕು ಎಂದು ಗೊತ್ತಾಯಿತು. ಈ ಅರ್ದನ್

ಡ್ಯಾಂ ಕೆಲಸಕ್ಕೆ ಯಾವ ನ್ಯಾಯವಾದ ರೇಟ್ ಕೊಡಬೇಕು ಎನ್ನುವುದನ್ನು ಗೊತ್ತು ಮಾಡಲು ಇದನ್ನು ಪರಿಶೀಲಿಸಲು ನಮ್ಮ ಇಲಾಖೆಯ ಕೆಲವು ಅಧಿಕಾರಿಗಳು ನಾಗಾರ್ಜುನಸಾಗರ ಯೋಜನೆ ಹೋಗಿ ನೋಡಿಕೊಂಡು ಬಂದರು. ಕೆಲವು ಕಡೆ ಈ ರೇಟು 205·40ಯಿಂದ 233·78ರ ವರೆಗೆ ಒಂದು ಯುನಿಟ್ ಅಂದರೆ ಒಂದು ಸಾವಿರ ಘನ ಅಡಿ ಕೆಲಸಕ್ಕೆ ಇದೆ ಎಂಬುದು ತಿಳಿದು ಬಂದಿತು. ಕೆಲವು ಕಡೆ 200 ರೂಪಾಯಿ ವರೆಗೆ ಸಹ ಇದೆ. ಈ ರೇಟಿಗೆ ಕಂಟ್ರಾಕ್ಟದಾರರು ಒಪ್ಪಲಿಲ್ಲ. ಕೊನೆಗೆ 216·62 ರೂಪಾಯಿ ರೇಟಿಗೆ ಅವರು ಒಪ್ಪಿದರು. ಆದರೆ ಆಮೇಲೆ ಅವರು ಕೆಲವು ಕಂಡೀಷನ್ಸ್ ಹಾಕಿದರು. ಇದು ನಾನು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಆಗಿದೆ. ರಾಕ್ ಫೀಲ್ ಕೆಲಸ ಮಾಡುವುದು ಕೂಡ ನಾವು ಬರುವ ಮೊದಲು ಆದದ್ದು. ಕಂಟ್ರಾಕ್ಟರರು ಶರತ್ತು ಹಾಕಿದಮೇಲೆ ಅವನ್ನು ಒಪ್ಪಿಕೊಳ್ಳಬಾರದ ಪರಿಸ್ಥಿತಿ ಬಂದಾಗ್ಗೆ ಆದನ್ನು ಆರ್ಬಿಟ್ರೇಶನ್ನಿಗೆ ತೆಗೆದುಕೊಂಡು ಹೋದರು. ಆರ್ಬಿಟ್ರೇಶನ್ ಕ್ಲಾಜ್ ಮೂಲಕ ಈ ಶರತ್‌ನಿಂದ ನಮ್ಮ ಬೆರಳು ಸುಟ್ಟಿದೆ. ಆರ್ಬಿಟ್ರೇಶನ್ ಕ್ಲಾಜ್ ಇರಬಾರದು ಎಂದು ಬಹಳ ಪ್ರಯತ್ನ ಪಟ್ಟಿದ್ದೇವೆ. ಆದರೆ ಎಲ್ಲಾ ಯೋಜನೆಯ ಕೆಲಸದಲ್ಲಿ ಆರ್ಬಿಟ್ರೇಶನ್ ಕ್ಲಾಜ್ ಇದ್ದೇಇದೆ. ಕಂಟ್ರಾಕ್ಟರರು ಇದಕ್ಕೆ ಬಹಳ ಒತ್ತಾಯ ಪಡಿಸಿದ್ದರಿಂದ ಇದಕ್ಕೆ ಒಪ್ಪಿಗೆ ಕೊಡಬೇಕಾಯಿತು. ಯಾಕಂದರೆ, ಪರದೇಶಗಳಲ್ಲಿ ಸಹ ಆರ್ಬಿಟ್ರೇಶನ್ ಕ್ಲಾಜ್ ಇಲ್ಲದೆ ಯಾರೂ ಒಪ್ಪುವುದಿಲ್ಲ. ಇದರಲ್ಲಿ ನಮ್ಮ ಬೆರಳು ಸುಟ್ಟುಕೊಂಡಿದ್ದೇವೆ. ಆರ್ಬಿಟ್ರೇಶನ್ನಿಗೆ ಹೋದಾಗ್ಗೆ ನಮಗೆ ವಿರೋಧವಾಗಿ ನಿರ್ಣಯವಾಯಿತು. ಮೇಸನರಿ ವರ್ಕ್ ಯಾರಿಗೆ ಕೊಟ್ಟಿದ್ದೆವೋ ಅವರಿಗೇ ಅರ್ಥ ವರ್ಕ್ ಕೊಡಬೇಕಾಗಿತ್ತು. ಇದನ್ನು ನಿರ್ಣಯ ಮಾಡಲು ಕಾಲಾವಕಾಶ ಹೆಚ್ಚಾಗಿರಲಿಲ್ಲ. 15 ದಿವಸಗಳಲ್ಲಿ ಇದನ್ನು ನಿರ್ಧಾರ ಮಾಡಬೇಕಾಯಿತು. ಸಂಪೂರ್ಣವಾಗಿ ಪರಿಶೀಲನೆ ಮಾಡಿದ ಮೇಲೆ ಆರ್ಬಿಟ್ರೇಶನ್ ನಿರ್ಣಯ ಮಾಡಲಾಯಿತು. ಅವರ ಈ ಫೈನಲ್ ನಿರ್ಣಯದ ಮೇಲೆ ಅಪೀಲ್ ಇಲ್ಲ. ಮೊದಲಿನ ರೇಟು 216·62 ಇದ್ದುದು ಆರ್ಬಿಟ್ರೇಶನ್‌ನಲ್ಲಿ 245 ರೂಪಾಯಿಗೆ ಒಂದು ಸಾವಿರ ಘನ ಅಡಿ ಎಂದು ಅವಾರ್ಡನಲ್ಲಿ ರೇಟ್ ಗೊತ್ತಾಯಿತು. ಇದರ ಹಿನ್ನೆಲೆ ಏನಿದೆ ಏನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಮೊದಲು ಇರತಕ್ಕ ಡಿಜೈನ್ ಬದಲಾವಣೆ ಆಯಿತು. ಅರ್ಥ್ ವರ್ಕ್ ಬದಲು ರಾಕ್ ಫಿಲ್ ಮಾಡಬೇಕೆಂದು ನಿರ್ಣಯ ತೆಗೆದುಕೊಳ್ಳಲಾಯಿತು. ಡಿಜೈನ್ ಬದಲಾವಣೆಯಾದ ಬಗ್ಗೆ ಲಾ ಡಿಪಾರ್ಟ್‌ಮೆಂಟನ್ನು ಕೂಡ ಕನ್‌ಸಲ್ಟ್ ಮಾಡಿದೆ. ಕೆಲಸ ಬದಲಾವಣೆಯಾದರೆ ಬದಲಾವಣೆಯಾದಂಥ ಕೆಲಸವನ್ನು ಆದೇ ಕಂಟ್ರಾಕ್ಟರರಿಗೆ ಕೊಡಬೇಕೆಂದು ಲಾ ಡಿಪಾರ್ಟಮೆಂಟ್ ಕೂಡ ಸಲಹೆ ಮಾಡಿತು. ಅರ್ಥ್ ವರ್ಕ್ ಬದಲು ರಾಕ್ ಫಿಲ್ ಮಾಡತಕ್ಕ ಕೆಲಸದ ಬಗ್ಗೆ ರೇಟ್ ಗೊತ್ತು ಮಾಡುವುದಕ್ಕೆ ನೆಗೋಶಿಯೇಟ್ ಮಾಡಲು ತಯಾರಾಗಿದ್ದರೂ ಕೂಡ ಕಾಲಾವಕಾಶವಿರಲಿಲ್ಲ. ಎಲ್ಲವೂ ತೀವ್ರವಾಗಿ ಆಗಬೇಕಾಗಿತ್ತು. ವಿದ್ಯುತ್ ಶಕ್ತಿ ಉತ್ಪಾದನೆ ತೀವ್ರ ಆಗುವ ಹಾಗೆ ಕೆಲಸ ಮಾಡಬೇಕಾಗಿತ್ತು. ನಾವು ನೆಗೋಶಿಯೇಟ್ ಮಾಡುತ್ತಾ ಕೂತಿದ್ದರೆ ಕಾಲಹರಣವಾಗಿ ವಿದ್ಯುತ್ ಶಕ್ತಿ ಉತ್ಪಾದನೆ ನಮ್ಮ ಶೆಡ್ಯೂಲ್ ಟೈಂಗೆ ಆಗದೆ ಅದು ಹಿಂದೆ ಬೀಳುತ್ತಿತ್ತು. ಇದನ್ನು ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಇಂಥ ಒಂದು ಸಮಯದಲ್ಲಿ ಏನಾದರೂ ಮಾಡಿ ನೆಗೋಶಿಯೇಶನ್ಸ್ ಮೂಲಕ ಆರ್ಬಿಟ್ರೇಶನ್ನಿಗೆ ಹೋಗುವುದನ್ನು ತಪ್ಪಿಸೋಣ, ಟೆಂಡರ್ಸ್ ಕರೆಸೋಣ ಎಂದು ವಿಚಾರ ಬಂದಿತು. ಇದಕ್ಕಾಗಿ ಬಹಳ ಪ್ರಯತ್ನ ಮಾಡಬೇಕಾಯಿತು. ಅಪ್ ಸ್ಟ್ರೀಂ ಮತ್ತು ಡೌನ್ ಸ್ಟ್ರೀಂನಲ್ಲಿ ಇರತಕ್ಕ ರಾಕ್ ಫಿಲ್ ವರ್ಕ್ ಬಿಟ್ಟು ಕೊಡಬೇಕಾಯಿತು. ಇದನ್ನು ಬಿಟ್ಟು ಕೊಡುವುದಕ್ಕೆ ಕಂಟ್ರಾಕ್ಟರ್ ಒಪ್ಪಿದರು. ಆ ರೀತಿ ಕಾಗದದ ಮೇಲೆ ಬರೆಸಿಕೊಳ್ಳಲಾಯಿತು. ನಿಜವಾಗಿಯೂ ಇದರಿಂದ ಸುಮಾರು 30 ಲಕ್ಷ ರೂಪಾಯಿ ಸರಕಾರಕ್ಕೆ ಸೇವಿಂಗ್ಸ್ ಮಾಡಿಸಿದ್ದೇವೆ. ಮೊದಲು ಒಪ್ಪಿಕೊಂಡ ರೇಟು 216·62 ಇದ್ದು ಆರ್ಬಿಟ್ರೇಶನ್ನಿನಲ್ಲಿ 245 ರೂಪಾಯಿ ಎಂದು ಗೊತ್ತಾಯಿತು. ಇದಲ್ಲದೆ 20 ರೂಪಾಯಿ ಹೆಚ್ಚು ಕೊಡಬೇಕಾಗುವುದು ಎಂದು ತಿಳಿದು ಬಂದಿತು. ಆರ್ಬಿಟ್ರೇಶನ್ನಿನಲ್ಲಿ ನಮ್ಮ ರೆಪ್ರೆಜೆಂಟೇಟಿವ್ ಒಬ್ಬರು ಇರುತ್ತಾರೆ. ಅವಾರ್ಡ್ ಬಂದ ಮೇಲೆ ಅದು ಕೊನೆಯ ನಿರ್ಣಯ. ಇದರಲ್ಲಿ ನಾವು ಕೈ ಸುಟ್ಟುಕೊಂಡಿದ್ದೇವೆ. ಇನ್ನೊಂದು ಮುಖ್ಯವಾದ ಅಂಶ ನಾವು ಗಮನದಲ್ಲಿಟ್ಟುಕೊಳ್ಳಬೇಕಾದುದು ಆಗತ್ಯ. ಕಂಟ್ರಾಕ್ಟರರಿಂದ ವಿಥ್‌ಡ್ರಾಯಲ್ ಲೆಟರ್ ತೆಗೆದುಕೊಂಡಿದ್ದೇವೆ. ಈ ವಿಥಡ್ರಾಯಲ್ ಲೆಟರ್ ತೆಗೆದುಕೊಳ್ಳದೇ ಹೋಗಿದ್ದರೆ 245 ರೂಪಾಯಿ ಜೊತೆಗೆ 30 ರೂಪಾಯಿ ಇನ್ನೂ ಹೆಚ್ಚಿಗೆ ಕೊಡಬೇಕಾಗುತ್ತಿತ್ತು. ಅರ್ಥ್ ವರ್ಕ್ ಬೇಕಾದಷ್ಟು ಕೆಲಸ ಇತ್ತು; ರಾಕ್ ಫಿಲ್ ಕೆಲಸ ಕಡಿಮೆ ಇದಿತು. ಮೊದಲಿನ ಅಗ್ರಿಮೆಂಟ್ ಪ್ರಕಾರ ಅಪ್ ಸ್ಟ್ರೀಂನಲ್ಲಿ ರಾಕ್ ಫಿಲ್ ಕೆಲಸ 3,24,800 ಸಿ.ಎಫ್‌ಟಿ. ಇದ್ದಿತು. ಆದರೆ ಡಿಜೈನ್ ಬದಲಾವಣೆಯಾಗಿ ಈ ಕೆಲಸ 1,88 30,000 ಸೀ.ಎಫ್‌ಟಿ. ಆಗುತ್ತದೆ ಎಂದು ಅಂದಾಜು ಮಾಡಲಾಯಿತು. ಕಂಟ್ರಾಕ್ಟರೊಡನೆ ವಿಚಾರ ವಿನಿಮಯ ಮಾಡಿದ ಮೇಲೆ ಅವರು ರೇಟ್ ಇಳಿಸುವುದಿಲ್ಲ ಎಂಬುದು ಕಂಡು ಬಂದಿತು. ಏನಾದರೂ ಮಾಡಿ ಅವರಿಂದ ವಿಥ್‌ಡ್ರಾಯಲ್ ಲೆಟರ್ ಪಡೆದು ಟೆಂಡರ್ಸ್ ಕರೆಯಬೇಕೆಂದು ಗೊತ್ತು ಮಾಡಲಾಯಿತು. ಏಳೆಂಟು ಟೆಂಡರುಗಳಲ್ಲಿ ಮೂರು ನಾಲ್ಕು

(ಶ್ರೀ ವೀರೇಂದ್ರ ಪಾಟೀಲ್)

ಜನರ ರೇಟು ಮನಸ್ಸಿಗೆ ಬಂತು. ಮೆಸರ್ಸ್ ತಾರಾಪೋರೆ ಅಂಡ್ ಕಂಪನಿಯವರು 150 ರೂಪಾಯಿ ರೇಟ್ ಕೊಟ್ಟಿದ್ದರೂ ಕೂಡ ಕೆಲವು ಕಂಡಿಷನ್ಸ್ ಹಾಕಿದರು. ಈ ಕಂಡೀಷನ್‌ಗಳಿಗೆ ಒಪ್ಪುವುದಾಗಿದ್ದರೆ ವಿಪರೀತ ರೇಟ್ ಏರಿಸುವುದಕ್ಕೆ ಅವಕಾಶವಿರುತ್ತಿತ್ತು. ಈ ಸಂದರ್ಭದಲ್ಲಿ ಕಾಲಾವಕಾಶದ ಒತ್ತಡ ಇದ್ದಿತು. ಈ ಕೆಲಸ ಮೊದಲು ಮಾಡಿಸಬೇಕಾದ ಅಗತ್ಯ ಇತ್ತು. ಈ ಕೆಲಸವಾಗದೆ ಡ್ಯಾಂ ನಲ್ಲಿ ನೀರು ತುಂಬುವ ಹಾಗೆ ಇಲ್ಲ. ನೀರು ಇಲ್ಲದೆ ವಿದ್ಯುತ್ ಶಕ್ತಿ ಉತ್ಪಾದನೆ ಮಾಡುವ ಹಾಗೆ ಇರಲಿಲ್ಲ. ಒಂದು ಸೀಜನ್ ಕೆಲಸ ಮಾಡುವುದು ನಿಂತು ಹೋದರೆ ಒಂದು ವರ್ಷ ಅವಧಿ ಹೋಗುತ್ತದೆ. ಈ ಕೆಲಸ ಮಾಡಲು ಕೇವಲ 150 ದಿವಸಗಳು ಉಳಿದಿದ್ದವು. ಇದನ್ನೆಲ್ಲವನ್ನೂ ಎಚ್.ಇ.ಸಿ.ಪಿ. ಬೋರ್ಡು ಪರಿಶೀಲಿಸಿ ಟೆಂಡರ್ಸ್ ಕರೆದರು. ಟೆಂಡರ್ಸ್ ಕರೆಯಲು ಸಾಕಷ್ಟು ಸಮಯ ಕೂಡ ಇರಲಿಲ್ಲ. ಬೋರ್ಡ್ ಮೀಟಿಂಗ್ 19-5-1962ಕ್ಕೆ ಇದ್ದುದು ಪೋಸ್ಟ್‌ಪೋನ್ ಆಯಿತು. ಬಹು ಜಾಗ್ರತೆಯಾಗಿ ಈ ಕೆಲಸ ಮಾಡಿಸಬೇಕಾದ ಸಂದರ್ಭ ಇದ್ದುದರಿಂದ ಕೂಡಲೇ ಆರ್ಡರ್ ಕೊಡಬೇಕಾಗಿತ್ತು. ಕೇವಲ 150 ದಿವಸಗಳು ಮಾತ್ರ ಕೆಲಸ ಮುಗಿಸಲು ಉಳಿದಿದ್ದವು. ಇಂಥ ಸಮಯದಲ್ಲಿ ನಮಗೆ ಕಂಡು ಬಂದುದು ಏನೆಂದರೆ, ಒಬ್ಬ ಎಂಜಿನಿಯರ್ ಕಂಟ್ರಾಕ್ಟರ್ ಅವರು ಈ ಕೆಲಸ ಮಾಡುತ್ತಾರೆ ಎಂದು ತಿಳಿದು ಬಂದಿತು. ಆದರೆ ಯಾರು ಮೇಸನರಿ ವರ್ಕ್ ತೆಗೆದುಕೊಂಡಿದ್ದರೋ ಅವರು ಅರ್ಥ್ ವರ್ಕ್ ಮಾಡಲು ಒಪ್ಪಲಿಲ್ಲ. ಮೂರು ಟೆಂಡರುಗಳಲ್ಲಿ ಅತಿ ಕಡಿಮೆ ರೇಟ್ 40 ರೂಪಾಯಿ ಇದ್ದಿತು. ಮುಂದೆ ಅವರು ಟೆಲಿಗ್ರಾಂ ಮಾಡಿ 100 ರೂಪಾಯಿ ರೇಟ್‌ನಿಂದ ಕೆಲಸ ಮಾಡುವುದಾಗಿ ತಿಳಿಸಿದರು. ಯಾಕೆಂದರೆ ಮೊದಲನ ರೇಟು ವರ್ಕೇಬಲ್ ಇದ್ದಿದ್ದಿಲ್ಲ. ಈ ಟೆಂಡರುಗಳನ್ನು ಅಕ್ಸೆಪ್ಟ್ ಮಾಡುವ ಹಾಗೆ ಇರಲಿಲ್ಲ. ಆದುದರಿಂದ ನೆಗೋಷಿಯೇಟ್ ಮಾಡಿ 104 ರೂಪಾಯಿ ರೇಟ್ ಕೊಡಬೇಕೆಂದು ನಿರ್ಣಯಮಾಡಿ ಮೂರು ಜನ ಕಂಟ್ರಾಕ್ಟರುಗಳಿಗೆ ಒಬ್ಬೊಬ್ಬರಿಗೆ ಮೂರನೇ ಒಂದು ಭಾಗ ಕೆಲಸ ವಹಿಸಿ ಕೊಟ್ಟಿದ್ದೇವೆ. ಈ ವಿಚಾರಗಳನ್ನೆಲ್ಲಾ ಕ್ಯಾಬಿನೆಟ್ ಮುಂದೆ ತೆಗೆದುಕೊಂಡು ವಿಚಾರ ಮಾಡಿದ್ದೇವೆ. ಹೀಗೆ ಪ್ರತಿಯೊಂದು ವಿಚಾರವನ್ನೂ ಎಲ್ಲರಿಗೂ ತಿಳಿಸಿ ಎಲ್ಲರ ಅಭಿಪ್ರಾಯಗಳನ್ನೂ ತೆಗೆದುಕೊಂಡು ಆ ಜನರ ಮೂಲಕ ಕೆಲಸಮಾಡಿರುವುದರಲ್ಲಿ ಏನು ತಪ್ಪಾಗಿದೆ ? ಅದರಲ್ಲಿ ಆಗಿರತಕ್ಕ ಭ್ರಷ್ಟಾಚಾರವಾದರೂ ಏನು ? ಯಾರು ಮೊದಲು 150 ರೂಪಾಯಿಗಳನ್ನು ಬೇಡಿದ್ದರೋ...

ಶ್ರೀ ಎಸ್. ಶಿವಪ್ಪ.—ಪ್ರಾಜೆಕ್ಟ್ ಬೋರ್ಡಿನವರನ್ನೇಕೆ ಕನ್ಸಲ್ಟ್ ಮಾಡಲಿಲ್ಲ ? Why was the Project Board ignored ? Could you not have called a meeting of the Project Board within 24 hours ?

ಶ್ರೀ ವೀರೇಂದ್ರ ಪಾಟೀಲ್.—ನಮಗಿದ್ದ ಆ ಆತುರದಲ್ಲಿ ಡೆಲ್ಲಿಯಲ್ಲಿದ್ದಂಥ ಜನರನ್ನು ಕರೆಸಿ ಕೆಲಸ ಮಾಡುವುದೆಂದರೆ ಅದು ಸಾಧ್ಯವೇ ಎಂಬುದನ್ನು ತಾವೆಲ್ಲರೂ ಆಲೋಚಿಸಬೇಕಾದಂಥ ವಿಚಾರ. ಆದರೆ ಇದರ ಬಗ್ಗೆ ಡೆಲ್ಲಿಯಲ್ಲಿರತಕ್ಕ ಸಿ.ಪಿ.ಡಬ್ಲ್ಯು ಮತ್ತು ಫೈನಾನ್ಸ್ ಕಮಿಷನ್ ಇವರೆಲ್ಲ...

Sri C. J. MUCKANNAPPA.—Why did two members of the Board resign ?

ಶ್ರೀ ವೀರೇಂದ್ರ ಪಾಟೀಲ್.—ಅದು ಇದರ ಸಲುವಾಗಿ ಆದುದಲ್ಲ ; ನಾನು ಈ ವಿಚಾರಗಳನ್ನೆಲ್ಲಾ ಒಂದು ಜವಾಬ್ದಾರಿಯುತವಾದ ಸ್ಥಾನದಿಂದ, ಅದು ಇದರ ಪರವಾಗಿ ಆದುದಲ್ಲ ಎಂಬುದಾಗಿ ಮತ್ತೆ ಮತ್ತೆ ಒತ್ತಿ ಹೇಳುತ್ತಿದ್ದೇನೆ. 150 ರೂಪಾಯಿಗಳು ಯಾವ ಕಡೆ 120 ರೂಪಾಯಿಗಳು ಯಾವ ಕಡೆ ? ನಾವು ಹೀಗೆ ಇಷ್ಟು ಪ್ರಾಮಾಣಿಕತೆಯಿಂದ ಕೆಲಸ ಮಾಡಿದ್ದಾಗ್ಯೂ...

ಶ್ರೀ ಎಸ್. ಶಿವಪ್ಪ.—ಈ ಕೆಲಸವನ್ನು ಕೇವಲ 70—80 ರೂಪಾಯಿಗಳಲ್ಲಿ ಮಾಡುವುದಕ್ಕೆ ಜನರೇ ತಯಾರಾಗಿದ್ದರು.

ಶ್ರೀ ವೀರೇಂದ್ರ ಪಾಟೀಲ್.—ನಾವು 150 ರೂಪಾಯಿಗಳನ್ನು ಕೊಟ್ಟರೂ ಒಬ್ಬನಿಂದ ಆ ಕೆಲಸವನ್ನು ಮಾತ್ರ ಮಾಡುವುದಕ್ಕೆ ಶಕ್ತಿಯಿತ್ತೇ ವಿನಾ ಅದು ಬೇರೆ ಯಾರಿಂದಲೂ ಸಾಧ್ಯವಿರಲಿಲ್ಲ. ಅದೇ ಕೆಲಸವನ್ನು 3—4 ಜನರಿಗೆ ಕೊಟ್ಟಿದ್ದ ಪಕ್ಷದಲ್ಲಿ ಆ ಕೆಲಸವನ್ನು ಸಕಾಲಕ್ಕೆ ಅವರಿಂದ ಮುಗಿಸಲು ಸಾಧ್ಯವಿರಲಿಲ್ಲ. ಅದನ್ನು ತಿಳಿದೇ ನಾವು ಅವರು 103ಕ್ಕೆ ಕೆಲಸ ಹಿಡಿಯಲು ಸಿದ್ಧವಾಗಿದ್ದರೂ ನಾವೇ ಆತನಿಗೆ 104 ರೂಪಾಯಿಗಳನ್ನು ಕೊಟ್ಟಿದ್ದೇವೆ. ಅಲ್ಲಿ ಮುಖ್ಯವಾಗಿ ಕ್ವಾಂಟಂ ಪ್ರಶ್ನೆ ಬಂದಿಲ್ಲ. ಮೊದಲು ನಾವು ಆತನಿಗೆ ಕೊಟ್ಟಿದ್ದ ಕೆಲಸ ಬಹಳ ಕಡಿಮೆಯಿತ್ತು. ಮಣ್ಣು ಕಾಂಗಾರಿ ಮತ್ತು ರಾಕ್‌ಫಿಲಿಂಗ್ ಇಷ್ಟಕ್ಕೆಲ್ಲಾ 3 ಲಕ್ಷದ 24 ಸಾವಿರದ 800 ರೂಪಾಯಿಗಳನ್ನು, ಸಿ.ಎಫ್‌ಟಿ.ಗೆ 60 ರೂಪಾಯಿಗಳ ರೇಟಿನಲ್ಲಿ ಕೊಡಲಾಗಿತ್ತು. ಈ ಐಟಂನಲ್ಲಿ ಆತನಿಗೆ ಕೊಟ್ಟಿದ್ದ ಮಣ್ಣು ಕಾಂಗಾರಿ

ಕೆಲಸದ ಪ್ರಮಾಣ ಬಹಳ ಕಡಿಮೆಯಿತ್ತು. ಆತನನ್ನು ಮೊದಲು ಕೇಳಿದಾಗ ಆತ 150 ರೂಪಾಯಿಗಳಿಗೆ ಕೆಳಗೆ ಇಳಿಯುವುದಿಲ್ಲ ಎಂಬುದಾಗಿ ಆತ ಹೇಳಿದ್ದ. ಆಗ ನಾವು ಟೆಂಡರನ್ನು ಕರೆಯಲೇ ಬೇಕಾಯಿತು. ಟೆಂಡರನ್ನು ಕರೆದಾಗ ಇದರ ಅಂದಾಜು ಒಂದು ಕೋಟಿ 88 ಲಕ್ಷಕ್ಕೆ ಹೋಗಿ ಸಿ.ಎಫ್‌ಟಿ. 60 ರೂಪಾಯಿ ಇದ್ದುದು 88 ರೂಪಾಯಿಗೆ ಹಾರಿತು. ಆಗ ನಾವು ಅದನ್ನು ಟೆಂಡರ್ ಮೂಲಕ ಕೊಡತಕ್ಕದ್ದು ಸರಿಯಲ್ಲ, ಸರ್ಕಾರದ ದುಡ್ಡು ಸಾರ್ವಜನಿಕರ ಹಣ ಎಂದರೆ ಅದು ನಮ್ಮ ಸ್ವಂತ ಹಣವಿದ್ದಂತೆ ಎಂದು ನಾವು ಭಾವಿಸಿ, ಬಹಳ ಹಿಡಿತದಿಂದ ಕೆಲಸಮಾಡಿಸಿದ್ದೇವೆಂದು ನಾನು ಈ ಸಭೆಯಲ್ಲಿ ಘಂಟಾಘೋಷವಾಗಿ ಹೇಳುತ್ತೇನೆ. ಈ ಸಂದರ್ಭದಲ್ಲಿ ನಾವು ಒಬ್ಬ ಕಂಟ್ರಾಕ್ಟರ ಅವಾರ್ಡಿಗೆ ಒಪ್ಪಿಕೊಂಡ ವಿಚಾರವನ್ನು ಇಲ್ಲಿ ಎದುರು ಪಕ್ಷದವರು ಪದೇ ಪದೇ ಹೇಳುತ್ತಲೇ ಇದ್ದಾರೆ. ಆದರೆ ಇದರಲ್ಲಿ ಸರ್ಕಾರದ ಬಗ್ಗೆ ಯಾವ ಛಾರ್ಜೂ ಬರುವುದಿಲ್ಲ. ಈ ಬಗ್ಗೆ 18—19 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದ್ದ ಸ್ಟೇಜಿನಲ್ಲಿ ಈ ವಿಚಾರವಿದ್ದಾಗ ಒಬ್ಬರು ಶಿವಾಧೀನರಾದರು. ಆಗ ಆ ಬಗ್ಗೆ ಮತ್ತೊಮ್ಮೆ ಆರ್ಬಿಟ್ರೇಷನ್ ನಡೆದು ಅದನ್ನು ನಾವು ಒಪ್ಪಿಕೊಳ್ಳಲೇಬೇಕಾದ ಪ್ರಸಂಗ ಬಂತು. ಆಗಿದ್ದಂಥ ಮುಖ್ಯ ಮಂತ್ರಿಗಳು ಇಂಜಿನಿಯರಿಂಗ್ ಇಲಾಖೆಯ ಮುಖ್ಯಾಧಿಕಾರಿಗಳನ್ನೂ ಅಡ್ವೊಕೇಟ್ ಜನರಲ್‌ರವರನ್ನೂ ಮತ್ತು ಲಾ ಬ್ರಾಂಚಿನವರನ್ನೂ ಹೀಗೆ ಎಲ್ಲರನ್ನೂ ಕೇಳಿ ಎಲ್ಲರನ್ನೂ ಕರೆಸಿ ಸಮಾಲೋಚನೆ ಮಾಡಿ ಅವರೆಲ್ಲರ ಜಡ್ಜ್‌ಮೆಂಟಿನ ಪ್ರಕಾರ ಅದಕ್ಕೆ ಅವರು ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಎಪ್ರೋಪ್ರಿಯೇಟ್ ನಮ್ಮ ಇಲಾಖೆಯ ಸೆಕ್ರೆಟರಿಗಳೇ ಫೈಲನ್ನು ಹಿಡಿದುಕೊಂಡು ಬಂದಿದ್ದಾರೆ. ನಾವು ಇಷ್ಟು ಪ್ರಾಮಾಣಿಕತೆಯಿಂದ ನಡೆದಿದ್ದಾಗ್ಯೂ ತಾವು ದುಡ್ಡನ್ನು ನಾವು ಏನೋ ಹೊಡೆದುಬಿಟ್ಟಿದ್ದಾರೆ ಎಂತ ಲೆಕ್ಕ ಹಾಕುತ್ತಿದ್ದರೆ, ಪ್ರತಿಯೊಂದರಲ್ಲೂ ಹೀಗೆ ಅನುಮಾನ ಮಾಡುತ್ತಾ ಹೋದರೆ ನಾವು ಇನ್ನು ಕೆಲಸ ಮಾಡುವುದಾದರೂ ಹೇಗೆ? ಕಟ್ಟು ಕಥೆಗಳನ್ನು ಯಾರು ಬೇಕಾದರೂ ಎಷ್ಟು ಬೇಕಾದರೂ ಕಟ್ಟಿ ಹೇಳಬಹುದು. ಆದರೆ ಇದು ಪ್ರಗತಿದಾಯಕ ಚಿಹ್ನೆಯಲ್ಲ. ನಾವು ಎಲ್ಲ ಅಧಿಕಾರಿಗಳನ್ನೂ ತಜ್ಞರನ್ನೂ ಇಟ್ಟು ಕೊಂಡು ಅವರೆಲ್ಲರ ಸಲಹೆಯ ಪ್ರಕಾರ ಒಂದು ನಿರ್ಣಯಕ್ಕೆ ಬಂದು ಅದನ್ನು ಕಾರ್ಯ ರೂಪಕ್ಕೆ ತಂದಿದ್ದೇವೆ. ಆದರೆ ಅದು ತಮಗೆ ಅಯೋಗ್ಯವಾದುದೆಂದು ಕಂಡು ಬಂದಿದ್ದರೆ ನಮಗದು ಯೋಗ್ಯವಾದುದೆಂದು ಕಂಡುಬಂದಿದೆ. ನಾವು ಯಾವುದನ್ನೂ ದುಡುಕಿ ಮಾಡಿಲ್ಲ. ಹೀಗಿರುವಾಗ ಇದರಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಹೇಳುವುದು ಸರಿಯಲ್ಲ ಪ್ರತಿಯೊಂದು ಕೆಲಸದ ವಿಚಾರದಲ್ಲೂ ನಮ್ಮ ಇಲಾಖೆಯಲ್ಲಿ ಪೂರ್ಣ ಅನುಭವವುಳ್ಳ ಅಧಿಕಾರಿಗಳೂ ಚೀಫ್ ಇಂಜಿನಿಯರವರೂ ಇಂಥ ಕೆಲಸವನ್ನು ಇಂಥವರಿಗೇ ಕೊಡಬೇಕು, ಆಗಲೇ ಆ ಕೆಲಸ ಚೆನ್ನಾಗಿ ನಡೆಯುತ್ತದೆ. ಆ ಕೆಲಸವನ್ನು ಅವನಿಗಲ್ಲದೆ ಬೇರೆಯವರಿಗೆ ಕೊಟ್ಟರೆ ಆ ಕೆಲಸ ಸರಿಯಾಗಿ ಆಗುವುದಿಲ್ಲ ಎಂಬುದನ್ನು ತಿಳಿದ ನಂತರವೇ ನಾವು ಅವರಲ್ಲಿ ಕೈಹಾಕುವುದು, ಆದುದರಿಂದ ಇವುಗಳ ವಿಚಾರದಲ್ಲಿ ಯಾರೂ ಸಂಶಯ ಪಡಬೇಕಾಗಿಲ್ಲ.

Sri C. J. MUCKANNAPPA.—When the Law Secretary was on leave, the Additional Law Secretary gave his opinion against the opinion expressed by the Law Secretary.

Sri S. SIVAPPA.—Is the Government prepared to place the file of the Law Secretary on the Table of the House ?

Sri VEERENDRA PATIL.—I do not think there is any rule to place the file before the House. ನಾವು ವಿಚಾರಗಳು ಹೀಗೇ ಇವೆ ಎಂದು ಹೇಳಿದುದನ್ನು ತಾವುಗಳು ನಂಬಬೇಕು. ನಿಮಗೆ ಮನ ಒಪ್ಪುವಂತೆ ನಾವು ಸಮಾಧಾನಗಳನ್ನು ಹೇಳಿದಾಗ್ಯೂ ನಿಮಗೆ ಒಪ್ಪಿಕೊಳ್ಳಬೇಕೆಂಬ ಮನಸ್ಸಿಲ್ಲದಿರುವಾಗ ನಾವು ಏನು ಮಾಡುವುದಕ್ಕಾಗುತ್ತದೆ?

ಆದರೆ ಶ್ರೀಮಾನ್ ಶಿವಪ್ಪನವರು ಇನ್ನು ನೇರವಾಗಿ ನನ್ನ ಮೇಲೆ ಒಂದು ಆಪಾದನೆ ಹೊರಿಸಿದ್ದಾರೆ. ಅದೇನೆಂದರೆ, ಕಬ್ಬಿಣದ ಅದುರನ್ನು ಸಾಗಿಸುವುದಕ್ಕಾಗಿ ನಡೆಯುತ್ತಿರುವ ರಸ್ತೆಯ ಕಾಂಗಾರಿಯನ್ನು ಕೊಡತಕ್ಕ ಬಗ್ಗೆ ನಾನು ನಮ್ಮ ಊರಿನಿಂದ ಒಬ್ಬ ವ್ಯಕ್ತಿಯನ್ನು ಕರಿಸಿ ಅವನಿಗೆ ಕೆಲಸ ಕೊಟ್ಟೆ ಎಂದು ಆಪಾದನೆಮಾಡಿದ್ದಾರೆ. ಮೊದಲು ಈ ಓರ ಕ್ಯಾರಿಯಿಂಗ್ ರೋಡನ್ನು ಮಾಡಲು ಕೇಂದ್ರ ಸರ್ಕಾರದವರು 44 ಲಕ್ಷ 76 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದರು ಆ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ಆ ಕೆಲಸವನ್ನು ಪ್ರಾರಂಭಿಸುವಾಗ್ಗೆ ಮತ್ತೆ ಆದರ ಅಂದಾಜು ರಿವೈಜಾಗಿ ಅದು 175 ಲಕ್ಷದ 89 ಸಾವಿರಕ್ಕೆ ಹೋಯಿತು. 155 ಮೈಲಿ ಡಬಲ್ ರೋಡು ಮಾಡಿಸಬೇಕೆಂದು ಆ ಬಗ್ಗೆ ತಗಲತಕ್ಕ ವೆಚ್ಚದಲ್ಲಿ ಕೇಂದ್ರ ಸರ್ಕಾರದವರು ಅರ್ಧ ಭಾಗವನ್ನೂ ರಾಜ್ಯ ಸರ್ಕಾರದವರು ಅರ್ಧಭಾಗವನ್ನೂ ಹಾಕಬೇಕೆಂಬ ಅಭಿಪ್ರಾಯ ಬಂತು. ಈ

(ಶ್ರೀ ವೀರೇಂದ್ರ ಪಾಟೀಲ್)

ರಸ್ತೆಯನ್ನು ಡಬ್ಬಲ್ ಲೈನ್ ಕ್ಯಾರೇಜಾಗಿಮಾಡಿ ಇದನ್ನು ಮಾರ್ಚಿ ತಿಂಗಳೊಳಗೆ ಮುಗಿಸಬೇಕೆಂದು ಕೇಳಿದ್ದರು. ನಮ್ಮ ಸರ್ಕಾರ ಅದಕ್ಕೆ ಒಪ್ಪಿಕೊಂಡಿತ್ತು. ಈ ರಸ್ತೆಯ ಕಾಂಗಾರಿಯನ್ನು ಮಂಗಳೂರಿನಿಂದ ಪ್ರಾರಂಭಮಾಡಿ ಅಸಫಾಲ್ಟ್ ರಸ್ತೆ ಮಾಡಿಸಬೇಕೆಂದು ಕೆಲಸ ಮಂಜೂರಾಯಿತು. ಅದಕ್ಕೆ ಟೆಂಡರುಗಳನ್ನು ಕರೆದು ಈ ಕೆಲಸವನ್ನು 3–4 ಸೆಕ್ಷನ್‌ಗಳಾಗಿ ವಿಂಗಡಿಸಿ ಇದನ್ನು ಟೆಂಡರುಗಳ ಮೂಲಕ ಶುರು ಮಾಡಬೇಕೆಂದಿತ್ತು.

ಅದು ಬೇಕಾದಷ್ಟು ಮಳೆ ಬರುವಂತಹ ಪ್ರದೇಶ, ವರ್ಷದಲ್ಲಿ 5 ತಿಂಗಳಿಗಿಂತ ಹೆಚ್ಚು ಕೆಲಸ ಮಾಡುವುದಕ್ಕಾಗುವುದಿಲ್ಲ. 25 ಮೈಲಿಗಳವರೆಗೂ ಷೆಲ್ ಕಾಂಕ್ರೀಟ್ ಮಾಡಬೇಕಾಗಿದೆ. 4–5 ರಸ್ತೆಗಳಲ್ಲಿ ದಿನಾಗಲೂ ಹೆವೀ ಟ್ರಾಫಿಕ್ ಇರುತ್ತದೆ. ಅದನ್ನು ಒಳ್ಳೆಯ ಕಂಟ್ರಾಕ್ಟರ್‌ಸ್‌ಗೆ ವಹಿಸಬೇಕೆಂಬ ದೃಷ್ಟಿಯಿಂದ ಟೆಂಡರ್ ಕರೆಯುರಿ ಎಂದು ಹೇಳಿದೆವು. ಅದು ಘಾಟ್ ಸೆಕ್ಷನ್. ಮೊದಲನೆಯ ಟೆಂಡರ್‌ನಲ್ಲಿ 5 ಟೆಂಡರ್ಸ್ ಬಂದವು ಅದರಲ್ಲಿ 3 ಟೆಂಡರ್‌ರ್ಸ್‌ಗೆ ಅಸ್‌ಫಾಲ್ಟಿಂಗ್ ವರ್ಕ್‌ನಲ್ಲಿ ಅನುಭವ ಇರಲಿಲ್ಲ. ಅವರಿಗೆ ಅನುಭವ ಇಲ್ಲ ಎಂದು ಎಕ್ಸಿಕ್ಯೂಟೀವ್ ಇಂಜಿನಿಯರು ಮತ್ತು ಸೂಪರಿನ್‌ಟೆಂಡಿಂಗ್ ಇಂಜಿನಿಯರು ಹೇಳಿದರು. ಇನ್ನು ಇಬ್ಬರು ಇದ್ದರು ಅವರಲ್ಲಿ ಯಾರಾದರೂ ಒಬ್ಬರನ್ನು ಆರಿಸಿಕೊಳ್ಳಬೇಕಾಗಿತ್ತು. ಅವರಲ್ಲಿ ಒಬ್ಬನು ನನ್ನ ಕಡೆಯಿಂದ ಆಗುವುದಿಲ್ಲ ಬೇರೆ ಕಡೆ ಕೆಲಸ ಕೊಟ್ಟಿದ್ದೀರಿ ನನಗೆ ಕೈ ತುಂಬಾ ಕೆಲಸ ಇದೆ ಎಂದು ಹೇಳಿದ. ಇನ್ನು ಉಳಿದವನು ನನ್ನ ಪ್ರದೇಶದವನು ಎಂದು ತಾವುಗಳು ಹೇಳುತ್ತಾ ಇದ್ದೀರಿ, ಅದು ನನಗೆ ಗೊತ್ತಿಲ್ಲ; ಅವನಿಗೆ ಅಲ್ಲಿ ಆಸ್ತಿ ಇಲ್ಲ, ಪಾಸ್ತಿ ಇಲ್ಲ ಅವನಿಗೂ ಗುಲ್ಬರ್ಗ ಜಿಲ್ಲೆಗೂ ಸಂಬಂಧವೇ ಇಲ್ಲ. ಹಾಗಿರುವಾಗ ಅವನು ನನ್ನ ಜಿಲ್ಲೆಯವನು ಎಂದರೆ ಇಡೀ ಮೈಸೂರು ಸಂಸ್ಥಾನದಲ್ಲಿರುವವರೆಲ್ಲರೂ ನನ್ನವರೇ ಎಂದು ಹೇಳಿದಂತಾಗುತ್ತದೆ. ಅವನನ್ನು ಬಿಟ್ಟರೆ ಮತ್ತೊಬ್ಬರು ಯಾರೂ ಅಲ್ಲಿ ಕೆಲಸ ಮಾಡುವುದಕ್ಕೆ ಇರಲಿಲ್ಲ. ಅವನ ಹತ್ತಿರ ಮೆಷಿನರಿ ಇದೆ, ಅನೇಕ ವರ್ಷಗಳಿಂದ ಕೆಲಸ ಮಾಡುತ್ತಾ ಇದ್ದಾನೆ ಎಂದು ಚೀಫ್ ಇಂಜಿನಿಯರು ಹೇಳಿದರು ಅದೇ ಕೆಲಸದಲ್ಲಿ ಅವನು ಸ್ಪೆಷಲೈಸ್ ಮಾಡಿದ್ದಾನೆ ಎಂದು ರಿಪೋರ್ಟ್ ಬಂದು ಅವನನು ರೆಕಮೆಂಡ್ ಮಾಡಿದ್ದರ ಮೇಲೆ ಅವನಿಗೆ ಆ ಕೆಲಸವನ್ನು ಕೊಡಲಾಯಿತು. ಒಂದು ವೇಳೆ ಅವನು ನನ್ನ ಜಿಲ್ಲೆಯವನು ಎಂದು ಹೇಳುವುದಾದರೆ ಅವನು ನನ್ನ ಜಿಲ್ಲೆಯವನಾಗಿದ್ದರೆ ನಾನು ಸುಮ್ಮನೆ ಕಣ್ಣು ಮುಚ್ಚಿಕೊಂಡು ಕೊಡಬಹುದಾಗಿತ್ತು. ಆ ರೀತಿ ಮಾಡಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾಗಾರ್ಜುನಸಾಗರಕ್ಕೆ ಅವರು ತಮ್ಮ ಸ್ವಂತ ಕಾರಿನಲ್ಲಿ ಕರೆದುಕೊಂಡು ಹೋದರು ಅಲ್ಲವೆ.

ಶ್ರೀ ವೀರೇಂದ್ರ ಪಾಟೀಲ್.—ಅವರೇನೂ ಆ ರೀತಿ ಕರೆದುಕೊಂಡು ಹೋಗಬೇಕಾಗಿಲ್ಲ, ಎರಡನೇ ಸ್ಟೇಟಿಗೆ ಹೋದರೆ ನಮ್ಮನ್ನು ಸ್ಟೇಟ್ ಗೆಸ್ಟ್ ಅಂತ ಪರಿಗಣಿಸುತಾರೆ. ಕಾರು ಕೊಡುತ್ತಾರೆ, ಸ್ಥಳ ಕೊಡುತ್ತಾರೆ ಆದ್ದರಿಂದ ನಾವು ಯಾರ ಮನೆಬಾಗಿಲಿಗೂ ಹೋಗಬೇಕಾದಂತಹ ಪರಿಸ್ಥಿತಿ ಇರುವುದಿಲ್ಲ. ಇದು ಘಾಟ ಸೆಕ್ಷನ್ ಆದಷ್ಟು ಬೇಗ ಮುಗಿಯಬೇಕು ನಮ್ಮ ಹತ್ತಿರ ಅದಕ್ಕೆ ಬೇಕಾದ ಮೆಷಿನರಿ ಇರಲಿಲ್ಲ. ಕೇಂದ್ರ ಸರ್ಕಾರದವರು ಸಹಾಯ ಮಾಡುತ್ತೇವೆ ಎಂದು ಹೇಳಿದ್ದರು ಆದ್ದರಿಂದ ಆ ಕೆಲಸ ತೆಗೆದುಕೊಳ್ಳುವವರಿಗೆ ಬೇಕಾದ ಸಹಾಯವನ್ನು ಮಾಡುತ್ತೇವೆ ಎಂದು ಹೇಳಿದ್ದೆವು. ಆಗಿನ ಪರಿಸ್ಥಿತಿ ಏನಾಗಿತ್ತು ಎಂದರೆ, 30 ಜನ ಕ್ಲಾಸ್ (1) ಕಂಟ್ರಾಕ್ಟರ್ಸ್ ರಿಜಿಸ್ಟರ್ ಮಾಡಿಕೊಂಡಿದ್ದರು ಅವರಲ್ಲಿ ಕೆಲವು ಹೆಸರುಗಳನ್ನು ಹೇಳುವುದಾದರೆ, ಗ್ಯಾನನ್ ಅಂಡ್ ಡಂಕರಲಿ, ತಾರಾಪುರ ಇವರುಗಳೆಲ್ಲಾ ಇದ್ದರು. ಅವರನ್ನು ಈ ಕೆಲಸ ಮಾಡುತ್ತೀರಾ ಎಂದು ಕೇಳಿದ್ದೇವೆ. ಎರಡನೆಯ ಸಲ 10 ಜನ ಟೆಂಡರ್‌ಗಳನ್ನು ಹಾಕಿದರು. ಅವರಲ್ಲಿ 3 ಜನರಲ್ಲಿ ಮೆಷಿನರಿ ಇರಲಿಲ್ಲ ಇನ್ನು 3 ಜನರು ಮೆಷಿನರಿ ಇದೆ ಎಂದು ಹೇಳಿದರು ಆದು ಎಲ್ಲಿದೆ ಎಷ್ಟಿದೆ ಎಂಬುದು ಗೊತ್ತಿರಲಿಲ್ಲ.

(Mr. SPEAKER in the Chair)

Mr. SPEAKER.—It is 5-5 P. M. now. According to the schedule we have to get up at 6 P. M. I have promised 15 minutes to the Mover of the metion for reply.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ನಮ್ಮ ಪಕ್ಷಕ್ಕೆ ಎಷ್ಟು ಅವಶ್ಯಕವಾದ ಕಾಲ ಬೇಕಾಗಿತ್ತೋ ಅಷ್ಟು ತಾವು ಕೊಡಬೇಕು, ನಮಗೆ ಕೊಟ್ಟಿದ್ದ ಕಾಲದಲ್ಲಿ ಎದುರು ಪಕ್ಷದವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ.

Mr. SPEAKER.—What more time does the Minister require to omplete his speech ?

Sri VEERENDRA PATIL.—I want half-an-hour more Sir. At least another fifteen minutes I want.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಇನ್ನೂ ಒಂದು ಗಂಟೆ ಕಾಲ ಮುಂದುವರಿಸಿ ನಮಗೂ ಮಾತನಾಡುವುದಕೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತಾ ಇದ್ದೇನೆ.

Mr. SPEAKER.—So, either the House has to extend the time or...

(Some Members : No, no)

Sri S. NIJALINGAPPA (Chief Minister).—Sir, the Minister for Revenue has to speak and I want to speak. I have arguments sufficient for five days over the charges they have made, but I do not think it is necessary. If the House is not in a mood to listen and want that the entire subject closes at 6, the motion may be put to vote.

ಶ್ರೀ ಎಸ್. ಗೋಪಾಲ ಗೌಡ.—ಮುಖ್ಯಮಂತ್ರಿಗಳು ಬಹಳ ವಿಷಯ ಇದೆ ಹೇಳುವುದು ಎಂದು ಹೇಳಿದರು. ಇದು 6 ಗಂಟೆಗೆ ಮುಗಿಯಬೇಕೆಂದು ತಾವು ಪೂರ್ವ ಭಾವಿಯಾಗಿ ಹೇಳಿದಿರಿ. ನಮ್ಮ ಸ್ನೇಹಿತರು ಇನ್ನೂ ಒಂದು ಗಂಟೆ ಮುಂದುವರಿಸಬೇಕೆಂದು ಹೇಳುತ್ತಾ ಇದ್ದಾರೆ. ಇನ್ನೂ ಅನೇಕ ಸಂದರ್ಭಗಳು ಬರುತ್ತವೆ ಸರ್ಕಾರದವರು ಉತ್ತರ ಹೇಳುವುದಕ್ಕೆ ಅವಕಾಶವಿದೆ ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ 5 45ರ ತನಕ ಅವರ ಕಡೆಯವರು ಮಾತನಾಡಲಿ, ಅಲ್ಲಿಂದ ಮುಂದೆ 6 ಗಂಟೆಯವರೆಗೂ ಶಿವಪ್ಪನವರು ಮಾತನಾಡಲಿ 6 ಗಂಟೆಗೆ ಈ ಸಭೆಯನ್ನು ಮುಕ್ತಾಯ ಗೊಳಿಸಬಹುದು ಎಂದು ಹೇಳುತ್ತೇನೆ.

Mr. SPEAKR.—On important matters like this we should not be so meticulous that we should get up at 6 P.M. and all that. I have heard the suggestions; they do not bindme. I have to gather the opinion of the House. Is it the desire of the House that the time should be extended by one hour ?

HON'BLE MEMBERS.—Yes.

Mr. SPEAKER.—I take it that the opinion of the House is to extend the time by one Hour. Mr. Sivappa will commence his reply at 6-30 P.M.

5–30 P.M.

ಶ್ರೀ ವೀರೇಂದ್ರ ಪಾಟೀಲ್.—ಈಗ ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಎರಡು ಸಲ ಟೆಂಡರು ಕರೆದಾಗ ಏಳು ಟೆಂಡರು ಬಂದುವು. ಅದರಲ್ಲಿ ಒಬ್ಬ ಟೆಂಡರುದಾರನಿಗೆ ಹೊರತು ಉಳಿದವರಲ್ಲಿ ಬೇಕಾದ ಮೆಷೀನರಿ ಒಂದೂ ಇರಲಿಲ್ಲ. ಅಸ್ಫಾಲ್ಟ್ ಮಾಡುವುದರಲ್ಲಿ ಸ್ಪೆಷಲೈಜ್ ಮಾಡಿಕೊಂಡಿದ್ದ ಕೆಲವು ಕಂಟ್ರಾಕ್ಟರುಗಳಿದ್ದರು. ಅವರನ್ನು ಕೇಳಿದರೆ ತಾವು ಕೆಲಸಮಾಡಲು ಸಾಧ್ಯವಾಗುವುದಿಲ್ಲವೆಂದು ಹೇಳಿದರು. ಆದಾದಮೇಲೆ ಕೊನೆಗೆ ಯಾರು ಮುಂದೆ ಬಂದಿದ್ದರೋ ಅವರ ಬಗ್ಗೆ ಚೀಫ್ ಎಂಜನಿಯರು ಶಿಫಾರ್ಸು ಮಾಡಿದರು. ಅವರು ಮೈಸೂರು, ಮಹಾರಾಷ್ಟ್ರ ಮುಂತಾದ ಕಡೆಗಳಲ್ಲಿ ಸಾವಿರಾರು ಮೈಲಿ ಅಸ್ಫಾಲ್ಟ್ ಕೆಲಸ ಮಾಡಿದ್ದಾರೆ, ಅವರಲ್ಲಿ ಎಕ್ವಿಪ್ ಮೆಂಟ್ ಇದೆ, ಅವರು ಇದುವರೆಗೆ ಕೆಲಸಮಾಡಿರುವ ದರದ ಪ್ರಕಾರ ಅವರಿಗೆ ಕೆಲಸ ವಹಿಸಲು ಅವ ಕಾಶ ಕೊಡಬಹುದು ಎಂದು ಚೀಫ್ ಎಂಜಿನಿಯರು ಬರೆದರು. ಲೋಯೆಸ್ಟ್ ರೇಟ್ ಎರಡೂವರೆ ಇಂಚಿಗೆ 95 ರೂಪಾಯಿ, ಮುಕ್ಕಾಲು ಇಂಚಿಗೆ 47 ರೂಪಾಯಿ 50 ಪೈಸೆ ಇತ್ತು. ಆದು ಲೋಯೆಸ್ಟ್ ಟೆಂಡರ್ ರೇಟ್.

ಶ್ರೀ ಎಸ್. ಶಿವಪ್ಪ.—ಆ ಬಗ್ಗೆ ಸಂಬಂಧಪಟ್ಟ ಅಸಿಸ್ಟೆಂಟ್ ಎಂಜಿನಿಯರಿಂದ ವರದಿ ತರಿಸಿದಿರಾ ?

ಶ್ರೀ ವೀರೇಂದ್ರ ಪಾಟೀಲ್.—ಪ್ರತ್ಯೇಕವಾಗಿ ಕೇಳಿದ್ದರೆ ಕಳುಹಿಸುತ್ತಿದ್ದರು. ಆ ವರದಿ ನನ್ನ ಮುಂದಿಲ್ಲ. ಅಸಿಸ್ಟೆಂಟ್ ಎಂಜಿನಿಯರು ಎಗ್ಸಿಕ್ಯುಟಿವ್ ಎಂಜಿನಿಯರಿಗೆ ವರದಿ ಮಾಡಿರುವುದು ಮಂತ್ರಿಗಳಿಗೆ ಹೇಗೆ ಗೊತ್ತಾಗುತ್ತದೆ? ಈಗ ಚೀಫ್ ಎಂಜಿನಿಯರಿಂದ ಬಂದಿರುವುದನ್ನು ಹೇಳುತ್ತೇನೆ. ಈಗ ಬಂದಿರುವವದನ್ನು ಬಿಟ್ಟರೆ ಬೇರೆ ಯಾರೂ ಇಲ್ಲ, ಆದುದರಿಂದ ಹೆಚ್ಚು ಹಣ ಕೊಡಬೇಕು ಎಂದು ಶಿಫಾರಸು ಮಾಡಿದರು. ಅದನ್ನು ಒಪ್ಪಿಕೊಳ್ಳಬಹುದಾಗಿತ್ತು. ಆದರೆ ಒಪ್ಪುವುದಕ್ಕೆ ಸಾಧ್ಯವಿಲ್ಲ ಎಂದು ಕಂಟ್ರಾಕ್ಟರನ್ನು ಕರೆಸಿ ಬೇರೆ ಯಾರೂ ಮಾಡುವುದಕ್ಕಾಗುವುದಿಲ್ಲ ಎಂದು ಲೋಯೆಸ್ಟ್ ಟೆಂಡರು ಆಧಾರದ ಪ್ರಕಾರ ಅವನಿಗೆ ಕೆಲಸ ಕೊಟ್ಟೆವು. ಸರ್ಕಾರಕ್ಕೇನೂ ಹಣದ ಹಾನಿಯಾಗಿಲ್ಲ. ನಾವು ಒಪ್ಪಿರುವುದು ಲೋಯೆಸ್ಟ್ ಟೆಂಡರು ದರ. ಈ ವಿಚಾರ ರೇವಣ್ಣಸಿದ್ದಪ್ಪನವರಿಗೆ ಗೊತ್ತು, ಅವರ ಕ್ಷೇತ್ರ, ಮುಕ್ಕಾಲು ಇಂಚಿಗೆ 47 ರೂಪಾಯಿ 50 ಪೈಸೆ ಆಗುತ್ತದೆ. ವರ್ಷಕ್ಕೆ 6 ತಿಂಗಳು ಮಳೆ ಇರುತ್ತದೆ, ಎಲ್ಲಾ ಲೇಬರ್ ಇಂಪೋರ್ಟ್ ಮಾಡಬೇಕು. ಹೀಗೆ ಎಲ್ಲಾ ತೊಂದರೆ ಇರುವ ಕಡೆ 47 ರೂಪಾಯಿ 50 ಪೈಸೆ ನಾವು ಕೊಟ್ಟಿರುವುದು. ಹೀಗಿರುವಾಗ ಸರ್ಕಾರಕ್ಕೆ ಹಾನಿಯೇನಾಗಿದೆಯೆಂಬುದು ಗೊತ್ತಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—'ಎ' ಕ್ಲಾಸ್ ಕಂಟ್ರಾಕ್ಟರ್ ಎಂದು ಯಾವ ಕಂಡೀಷನ್ ಮೇಲೆ ಒಪ್ಪುತ್ತೀರಿ? ಅವರ ಟೆಂಡರನ್ನು ಏಕೆ ತೆಗೆದುಕೊಂಡಿರುವುದು?

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಸಂಸ್ಥಾನದಲ್ಲಿ ದುರ್ದೈವದಿಂದ 'ಎ' ಕ್ಲಾಸ್ ಕಂಟ್ರಾಕ್ಟರುಗಳೇನಿದ್ದಾರೆ ಅವರ ಹತ್ತಿರ ಸಲಕರಣೆಗಳು ಏನೂ ಇಲ್ಲ, ಅನೇಕ ಜನರ ಹತ್ತಿರ ಲಾರಿ, ಮೆಷಿನರಿ ಮುಂತಾದ್ದೇನೂ ಇಲ್ಲ. ಪ್ರತಿಯೊಂದೂ ನಾವೇ ಕೊಟ್ಟು ಮಾಡಿಸಬೇಕು. ಎಲ್ಲಾ ಷರತ್ತುಗಳನ್ನೂ ಹಾಕಿದರೆ ಕೆಲವರು ಮಾತ್ರ 'ಎ' ಕ್ಲಾಸ್ ಕಂಟ್ರಾಕ್ಟರುಗಳಿರುತ್ತಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಾಗಿದ್ದಮೇಲೆ ಯಾರೂ ಬೇಕಾದವರೂ 'ಎ' ಕ್ಲಾಸ್ ಕಂಟ್ರಾಕ್ಟರಾಗಬಹುದು. ಸರಿಯಾದ ರೀತಿಯಲ್ಲಿದ್ದವರ 'ಎ' ಕ್ಲಾಸ್ ಕಂಟ್ರಾಕ್ಟರು ಎಂದು ಪರಗಣಿಸಿ, ಹಾಗಿಲ್ಲದಿದ್ದರೆ ಲೈಸೆನ್ಸ್ ತೆಗೆದುಬಿಡಿ.

ಶ್ರೀ ವೀರೇಂದ್ರ ಪಾಟೀಲ್.—ಹಾಗೇಯೇ ಮೊದಲಿನಿಂದ ಇರುವುದು. ನಾನು ಮಾಡಿರುವದಲ್ಲ. ಅದು ಬೇರೆ ವಿಚಾರ. ಈಗಿರುವ ಪ್ರಕಾರ 'ಎ' ಕ್ಲಾಸ್ ಕಂಟ್ರಾಕ್ಟರಿಗೆ ಪ್ರತಿಯೊಂದೂ ನಾವೇ ಕೊಟ್ಟು ಕೆಲಸ ಮಾಡಿಸಬೇಕಾಗುತ್ತದೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ದರ ನಾಲ್ಕರಷ್ಟು ಹೆಚ್ಚಾಗಿ ಕೊಟ್ಟಿರುವುದರ ಉದ್ದೇಶವೇನು?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲ, ಹಾಗೆ ಕೊಟ್ಟಿಲ್ಲ, ಲೋಯೆಸ್ಟ್ ಟೆಂಡರು ದರವನ್ನೇ ಕೊಟ್ಟಿದ್ದೇವೆಂದು ಘಂಟಾಘೋಷವಾಗಿ ಹೇಳುತ್ತಿದ್ದೇನೆ. ನೆಗೋಷಿಯೇಟ್ ಮಾಡುವುದಕ್ಕೆ ಮುಂಚೆ ನಮ್ಮ ಹತ್ತಿರ ಇರುವ ಮೆಷೀನರಿ ಕೊಡುತ್ತೇವೆ, ಇಲ್ಲದಿರುವುದನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದೇವೆ.

Sri S. SIVAPPA.—The condition is that the contractor should get his own machinery. In spite of that condition, the contact was given to this contractor who had also no machinery.

ಶ್ರೀ ವೀರೇಂದ್ರ ಪಾಟೀಲ್.—ಆ ಕಂಡೀಷನ್ನಿಗೆ ಒಪ್ಪಿಕೊಳ್ಳಬೇಕಾದರೆ ಅವನ ದರ ಒಪ್ಪಿಕೊಳ್ಳಬೇಕಾಗುತ್ತದೆ; ಉಳಿದ ಟೆಂಡರು ಇನ್‌ವ್ಯಾಲಿಡ್ ಆಗುತ್ತದೆ. ಅವನ ಮೆಷೀನರಿಯೇ ಇದೆ, ನಾವು ಹೆಚ್ಚಾಗಿ ಕೊಟ್ಟಿಲ್ಲ. ನಾವೇನಿದ್ದರೂ ರಿಲೀ ಮಾಡಿದಮೇಲೆ ಕೆಲವು ಬಾಯ್ಲರ್ಸ್ ಮುಂತಾದುವನ್ನು ಕೊಟ್ಟಿದ್ದೇವೆ. ಈ ದಿವಸ ರೂ. 47-50 ಬಹಳ ಹೆಚ್ಚು ಎಂದು ಹೇಳುತ್ತೀರಾ? ತಿಪಟೂರಿನಲ್ಲಿ ಅಷ್ಟೇ ದರವಿದೆ, ಬೇಕಾದಷ್ಟು ಲೇಬರ್ ಇದೆ ತಿಪಟೂರು ಮತ್ತು ಮಂಗಳೂರುಗಳಲ್ಲಿ ಟೆಂಡರು ಒಂದೇ ಇಲ್ಲ, ಹೊರಗಿನಿಂದ ಲೇಬರ್ ಇಂಪೋರ್ಟ್ ಮಾಡಬೇಕು.

ಶ್ರೀ ಎ. ಎಂ. ದೇವ್.—ಕಂಟ್ರಾಕ್ಟ್ ಕೊಟ್ಟು ಅನ್ಯಾಯವಾಗುವುದಕ್ಕೆ ಬದಲಾಗಿ ಡಿಪಾರ್ಟ್‌ಮೆಂಟಲ್ಲಾಗಿ ಕೆಲಸ ತೆಗೆದುಕೊಳ್ಳುವುದಕ್ಕೇನು ಕಷ್ಟ?

ಶ್ರೀ ವೀರೇಂದ್ರ ಪಾಟೀಲ್.—ನೀವು ಎಷ್ಟೇ ಸಲ ಹೇಳಿದರೂ ನಾನು ಅದನ್ನು ಕೇಳುವುದಕ್ಕೆ ತಯಾರಾಗಿಲ್ಲ.

ಈ ರೀತಿಯಾಗಿ ನಾವು ಅವನಿಗೆ ಕೊಟ್ಟಿದ್ದೇವೆ. ಆದಾದ ಮೇಲೆ ಅವನು ತನ್ನ ಮೆಷನರಿ ಹಾಕಿಕೊಂಡು ಕೆಲಸ ಮಾಡುತ್ತಿದ್ದಾನೆ. ನಮ್ಮ ಹತ್ತಿರ ಏನು ಮೆಷಿನರಿ ಇತ್ತೋ ಅದನ್ನು ಅದಷ್ಟು ತೀವ್ರವಾಗಿ ಕೆಲಸ ಮುಗಿಯುವಂತೆ ಮಾಡುವುದಕ್ಕಾಗಿ ಕೊಟ್ಟಿದ್ದೇವೆ. ಟೆಂಡರ್ ರೇಟ್ ಪ್ರಕಾರ ಆದಷ್ಟು ತೀವ್ರವಾಗಿ ಕೆಲಸ ಮುಗಿಯಬೇಕೆಂದು ಕೊಟ್ಟಿದ್ದೇವೆ. ಈ ಮಾತನ್ನು ಇವತ್ತಿನ ದಿವಸ ಮತ್ತೊಮ್ಮೆ ಸ್ಪಷ್ಟವಾಗಿ ಹೇಳುತ್ತೇನೆ. ಯಾರಿಗೂ ಫೇವರ್ ಮಾಡುವ ಪ್ರಶ್ನೆ ಇಲ್ಲ ಎಂದು ಮುಚ್ಚು

ಮರೆ ಇಲ್ಲದೆ ಹೇಳುತ್ತೇನೆ. ವಿರೋಧ ಪಕ್ಷದವರು ಅನೇಕ ಅಪಾದನೆಗಳನ್ನು ಏನು ಮಾಡಿದ್ದಾರೆ ಬಹುಶ: ಅವರು ಎಲ್ಲ ವಿಚಾರಗಳನ್ನೂ ತಿಳಿದುಕೊಳ್ಳಲಾರದೆ ಮಾಡಿದ್ದಾರೆ ಮತ್ತು ಅವುಗಳಲ್ಲಿ ಹುರುಳಿಲ್ಲ ಎಂದು ಸ್ಪಷ್ಟವಾಗಿ ಹೇಳಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಅವಿಶ್ವಾಸ ನಿರ್ಣಯವನ್ನು ತಂದಾಗ ನಮ್ಮ ವಿರೋಧ ಪಕ್ಷದ ಮಿತ್ರರು ಆಹಾರ ಪರಿಸ್ಥಿತಿಯ ಒಂದೇ ಕಾರಣವನ್ನು ಇಟ್ಟುಕೊಂಡಿದ್ದರೆ ಬಹಳ ಸ್ವಾರಸ್ಯವಾಗಿರುತ್ತಿತ್ತು. ಈಗ ದೇಶದಲ್ಲಿ ಆಹಾರ ಪರಿಸ್ಥಿತಿ ಕೆಟ್ಟಿದೆ, ಅದಕ್ಕೆ ನೀವೇ ಕಾರಣಕರ್ತರು ; ಆದ್ದರಿಂದ ಈ ಸರ್ಕಾರ ಅಧಿಕಾರದಲ್ಲಿರುವುದಕ್ಕೆ ಅರ್ಹವಾಗಿಲ್ಲ ಎನ್ನುವುದನ್ನು ಹೇಳುವುದಕ್ಕೆ ಪ್ರಯತ್ನ ಪಟ್ಟಿದ್ದರೆ ಸ್ವಲ್ಪ ಸ್ವಾರಸ್ಯವಾಗಿ ಕಾಣುತ್ತಿತ್ತೋ ಏನೋ. ಆದರೆ ಹಳೆಯ ಚಾಳಿ ಹೋಗುವುದಿಲ್ಲ ಪೂರ್ವದಿಂದಲೂ ಇದ್ದುದನ್ನು ಆಹಾರ ಪರಿಸ್ಥಿತಿಯ ಜೊತೆಗೆ ಸೇರಿಸಿ ತಂದರು. ಹೀಗೆ ತಂದಂಥ ಕೆಲವು ಆರೋಪಗಳಿಗೆ ನಮ್ಮ ಮಾನ್ಯ ಮಿತ್ರರಾದ ವೀರೇಂದ್ರ ಪಾಟೀಲರು ಈಗ ತಾನೆ ಉತ್ತರ ಕೊಟ್ಟಿದ್ದಾರೆ. ಹಾಗೆಯೇ ಶ್ರೀಮಾನ್ ಆರ್. ಎಂ. ಪಾಟೀಲರೂ ಉತ್ತರ ಕೊಟ್ಟಿದ್ದಾರೆ. ನಮ್ಮ ಮಿತ್ರರಾದ ವೀರೇಂದ್ರ ಪಾಟೀಲರು ಎದುರು ಪಕ್ಷದ ಮಿತ್ರರ ಹೃದಯ ಪರಿವರ್ತನೆಯಾಗುವಂತೆ ಹೇಳಿದ್ದಾರೆ.

ಆಹಾರದ ಪರಿಸ್ಥಿತಿಯ ವಿಷಯದಲ್ಲಿ ನನ್ನ ಉತ್ತರವಾದರೂ ಇಷ್ಟೆ : ಈ ಆಹಾರ ಪರಿಸ್ಥಿತಿಯ ಬಗ್ಗೆ ನಾನು ಏನಾದರೂ ಮಾತನಾಡುವಾಗ ಲೋಕಾಭಿರಾಮವಾಗಿ ಮಾತನಾಡುತ್ತೇನೆಂದು ಭಾವಿಸದೆ ತೀವ್ರವಾಗಿ ತೆಗೆದುಕೊಳ್ಳಬೇಕೆಂದು ನಾನು ವಿರೋಧ ಪಕ್ಷದ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆಹಾರ ಪರಿಸ್ಥಿತಿ ಕೆಟ್ಟಿದೆ. ಕೆಟ್ಟಿಲ್ಲ ಎಂದು ಯಾರೂ ಹೇಳುವುದಿಲ್ಲ. ಹಿಂದೂಸ್ಥಾನ ಸರ್ಕಾರದಲ್ಲಿ 10 ವರ್ಷ ಮತ್ತು ಈಗ 3 ವರ್ಷದಿಂದ ರಾಜ್ಯ ಸರ್ಕಾರದಲ್ಲಿ ಆಹಾರ ಮಂತ್ರಿಯಾಗಿ ಕೆಲಸ ಮಾಡುತ್ತಿದ್ದೇನೆ. ಈಗ ಬಂದಿರುವಂಥ ಪರಿಸ್ಥಿತಿಯನ್ನು ಈ 13 ವರ್ಷಗಳ ಅವಧಿಯಲ್ಲಿ ನಾನು ನೋಡಿರಲಿಲ್ಲ. ದೇಶದಲ್ಲಿ ಆಹಾರವಿತ್ತು. ಆದರೆ ಜನಗಳು ಗಾಬರಿ ಬಿದ್ದು ಎಲ್ಲೆಲ್ಲಿಯೂ ಕೂಡ ಒಳ್ಳೆಯ ಉದ್ದೇಶದಿಂದಲೇ ಬೆಳೆಯುವವರು, ಮಾರುವವರು, ತಿನ್ನುವವರು ಕೂಡ ಪ್ರತಿಯೊಬ್ಬರೂ ಮುಂದೆ ಕಷ್ಟಕಾಲವಿದೆ ಎಂದು ಸ್ವಲ್ಪ ಸ್ವಲ್ಪ ಬಚ್ಚಿಡುವುದಕ್ಕೆ ಪ್ರಯತ್ನ ಮಾಡಿದರು. ಈ ದೇಶದಲ್ಲಿ ನೀವೇ ಮಂತ್ರಿಗಳಾಗಿದ್ದರೂ ಕೂಡ ಆಹಾರ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಆಗುವುದಿಲ್ಲ. ಹೀಗಿರಬೇಕಾದರೆ ದೇಶದ ಪರಿಸ್ಥಿತಿ ಏನಾಯಿತು ಎಂದು ತಾವು ಯೋಚಿಸಬೇಕು. ಮಂತ್ರಿಗಳು ಹಿಂದೂಸ್ಥಾನದ ವಿಷಯ ಹೇಳುತ್ತಾರೆ, ನಾವು ಕೇಳುತ್ತಿರುವುದು ಮೈಸೂರು ರಾಜ್ಯದ ವಿಷಯ ಎಂದು ಮಾನ್ಯಸದಸ್ಯರು ಹೇಳಬಹುದು. ಅದು ತಿಳುವಳಿಕೆ ಇಲ್ಲದವರು ಹೇಳುವ ಮಾತು. ಹಿಂದೂಸ್ಥಾನದಲ್ಲಿ ಆಹಾರ ಪರಿಸ್ಥಿತಿ ಕೆಟ್ಟಿರುವಾಗ ಮೈಸೂರು ರಾಜ್ಯದಲ್ಲಿ ನಾವು ಒಳ್ಳೆಯ ಸ್ಥಿತಿಯಲ್ಲಿ ಇಟ್ಟುಕೊಳ್ಳಬಹುದು, ಮಂತ್ರಿಗಳು ಬಹಳ ಬುದ್ಧಿವಂತರಾಗಿದ್ದರೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು, ಆ ರೀತಿ ಆಗುವುದಿಲ್ಲ. ಹಿಂದೂಸ್ಥಾನದ ಆಹಾರ ಪರಿಸ್ಥಿತಿ ಕೆಟ್ಟಿರುವಾಗ ನಮ್ಮ ದೇಶದ ಪರಿಸ್ಥಿತಿಯನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತೇವೆ ಎನ್ನುವುದು ಶುದ್ಧ ತಿಳಿಗೇಡಿತನ ಎಂದು ನಾನು ಹೇಳುತ್ತೇನೆ. ಅದೇ ರೀತಿ ಪ್ರಪಂಚದ ಆಹಾರ ಪರಿಸ್ಥಿತಿ ಕೆಟ್ಟಿರುವಾಗ ಹಿಂದೂಸ್ಥಾನದ ಆಹಾರ ಪರಿಸ್ಥಿತಿಯನ್ನು ಒಳ್ಳೆಯದಾಗಿ ಇಟ್ಟುಕೊಳ್ಳುತ್ತೇವೆ ಎಂದು ಹೇಳುವುದು ಕಷ್ಟ. ಇದನ್ನೆಲ್ಲಾ ನಾವು ಕೂಲಂಕಷವಾಗಿ ಯೋಚನೆಮಾಡಿ ತಿಳಿದುಕೊಳ್ಳಬೇಕು. ಅಮೆರಿಕಾದಲ್ಲಿ ಲೇಬರ್ ಸ್ಟ್ರೈಕ್ ಹಡಗಿನಲ್ಲಿ ಸಾಮಾನು ತುಂಬುವ ಸ್ಥಳದಲ್ಲಿ ಆದರೆ ನಮ್ಮ ದೇಶದ ಆಹಾರ ಪರಿಸ್ಥಿತಿಯ ಮೇಲೆ ಅದರ ಪರಿಣಾಮವಾಗುತ್ತದೆ. ಈ ದೃಷ್ಟಿಯಿಂದ ನೋಡುವುದಾದರೆ, ಈಗ ನಾಲ್ಕೈದು ತಿಂಗಳಿನಿಂದ ಬಂದ ಕಷ್ಟ ಇಡೀ ಹಿಂದೂಸ್ಥಾನಕ್ಕೆಲ್ಲ ಬಂದಂಥಾದ್ದು.

Sri S. SIVAPPA—Sir, on a point of procedure. While alloting time for the business of the House it was agreed that the House should rise at 6 O'clock and so I was given 15 miniutes by the Chair to reply. According to that now it is 5-45 and since the scheduled time for the close of the session is 6 P.M. I must be given opportunity to reply now because it is now 5-45. I request the Speaker to give me chance to reply now.

Mr. SPEAKER.—The Hon'ble member must remember that it is not his opinion but the opinion of the House that prevails.

Sri S. SIVAPPA.—We have not agreed for any extension of time. Even during the last 3 days when we asked to give us some more time

(SRI S. SHIVAPPA)

after 6 O'clock the House never gave consent and the House had to rise exactly at 6 O'clock. So today also the House should rise at 6 P.M. Why should we sit longer? We have not agreed to it.

Mr. SPEAKER.—I have heard what the member has said.

Sri S. SIVAPPA.—So I must be given opportunity now to reply otherwise 6 O'clock will be over.

Sri S. GOPALAGOWDA.—You cannot take us for granted.

Mr SPEAKER.—It is the decision of the House. If the Hon'ble member had been in the House he would have known it. If he had been in the lounge, how could I help it? The decision has gone into the record and it was by consent of the House that the time had been extended. The House has given its consent to it.

Sri S. SIVAPPA.—We have not given our consent. During the last 3 days when we asked the Ministers to extend the time they did not agree. What is the speciality today?

Mr. SPEAKER.—I have already said that it is the decision of the House that we should sit today till 7 P. M. and I have already said that at 6.45 P. M. I will call upon Sri Sivappa to reply. In spite of that if Sri Sivappa says that he has not agreed and if Sri Gopal Gowda says that he has not agreed, I am sorry I cannot entertain such requests.

Sri S. GOPALAGOWDA.—'ಹೌಸ್' ಎಂದರೆ ತಾವು ಮತ್ತು ಕಾಂಗ್ರೆಸ್ ಸದಸ್ಯರು ಮಾತ್ರವೋ, ನಾವು ಸೇರುತ್ತೇವೆಯೋ?

Mr. SPEAKER.—How does the member understand it?

ಶ್ರೀ ಎಸ್. ಗೋಪಾಲ ಗೌಡ.—ನಿಮ್ಮ ಅಭಿಪ್ರಾಯದ ಪ್ರಕಾರ ನಾವು ಅಲ್ಲ ಎಂದು.

Sri S. M. KRISHNA.—At one time the Leader of the House was not agreeable for any change of the timing ......

Mr. SPEAKER.—It has gone into record that the House agrees to sit till 7 O'clock.

Sri S. M. KRISHNA.—I was in the House. It is a convention when you say that 'I have taken the consensus of the House' invariably the convenience of the Leader of the Opposition and the Opposition groups also have to be taken into consideration.

Mr. SPEAKER.—Is it suggested that I must get the unanimous consent of the House?

Sri S. M. KRISHNA—As far as possible, the Chair will have to strive towards unanimity.

Mr. SPEAKER.—When did I differ? Did I put it only to one section of the House?

Sri S. M. KRISHNA.—According to the programme, we have to sit till 6 and after knowing the programme we have fixed certain engagements. I am sure the Chief Minister has an engagement at 6. He is to attend a very important committee. Some of us also might have prior commitments. Simply because somebody gets up at 4 today and says we will sit till 7, the House connot sit late. How does it fit in into the regular functioning of the deliberations of the House. Because it is convenient to the other side, we go on till 7. Whenever it is inconvenient

to them, we get up at 6. Yesterday, if the Chair had given me another 15 minutes, I would have finished But the Hon'ble Minister for Co-operation was restless in his seat. He said "No, we cannot sit till 6.30". Today we have the same values, the same considerations. I would suggest that even now the Leader of the Opposition might be called to reply to the debate at 6.

Sri RAMAKRISHNA HEGDE.—May I remind that this is a democratic set-up and things are decided by a majority.

Mr SPEAKER.—The Hon'ble Minister for Revenue may continue.

Sri S. SIVAPPA.—I request the Chair that I may be given a chance now because 6 O' clock is nearing

Mr. SPEAKER.—I will as certain the opinion of the House.

ಶ್ರೀ ಎಸ್. ಗೋಪಾಲಗೌಡ.—ನಾನು ಮಧ್ಯ ನಮ್ರತೆಯಿಂದ ವಿನಂತಿ ಮಾಡಿಕೊಂಡೆ. ಒಂದು ದಿವಸ ಎಕ್ಸ್‌ಟೆಂಡ್ ಮಾಡೋಣವೆಂದು ಕೇಳಿದ. ಆದರೆ ತಾವು ಭಾಷಣಗಳಿಗೆ ಸಮಯವನ್ನು ಕೊಡುವಾಗ ಬಹಳ ಸ್ಟ್ರಿಕ್ಟ್ಆಗಿದ್ದಿರಿ. ಶ್ರೀಮಾನ್ ಕೃಷ್ಣ ಅವರು ಮಾತನಾಡುವಾಗ ಒಂದು ನಿಮಿಷ ಕಾಲ ಹೆಚ್ಚು ಅವಕಾಶಕೊಡಲಿಲ್ಲ. ಈಗ ಒಂದು ರೀತಿಯಲ್ಲಿ ಎಲಾಸ್ಟಿಸಿಟಿ, ಭಯ, ಕರುಣೆ ತಮಗೆ ಬಂದರೆ ಅದು ಬಹಳ ಕಷ್ಟವಾಗುತ್ತದೆ.

Mr. SPEAKER.—The Hon'ble Member is making allegations.

ಶ್ರೀ ಎಸ್. ಗೋಪಾಲಗೌಡ.—ತಮ್ಮ ಮೇಲೆ ನಾವೇನೂ ಹೇಳುವುದಿಲ್ಲ. ತಮ್ಮ ಬಿವಾಯರ್ ನಮ್ಮ ಮೇಲೆ ತೋರಿಸಬೇಕಾಗಿತ್ತು.

Mr. SPEAKER.—Now if the Member does not understand what I am saying, then I cannot help it. He suggested at one particular time, that I was strict and at another time that I am relaxing. Let him not proceed further. I have tolerated to that extent.

Sri S. SIVAPPA.—He is referring to the treasury benches.

ಶ್ರೀ ಎಸ್. ಗೋಪಾಲಗೌಡ.—ನಾನು ಶ್ರೀಮಾನ್ ಶಿವಪ್ಪನವರನ್ನೂ ಸಹ ಕೇಳದೆ ಅವರು ಒಪ್ಪಿಕೊಂಡಿದ್ದಾರೆ. ತಾವು ಮೊದಲು ಈ ಸಮಯದ ಬಗ್ಗೆ ಏನು ತೀರ್ಮಾನ ಮಾಡಿದ್ದಿರೋ ಅದನ್ನು ತಾವು ಈಗ ಒಪ್ಪಿಕೊಳ್ಳಬೇಕು.

Sri C. J. MUCKANNAPPA.—The Chair has shown concessions to this side also sometimes. Let not the Speaker take it amiss.

Mr. SPEAKER.—I do not know how I can call upon Sri Sivappa to reply before the Debate is over? Are the previous proceedings to be ignored? I cannot do it.

Sri S. SIVAPPA.—It was done by mutual consultation. You were good enough to call me and the Chief Minister and the Chief Minister said he had urgent work at 6.

Mr. SPEAKER.—The Hon'ble Member may appeal to the House to revise that decision.

Sri S. SIVAPPA.—We appeal to you.

Mr. SPEAKER.—I will put the request to the House. What more can I do?

The Revenue Minister may continue.

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಏನು ಹೇಳುತ್ತಿದೇನೆಂದರೆ ಮಾನ್ಯ ವಿರೋಧಪಕ್ಷದ ಸದಸ್ಯರು ದೇಶದ ಆಹಾರ ಪರಿಸ್ಥಿತಿಯ ವಿಷಯವನ್ನು ಅರ್ಥಮಾಡಿಕೊಳ್ಳದೆ, ಸರಿಯಾಗಿ ತಿಳಿದುಕೊಳ್ಳದೆ, ಸರಕಾರದವರು ಅವ್ಯವಸ್ಥೆಮಾಡಿ ದೇಶವನ್ನು ಈ ಸ್ಥಿತಿಗೆ ತಂದಿದ್ದಾರೆಂದು ಪದೇ ಪದೇ ಹೇಳುತ್ತಿದ್ದಾರೆ. ಆದ್ದರಿಂದ ನಮ್ಮ ವಿರೋಧಪಕ್ಷದ ಮಾನ್ಯ ಸದಸ್ಯರು ಆಹಾರ ಪರಿಸ್ಥಿತಿಯ ವಿಷಯವಾಗಿ ಕೂಲಂಕಷವಾಗಿ ತಿಳಿದುಕೊಳ್ಳಬೇಕು. ಪ್ರಪಂಚದಲ್ಲಿ ಈ ವರ್ಷ ಆಹಾರ ಪರಿಸ್ಥಿತಿ ಬಹಳವಾಗಿ ಕೆಟ್ಟಿದೆ. ರಷ್ಯಾದೇಶವೇ ಅಮೆರಿಕಾ ದೇಶದಿಂದ ಇಂಡಿಯಾದೇಶ ಎರಡು ವರ್ಷಗಳಲ್ಲಿ

ಕೊಳ್ಳುವಷ್ಟು ಆಹಾರವನ್ನು ಈ ವರ್ಷ ಕೊಂಡುಕೊಳ್ಳಬೇಕಾಯಿತು. ಅದು ತಮಗೆ ಗೊತ್ತಿದೆ. ರಷ್ಯಾದೇಶದಲ್ಲಿಯೇ ಅಂಥ ಪರಿಸ್ಥಿತಿ ಬರಬೇಕಾದರೆ, ನೀವೆ ಯೋಚನೆ ಮಾಡಿ. ಚೀಣಾದೇಶ ಪರಿಸ್ಥಿತಿ ನನಗೆ ಗೊತ್ತಿದೆ. ಚೀಣಾದೇಶದಲ್ಲಿಯೂ ನಾನು ಓಡಾಡಿ ಬಂದವನು. ಸುಮಾರು 6-7 ವರ್ಷಗಳಿಂದಲೂ ಪ್ರಪಂಚದಲ್ಲಿ ಎಲ್ಲೆಲ್ಲ ಸರ್ಪ್ಲಸ್ ಬೆಳೆಯಾಗಿವೆ ಎಂಬುದನ್ನೆಲ್ಲಾ ಕೇಳುತ್ತಿದ್ದೇನೆ. ಅಂತಹ ರಾಷ್ಟ್ರಗಳು ಪ್ರಪಂಚದಲ್ಲಿ ನಾಲ್ಕು ಇವೆ. ಯಾವ ರಾಷ್ಟ್ರದಲ್ಲಿ ಆಹಾರ ಪರಿಸ್ಥಿತಿ ಕೆಟ್ಟಿರುತ್ತದೋ ಅಂತಹ ರಾಷ್ಟ್ರಗಳಿಗೆ ಸರ್ಪ್ಲಸ್ ಏರಿಯಾಗಳಿಂದ ಆಹಾರ ಪದಾರ್ಥಗಳನ್ನು ತರಿಸುತ್ತಿದ್ದೇವೆ. ಪ್ರಪಂಚದಲ್ಲಿ ಆಹಾರ ಪರಿಸ್ಥಿತಿ ವಿಷಯವಾಗಿ ಮಾತನಾಡುವಾಗ 4 ದೇಶಗಳ ಉದಾಹರಣೆಯನ್ನು ತೆಗೆದುಕೊಂಡು ಮಾತನಾಡುತ್ತಾರೆ. ಅವು ಯಾವುವೆಂದರೆ, ಚೈನಾ, ರಷ್ಯಾ, ಅಮೇರಿಕಾ ಮತ್ತು ಇಂಡಿಯಾ. ಜನಸಂಖ್ಯೆಯಲ್ಲಿ ಇವೇ ದೊಡ್ಡ ರಾಷ್ಟ್ರಗಳು. ಈ ರಾಷ್ಟ್ರಗಳ ಪೈಕಿ ಚೈನಾದಲ್ಲಿ ಜನಸಂಖ್ಯೆ ಜಾಸ್ತಿ ಇದೆ. ರಷ್ಯಾದೇಶದಲ್ಲಿ ನಮ್ಮಲ್ಲಿರುವ ಜನಸಂಖ್ಯೆಯ ಅರ್ಧದಷ್ಟು ಅಂದರೆ, 20 ಕೋಟಿಮೇಲೆ ಇದ್ದಾರೆ ಅಮೇರಿಕಾದಲ್ಲಿ 20 ಕೋಟಿಮೇಲೆಯೇ ಇದೆ. 46 ಕೋಟಿ ಜನಸಂಖ್ಯೆ ನಮ್ಮಲ್ಲಿದೆ. ಇಲ್ಲಿ ಒಂದು ವರ್ಷಕ್ಕೆ $1\frac{1}{4}$ ಕೋಟಿ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಚೈನಾದೇಶದಲ್ಲಿ 50-60 ಕೋಟಿ ಜನಸಂಖ್ಯೆ ಇದೆಯೆಂದು ಹೇಳುತ್ತಾರೆ. ಅಲ್ಲೇನೋ ಇನ್ನು ಸೆನ್ಸಸ್ ತೆಗೆದು ಕೊಂಡಿಲ್ಲ. ಇನ್ನು ಭೂಮಿ ಎಷ್ಟಿದೆ ಎಂಬುದನ್ನು ನೋಡುವುದಾದರೆ ರಷ್ಯಾ ದೇಶದಲ್ಲಿ ಒಬ್ಬ ಮನುಷ್ಯನಿಗೆ 6 ಎಕರೆ ಭೂಮಿ ಇದೆ.

Sri S. M. KRISHNA.—I rise to point of order. Yesterday, when I was making a reference to the Santhanam Committee's report, the Chair was pleased to observe that I should speak on the no-confidence motion. Now the Hon'ble Minister is going to China and from China we do not know where he will go. He speaks of Hawai, Phillipines and what not. Yesterday, the Hon'ble Minister said that a statement was contradictory and later on he said he would place a press cutting before the House. We do not know what has happened.

Sri M. V. KRISHNAPPA.—If the Hon'ble Member wants, I said I will place it. He did not ask for it.

Sri S. M. KRISHNA.—It would be better if the Hon'ble Minister sticks to our land instead of going to China.

ಶ್ರೀ ಎಂ. ವಿ. ಕೃಷ್ಣಪ್ಪ.—ಅಮೇರಿಕಾದಲ್ಲಿ ಒಬ್ಬ ಮನುಷ್ಯನಿಗೆ ಐದಾರು ಎಕರೆಗಳಷ್ಟು ಭೂಮಿ ಇದೆ. ನಮ್ಮ ಇಂಡಿಯಾ ದೇಶದಲ್ಲಿ 46 ಕೋಟಿ ಜನಸಂಖ್ಯೆ ಇದೆ. ಆದರೆ 36 ಕೋಟಿ ಎಕರೆ ಭೂಮಿ ಇದೆ. ಅಂದಮೇಲೆ ಒಬ್ಬ ಮನುಷ್ಯನಿಗೆ ಮುಕ್ಕಾಲು ಎಕರೆ ಭೂಮಿ ಇದೆಯೆಂದು ಹೇಳಬಹುದು. ಆದ್ದರಿಂದ ಬೇರೆ ದೇಶಗಳಿಗೆ ಈಗ ಹೋಲಿಸಿ ನೋಡಿದರೆ ಇಂಡಿಯಾ ದೇಶದಲ್ಲಿರುವ ಭೂಮಿ ಬಹಳ ಕಡಿಮೆ.

Mr SPEAKER.—I wish to make it clear that at 6.45 P. M. the reply will conclude.

6-00 P.M.

ಶ್ರೀ ಎಂ. ವಿ. ಕೃಷ್ಣಪ್ಪ.—ಇಂಡಿಯಾ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಪರಿಸ್ಥಿತಿ ಹೇಗಿತ್ತು ಎಂದರೆ, ಬಂಗಾಳದಲ್ಲಿ ಕ್ಷಾಮ ಇತ್ತು. ಆಗ ಸುಮಾರು 40 ಲಕ್ಷ ಜನಗಳಿಗೆ ಹೊಟ್ಟೆಗೆ ಅನ್ನವಿಲ್ಲದೆ ಬಹಳ ಕಷ್ಟಪಡುತ್ತಿದ್ದರು. ಆಗ ಎಷ್ಟೋ ಜನ ಭಿಕಾರಿಗಳಾಗಿ ಕಲ್ಕತ್ತಾ ನಗರದಲ್ಲಿ ಉಪವಾಸದಿಂದ ಸತ್ತರು ಇಂಥಾ ಒಂದು ಸಮಯದಲ್ಲಿ ಇಂಗ್ಲೀಷಿನವರು ನಮ್ಮ ರಾಷ್ಟ್ರವನ್ನು ನಮಗೆ ಬಿಟ್ಟುಕೊಟ್ಟು ಹೋದರು. ಆಗ ನಮ್ಮ ದೇಶ ವಿಭಾಗವಾದದ್ದರಿಂದ ಬಹಳ ಫಲವತ್ತಾದ ಭೂಮಿ ಮತ್ತು ಕೆಲವು ಒಳ್ಳೆಯ ಕಾಲುವೆಗಳು ಪಾಕೀಸ್ತಾನಕ್ಕೆ ಹೋದುವು. ಫಲವತ್ತಾದ ಭೂಮಿ ನಮಗೆ ಕಡಿಮೆ ಬಂತು. ಈ ರೀತಿಯಾಗಿ ಆಗ ದೇಶಕ್ಕೆ ವಿಪರೀತ ಕಷ್ಟ ಬಂದಿದ್ದರೂ ಕೂಡ ಆ ಕಷ್ಟವನ್ನು ಅನುಭವಿಸಿಕೊಂಡು, ಪರಿಸ್ಥಿತಿಯನ್ನು ಸುಧಾರಿಸಿಕೊಂಡು ಬಂದೆವು. 1952ನೆ ಇಸವಿಯಲ್ಲಿ ಕೇಂದ್ರ ಸರ್ಕಾರದಲ್ಲಿ

ನಾನು ಆಹಾರ ಖಾತೆಯಲ್ಲಿ ಮಂತ್ರಿಯಾಗಿದ್ದೆ. ಆಗಿನಿಂದಲೂ ಕೂಡ ಕಂಟ್ರೋಲುಗಳನ್ನು ಒಂದೊಂದಾಗಿ ತೆಗೆದು ಪರಿಸ್ಥಿತಿಯನ್ನು ಸುಧಾರಿಸಿಕೊಂಡು ಬಂದೆವು. ಇಲ್ಲಿಯವರೆಗೂ ಕೂಡ ದೇಶದಲ್ಲಿ ಅಷ್ಟೊಂದು ಅಭಾವವಿಲ್ಲ ಎನ್ನುವಷ್ಟು ಪರಿಸ್ಥಿತಿಗೆ ತಂದು, ದೇಶದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ನಮ್ಮ ದೇಶದಲ್ಲಿ ಇನ್ನೂ ಎಷ್ಟೋ ಅಭಿವೃದ್ಧಿ ಕಾರ್ಯಗಳು ಆಗಬೇಕು. ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚು ಕಾರ್ಖಾನೆಗಳು ಆಗಬೇಕು. ಆ ಕಾರ್ಖಾನೆಗಳಲ್ಲಿ ಮಕ್ಕಳಿಗೆ ಕೆಲಸ ಸಿಕ್ಕಬೇಕು. ಅದೆಲ್ಲವನ್ನೂ ಮಾಡಿ ಹೆಚ್ಚು ಉತ್ಪಾದನೆಯನ್ನು ಮಾಡಿದರೆ ನಮ್ಮ ಜನಗಳ ಜೀವನದ ಮಟ್ಟ ಏರುತ್ತದೆ. ನಮ್ಮ ದೇಶದಲ್ಲಿ ಸಿಮೆಂಟ್ ಫ್ಯಾಕ್ಟರಿ, ಸ್ಟೀಲ್ ಫ್ಯಾಕ್ಟರಿ, ಕಬ್ಬಿಣದ ಫ್ಯಾಕ್ಟರಿ ಎಲೆಕ್ಟ್ರಿಕ್ ಪ್ರಾಜೆಕ್ಟ್ ಇವುಗಳೆಲ್ಲಾ ಆಗಬೇಕು. ಇದಕ್ಕೆಲ್ಲಾ ನಮಗೆ ಮೆಷನರಿ ಬೇಕಾಗುತ್ತದೆ. ಅದಕ್ಕೋಸ್ಕರ ನಮ್ಮ ಇಂಡಿಯಾದೇಶ ಫಾರಿನ್ ಎಕ್ಸ್‌ಚೇಂಜ್ ಅರ್ನ್ ಮಾಡಿಕೊಳ್ಳಬೇಕು. ಈಗ ನಮ್ಮ ಹಿಂದೂಸ್ಥಾನದಲ್ಲಿ ಒಂದು ವರ್ಷಕ್ಕೆ 850ಕೋಟಿ ರೂಪಾಯಿಗಳ ಫಾರಿನ್ ಎಕ್ಸ್‌ಚೇಂಜ್ ಸಂಪಾದನೆ ಮಾಡುತ್ತಿದ್ದೇವೆ. ಸುಮಾರು 650 ಕೋಟಿ ರೂಪಾಯಿಗಳನ್ನು ಅಗ್ರಿಕಲ್ಚರಲ್ ಪ್ರಾಡಕ್ಟ್‌ನಿಂದ ಸಣಬಿನಿಂದ 150 ಕೋಟಿ ರೂಪಾಯಿಗಳನ್ನು ಫಾರಿನ್ ಎಕ್ಸ್‌ಚೇಂಜ್ ಸಂಪಾದನೆ ಮಾಡುತ್ತಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, 6 ಗಂಟೆಗೆ ಈ ಸಭೆಯನ್ನು ಮುಕ್ತಾಯ ಮಾಡಬೇಕೆಂದು ನಾನು ಕೇಳಿಕೊಂಡಿದ್ದೆ ಆದರೂ ಈ ಸಭೆಯನ್ನು ಇನ್ನೂ ನಡೆಸುತ್ತಲೇ ಇದ್ದೀರಿ. ಆದ್ದರಿಂದ ನಾನು ಈ ಸಭೆಯಿಂದ ಹೊರಗೆ ಹೋಗುತ್ತೇನೆ.

(ಸಭೆಯಿಂದ ಹೊರಕ್ಕೆ ಹೋದರು)

ಶ್ರೀ ಎಂ. ವಿ. ಕೃಷ್ಣಪ್ಪ.—ಇನ್ನು ಎರಡನೆಯದಾಗಿ ನಾವು 3ಕೋಟಿ ರೂಪಾಯಿಗಳ ಪ್ಲಾಂಟೇಷನ್ ಕ್ರಾಪ್ಸ್‌ನ್ನು ಪಾಶ್ಚಾತ್ಯದೇಶಗಳಿಗೆ ಕಳುಹಿಸುತ್ತಿದ್ದೇವೆ.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ನಮ್ಮ ಒಪ್ಪಂದದ ಪ್ರಕಾರ ಈ ದಿವಸ ಸಭೆಯನ್ನು 6 ಗಂಟೆಗೆ ಬರಖಾಸ್ತು ಮಾಡಬೇಕು, ಈ ಚರ್ಚೆಗೆ ಉತ್ತರ ಕೊಡುವುದಕ್ಕೆ ನನಗೆ ಅವಕಾಶ ಕೊಡಲು ಯಾವ ಟೈಮನ್ನು ನಿಗದಿ ಮಾಡಿತ್ತೋ ಆ ಟೈಮಿಗೆ ಸರಿಯಾಗಿ ನನಗೆ ಮಾತನಾಡಲು ಅವಕಾಶ ಕೊಡುವುದನ್ನು ತಪ್ಪಿಸಿದ್ದಾರೆ. ಆಡಳಿತ ಪಕ್ಷದವರು ಈ ಸಭೆಯು 6 ಗಂಟೆಯ ಮೇಲೂ ಕುಳಿತುಕೊಳ್ಳಬೇಕು ಎನ್ನತಕ್ಕಂಥ ಬಹುಮತದ ನಿರ್ಧಾರವನ್ನು ನಮ್ಮ ಮೇಲೆ ಹೇರತಕ್ಕದ್ದು ಈ ಸಭೆಯ ನಡವಳಿಕೆಗೆ ವಿರೋಧವಾಗಿದೆ.

Mr. SPEAKER.—Is the member protesting against any ruling of the Chair ?

Sri S. SIVAPPA.—I am protesting against the reckless generosity shown towards them, ignoring the procedure of the House. I have to protest because the time is over.

Sri M V KRISHNAPPA—Without understanding the position they say that we have spoiled the fool situation. They should understand the background. I will explain how it has affected.

Sri V. S. PATIL.—The Hon'ble Minister said that in our country the percentage of acreage to the population is about 4/4 per acre. May I know what is the percentage in Japan and the cultivated area and their population and why they are not having this difficulty.

Sri M. V. KRISHNAPPA.—If you want I am prepared to speak about Japan.

ಇನ್ನು ಮಾನ್ಯ ಸದಸ್ಯರು ಕೆಲವರು ಮೈಸೂರು ಸಂಸ್ಥಾನದಲ್ಲಿ ಅವಶ್ಯಕವಾದ ಆಹಾರ ಪದಾರ್ಥಗಳ ಬೆಲೆಗಳು ಏರುತ್ತಿವೆ ಎಂದು ಹೇಳಿದರು. ಆ ಬೆಲೆಗಳನ್ನು ಬೇಕಾದರೆ ಇಳಿಸಬಹುದು. ಅದನ್ನು ಇಳಿಸತಕ್ಕಂಥ ಶಕ್ತಿ ಸರ್ಕಾರಕ್ಕೆ ಇದೆ. ಈಗ ನಾವು ಹೊರಗಡೆ ಕಳಿಹಿಸತಕ್ಕಂಥ ಸಕ್ಕರೆ, ಬೆಲ್ಲ ಇವುಗಳನ್ನು ಕಳುಹಿಸುವುದನ್ನು ನಿಲ್ಲಿಸಿದರೆ ಅವುಗಳ ಬೆಲೆ ಇಳಿದು ಬಿಡುತ್ತವೆ. ನಮಗೇನೂ ತೊಂದರೆ ಇಲ್ಲ. ಜೂಟ್, ಆಯಿಲ್ ಸೀಡ್ಸ್ ಇವುಗಳನ್ನು ಪರದೇಶಕ್ಕೆ ಎಕ್ಸ್‌ಪೋರ್ಟ್ ಮಾಡುವುದನ್ನು ನಿಲ್ಲಿಸುವುದಾದರೆ ಶೇಂಗಾ, ಜೋಳ, ಅಕ್ಕಿ ಇವುಗಳನ್ನು ಬೆಳೆದು ನಮ್ಮ ದೇಶಕ್ಕೆಲ್ಲಾ ಆಹಾರವನ್ನು ಕೊಡುವ ಶಕ್ತಿ ನಮಗೆ ಇದೆ. ಆದರೆ ಹೊರಗಡೆ ನಾವು ಕಳುಹಿಸತಕ್ಕ

--

(SRI M. V. KRISHNAPPA)

ಪದಾರ್ಥಗಳನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ನಾವು ನಮ್ಮ ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದ ಈಗ ಸ್ವಲ್ಪ ಹೆಚ್ಚು ಬೆಲೆಗಳನ್ನು ಕೊಡುವುದಕ್ಕೆ ಸಿದ್ಧರಾಗಬೇಕು. ನಮ್ಮ ದೇಶದಲ್ಲಿ ಬೆಳೆಯತಕ್ಕಂಥ ಕೆಲವು ಪಧಾರ್ಥಗಳನ್ನು ಪರದೇಶಕ್ಕೆ ಕಳುಹಿಸಿ ನಾವು ವಿದೇಶ ವಿನಿಮಯವನ್ನು ಸಂಪಾದನೆ ಮಾಡಿಕೊಳ್ಳಬೇಕು. ನಮ್ಮ ಕೈಗಾರಿಕೆಯನ್ನು ಬೆಳಸಬೇಕು. ಅಕ್ಕಿ ಬೇಳೆ, ಗೋಧಿ, ಮೆಣಸಿನಕಾಯಿ ಮುಂತಾದ ಆಹಾರ ಪದಾರ್ಥಗಳ ಬೆಲೆಯನ್ನು ಕಡಿಮೆ ಮಾಡುವುದಕ್ಕೆ ನಮಗೆ ಶಕ್ತಿ ಇದೆ. ಆದರೆ ಆ ರೀತಿ ಮಾಡುವುದಾದರೆ, ನಮ್ಮಲ್ಲಿ ಬೆಳೆಯತಕ್ಕಂಥ ಕೆಲವು ಪದಾರ್ಥಗಳನ್ನು ಹೊರಗಡೆ ಕಳುಹಿಸಿ ನಾವು ವಿದೇಶಿ ವಿನಿಮಯವನ್ನು ಸಂಪಾದನೆ ಮಾಡಿಕೊಳ್ಳದೆ ಹೋದರೆ ನಮ್ಮ ಮುಂದಿನ ಪೀಳಿಗೆಯು ಉಪವಾಸ ಇರಬೇಕಾಗುತ್ತದೆ. ಈ ದೃಷ್ಟಿಯಿಂದ ಏರುತ್ತಾ ಇರುವ ಪದಾರ್ಥಗಳ ಬೆಲೆಯನ್ನು ಇಳಿಸಬೇಕಾದ್ದು ನ್ಯಾಯವಾದರೂ ಕೂಡ ಅದರಲ್ಲಿರುವ ಕಷ್ಟಗಳನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬೇಕಾಗಿದೆ. ನಮ್ಮ ಮೈಸೂರು ದೇಶವೇಕೆ ಇಡೀ ಇಂಡಿಯಾ ದೇಶದಲ್ಲೇ ಆಹಾರದ ಅಭಾವ ಬಂದಿದೆ. ಕಳೆದ ಬೇಸಿಗೆಯಲ್ಲಿ ಉತ್ತರ ದೇಶದಲ್ಲಿ ಬೆಳೆ ಕೆಟ್ಟುಹೋಯಿತು. ಮೇ ತಿಂಗಳಿನಲ್ಲಿ ಮಹಾರಾಷ್ಟ್ರದಲ್ಲಿ ಶ್ರೀಮಾನ್ ಗಾಡ್‌ಗಿಲ್ ಅವರು ಭಾಷಣ ಮಾಡಿದರು. ಮಹಾರಾಷ್ಟ್ರದ ವಿಷಯವನ್ನು ನಾನು ಬೇರೆದೃಷ್ಟಿಯಿಂದ ಮಾತನಾಡುವುದಿಲ್ಲ. ಹಿಂದೂಸ್ಥಾನ ಎಂದರೆ ಎಲ್ಲಾ ಒಂದೇ; ಮಹಾರಾಷ್ಟ್ರದವರು ಮತ್ತು ನಾವು ಅಣ್ಣತಮ್ಮಂದಿರು. ನಮ್ಮ ರಾಜ್ಯಕ್ಕೆ ಉತ್ತರದಲ್ಲಿರುವ ಮಹಾರಾಷ್ಟ್ರ, ದಕ್ಷಿಣಕ್ಕಿರುವ ಕೇರಳ, ಎರಡೂ, ಡಿಫಿಸಿಟ್ ಸ್ಟೇಟುಗಳು. ಕೇರಳದ ಡಿಫಿಸಿಟ್ ಒಂದು ಮಿಲಿಯನ್ ಟನ್, ಮಹಾರಾಷ್ಟ್ರದ್ದು ಡಿಫಿಸಿಟ್ 1½ ಮಿಲಿಯನ್ ಟನ್ ಇದೆ, ಅಂದರೆ ಇವೆರಡು ರಾಜ್ಯಗಳ ಒಟ್ಟು ಕೊರತೆ 2½ ಮಿಲಿಯನ್ ಟನ್ ಇದೆ. ಈ ಎರಡೂ ಡಿಫಿಸಿಟ್ ರಾಜ್ಯಗಳ ಮಧ್ಯೆ ಮೈಸೂರು ರಾಜ್ಯ ಸ್ಯಾಂಡ್‌ವಿಚ್ ಆಗಿದೆ. ಆದ್ದರಿಂದ ನಾವು ಏನು ಪ್ರೊಕ್ಯೂರ್‌ಮೆಂಟ್ ಕ್ರಮಗಳನ್ನು ನಮ್ಮ ರಾಜ್ಯದಲ್ಲಿ ತೆಗೆದುಕೊಂಡರೂ, ಫಲಪ್ರದವಾಗದೆ, ಆಹಾರದ ಕೊಂದರೆ ಇದೆ. ಇಂಥ ಒಂದು ಪರಿಸ್ಥಿತಿಯಲ್ಲಿ ನಾವು ಇರುವಾಗ, ಮೇ ತಿಂಗಳಿನಲ್ಲಿ ಶ್ರೀ ಗಾಡ್‌ಗಿಲ್ ರವರು ಮಹಾರಾಷ್ಟ್ರದಲ್ಲಿ ಫ್ಯಾಮಿನ್ ಬರುತ್ತದೆಂದು ಸ್ಟೇಟ್‌ಮೆಂಟ್ ಕೊಟ್ಟರು. ಇದರ ಪರಿಣಾಮವಾಗಿ ನಮ್ಮ ರಾಜ್ಯದ ಜೋಳ, ಮಹಾರಾಷ್ಟ್ರಕ್ಕೆ ಹೊರಟು ಹೋಯಿತು. ಏಕೆಂದರೆ, ಮಹಾರಾಷ್ಟ್ರ ಡಿಫಿಸಿಟ್ ಏರಿಯಾ We better off than Maharashtra the very fact that there was smuggling of food from our State to the neighbouring State shows that things are worse there when compared to Mysore ಕೇರಳದಲ್ಲೂ ಯಾವಾಗ ಅಕ್ಕಿಗೆ ಅಭಾವ ಪ್ರಾರಂಭವಾಯಿತೋ ಆಗ ಮೈಸೂರಿನಿಂದ, ಬೆಂಗಳೂರಿನಿಂದ, ಮಂಡ್ಯದಿಂದ ಅಕ್ಕಿ ಕೇರಳವಾಗಿ ಕೇರಳಕ್ಕೆ ಹೋಯಿತು. ಹೀಗೆ ಎರಡು ಡಿಫಿಸಿಟ್ ಸ್ಟೇಟುಗಳ ಮಧ್ಯೆ ಸಿಕ್ಕಿ ಹಾಕಿಕೊಂಡು, ಇಂಥ ಪರಿಸ್ಥಿತಿಯಲ್ಲಿ ಜೂನ್-ಜುಲೈ ತಿಂಗಳಿನಲ್ಲಿ ಇದ್ದೆವು. ಈ ಅವಧಿಯಲ್ಲಿ ಹಿಂದೂಸ್ತಾನದಲ್ಲಿ ಎಲ್ಲ ಕಡೆಯೂ ಆಹಾರ ಅಭಾವ ಪ್ರಾರಂಭವಾಯಿತು. ಈ ಫುಡ್ ಕ್ರೈಸಿಸ್ ಮೈಸೂರಿಗೆ ವೈಶಿಷ್ಟ್ಯವಲ್ಲ. ಇಂಥ ಪರಿಸ್ಥಿತಿಯಲ್ಲಿ ಮೈಸೂರು ರಾಜ್ಯದಲ್ಲಿ ಧಾನ್ಯದ ಕೊರತೆ ನೀಗಲು ನಾವು ಸರ್ವ ಪ್ರಯತ್ನ ಮಾಡಿದ್ದೇವೆ; ಇದಕ್ಕೆ ದೇವರೇ ಸಾಕ್ಷಿ. ನನ ಈ 13 ವರ್ಷದ ಅನುಭವದಲ್ಲಿ, ಈಗಿನ ಆಹಾರದ ಕ್ಲಿಷ್ಟ ಪರಿಸ್ಥಿತಿಯಲ್ಲಿ ರಾತ್ರಿ ಹಗಲು ದುಡಿದಷ್ಟು ಯಾವಾಗಲೂ ನಾನು ದುಡಿಯಲಿಲ್ಲ. 13 ದಿನಗಳು ಒಂದೇ ಸಮನೆ ನಿದ್ರೆ ಮಾಡಲಿಲ್ಲ. ಈ ಪರಿಸ್ಥಿತಿಯಲ್ಲಿ ಆತ್ಮ ಸಾಕ್ಷಿಯಾಗಿ ಕೆಲಸ ಮಾಡಿದ್ದೇವೆ; ನಾವು ಅಪರಾಧ ಮಾಡಿಲ್ಲ. ಆಹಾರ ಪರಿಸ್ಥಿತಿ ಈ ವರ್ಷ ಇಂಡಿಯಾ ದೇಶದಲ್ಲಿ ಎಲ್ಲ ಕಡೆಯೂ ಕೆಟ್ಟು ಹೋಯಿತು. ನಮಗೆ ಆಂಧ್ರದಿಂದ ಒಂದು ದಿನಕ್ಕೆ ಸುಮಾರು 10 ಸಾವಿರ ಪಲ್ಲ ಅಕ್ಕಿ ಬರುತ್ತಿತ್ತು; ಬೆಂಗಳೂರು ಒಂದು ಊರಿಗೇ ಆರು ಸಾವಿರ ಪಲ್ಲ ಅಕ್ಕಿ ಬರುತ್ತಿತ್ತು; ಆಂಧ್ರದಿಂದ ಬರುತ್ತಿದ್ದ ಈ ಅಕ್ಕಿ ನಿಂತು ಹೋಯಿತು. ಏಕೆಂದರೆ, ಸೆಪ್ಟೆಂಬರ್-ಅಕ್ಟೋಬರ್ ತಿಂಗಳಿನಲ್ಲಿ ಆಂಧ್ರದಲ್ಲಿ ಪ್ರವಾಹ ಬಂದು ಮಾಚೆರ್ಲ ದೊಡ್ಡ ನಗರ ಕೊಚ್ಚಿಕೊಂಡು ಹೋಯಿತು. ಆದ್ದರಿಂದ ಆಂಧ್ರ ದೇಶದವರು ಹೊರಕ್ಕೆ ಅಕ್ಕಿ ಕಳುಹಿಸಿದರೆ ತಮಗೇ ಎಲ್ಲಿ ತೊಂದರೆಯಾಗುತ್ತದೋ ಎಂದು ಭಯಪಟ್ಟರು; ಇಂಟರ್ ಸ್ಟೇಟ್ ಮೂವ್‌ಮೆಂಟ್ ಬಂದ್ ಮಾಡಿದರು. ಕೇಂದ್ರ ಸರ್ಕಾರದಲ್ಲಿಯೂ ದಾಸ್ತಾನು ಇರಲಿಲ್ಲ. ನಮ್ಮಲ್ಲಿ ಕಂಟ್ರೋಲ್ಸ್ ಇಲ್ಲದ್ದರಿಂದ, ಪ್ರೊಕ್ಯೂರ್‌ಮೆಂಟ್ ಮಾಡಿರಲಿಲ್ಲ. ಕಂಟ್ರೋಲ್ ಇಲ್ಲದೆ ನಡೆಸಿಕೊಂಡು ಬರಬೇಕೆಂಬ ನೀತಿ ಇಟ್ಟುಕೊಂಡು, ಸರ್ಕಾರ ಅದೇ ರೀತಿ ನಡೆದುಕೊಂಡು ಬರುತ್ತಾ ಇದೆ. ಆಂಧ್ರದಿಂದ ಅಕ್ಕಿ ಬರುವುದು ನಿಂತು ಹೋದ ಮೇಲೆ, ನಮ್ಮ ಕಷ್ಟ ಪ್ರಾರಂಭವಾಯಿತು. ಕೇಂದ್ರ ಸರ್ಕಾರವನ್ನು ಜೂನ್-ಜುಲೈ ತಿಂಗಳಲ್ಲಿ ಕೇಳಿದೆವು ಅವರಲ್ಲಿ ಇಂಪೋರ್ಟ್ ಪ್ರೋಗ್ರಾಂ ಹೆಚ್ಚಾಗಿರಲಿಲ್ಲ; ಅವರಿಗೆ ಬರುವವರೆಗೂ ಹೆಚ್ಚಾಗಿ ಕೊಡುವುದಕ್ಕಾಗುವು

ದಿಲ್ಲವೆಂದು ಅವರು ಹೇಳಿದರು. ಏಕನ್ಮಧ್ಯೆ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್ ತಿಂಗಳುಗಳಲ್ಲಿ ಕೇಂದ್ರ ಸರ್ಕಾರದವರು 6 ಸಾವಿರ ಟನ್ ಕೊಟ್ಟರು: ನಾವೂ, ಮುಖ್ಯ ಮಂತ್ರಿಗಳೂ 50 ಸಾವಿರ ಟನ್ 5 ತಿಂಗಳಿಗೆ ಕೇಳಿದ್ದೆವು, ಅದು in addition to the free flow of Andhra rice. ಕೇಂದ್ರದವರು 25 ಸಾವಿರ ಟನ್ ಕೊಡುತ್ತೇವೆಂದು ಹೇಳಿದರು; ಏಕೆಂದರೆ ಕೇಂದ್ರ ಸರ್ಕಾರದಲ್ಲಿ ಆವಾಗ ಅಕ್ಕಿ ಹೆಚ್ಚಾಗಿರಲಿಲ್ಲ, ದೇಶದಲ್ಲೆಲ್ಲಾ ಅಭಾವವಿತ್ತು, ಮದ್ರಾಸಿನಲ್ಲಿ, ಕೇರಳದಲ್ಲಿ, ಮಹಾರಾಷ್ಟ್ರದಲ್ಲಿ, ಎಲ್ಲಾ ಭಾಗಗಳಲ್ಲಿಯೂ ಅಭಾವವಿತ್ತು. ಕೇಂದ್ರ ಸರ್ಕಾರಕ್ಕೆ ಹೋಗಿ ಪದೇ ಪದೇ ಬೇಡಿದ್ದರಿಂದ, ತಿಂಗಳಿಗೆ 10 ಸಾವಿರ ಟನ್ ಗೋಧಿ ಕೊಡವುದಕ್ಕೆ ಒಪ್ಪಿದರು.

ಕೇಂದ್ರ ಸರ್ಕಾರದವರಿಗೂ ಕೂಡ ಎಲ್ಲ ಕಡೆಗಳಿಂದ ಬೇಡಿಕೆ ಬಂದಿತ್ತು; ಎಲ್ಲರಿಗೂ ಸಾಕಷ್ಟು ಸಪ್ಲೈ ಮಾಡುವಷ್ಟು ಅವರ ಹತ್ತಿರ ಸ್ಟಾಕ್ ಇರಲಿಲ್ಲ. ಇದರ ಜೊತೆಗೆ ಇಲ್ಲಿ ಬೇರೆ ಗಾಬರಿ ಷುರುವಾಯಿತು. ಮೈಸೂರಿನಲ್ಲಿ ಅಲ್ಲಲ್ಲೇ ಜನಗಳು ಬಚ್ಚಿಡುವುದಕ್ಕೆ ಷುರುಮಾಡಿದರು. ಅದಕ್ಕೆ ಕಾರಣ ಗವರ್ನರ್ ಅಡ್ರೆಸ್ ಮೇಲೆ ಭಾಷಣ ಮಾಡುವಾಗ ಹೇಳುತ್ತೇನೆ, ಗಾಬರಿ ಯಾರ್ಯಾರು ಹುಟ್ಟಿಸಿದರು ಎಂಬ ಬಗ್ಗೆ ಆಗ ವಿವರಗಳನ್ನು ಕೊಡುತ್ತೇನೆ. ಆಂಧ್ರದಿಂದ ಅಕ್ಕಿ ಬರುವುದು ನಿಂತು ಹೋದಾಗ, ಹೊರಗಡೆಯಿಂದ ಆಹಾರ ಧಾನ್ಯ ಸಾಗಿಸುವುದಕ್ಕೆ ರೈಲ್ವೆ ಕೆಪಾಸಿಟಿ ಬೇರೆ ಇರಲಿಲ್ಲ; ಬೇರೆ ಬೇರೆ ಸಾಮಾನುಗಳನ್ನು ಸಾಗಿಸಲೂ ಬೇಕಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ, ಸಾಧ್ಯವಾದಷ್ಟು ಕಷ್ಟಪಟ್ಟು, ಮುಖ್ಯಮಂತ್ರಿಗಳೂ, ಸಂಬಂಧಪಟ್ಟವರೂ ರಾಜ್ಯದಲ್ಲಿ ಧಾನ್ಯದ ಕೊರತೆ ನೀಗಲು ಸರ್ವ ಪ್ರಯತ್ನ ಮಾಡಿದ್ದಾರೆ. ಅಂಥದರಲ್ಲಿ ನಮ್ಮ ಮಿತ್ರರು ಕೇಳಿದರು. ಮುಖ್ಯಮಂತ್ರಿಗಳು ದೆಹಲಿಗೆ ಹೋದರು, ಬಂದರು, ಏನು ಮಾಡಿದರು ಎಂದು. ನಮ್ಮ ಮುಖ್ಯಮಂತ್ರಿಗಳು ಅಗಾಧ ಪ್ರಯತ್ನ ಮಾಡದಿದ್ದರೆ, ಇವತ್ತು ಅನೇಕ ಜನ ಬದುಕಿರುತ್ತಿರಲಿಲ್ಲವೆಂದು ಖಡಾ ಖಂಡಿತವಾಗಿ ಹೇಳುತ್ತೇನೆ. ಅವರ ಪ್ರಯತ್ನದಿಂದ, ಇವತ್ತಿನವರೆಗೆ ರಾಜ್ಯಕ್ಕೆ 10 ಲಕ್ಷ ಕ್ವಿಂಟಾಲ್ ಗೋಧಿ ಬಂದಿದೆ, ಸುಮಾರು 4-5 ಲಕ್ಷ ಕ್ವಿಂಟಲ್ ಅಕ್ಕಿ ಬಂದಿದೆ. ಬೆಂಗಳೂರಿನಲ್ಲಿ ಮೂರು ಲಕ್ಷ ಸಂಸಾರಗಳಿಗೆ ಒಂದು ತಿಂಗಳಿಗೆ ಒಂದು ಸಂಸಾರಕ್ಕೆ 32 ಕಿಲೋ ಧಾನ್ಯ ಕೊಡಬೇಕಾದರೆ ಎಷ್ಟು ಕಷ್ಟವಾಯಿತು ಎಂದು ನೀವೇ ಊಹಿಸಬೇಕು. ಅದು ಅಷ್ಟು ಸುಲಭವಾದ ಕೆಲಸವಲ್ಲ; ಆದರೂ ನಿರ್ವಹಿಸಿಕೊಂಡು ಬಂದೆವು. ಒಳ್ಳೆಯ ಅಕ್ಕಿಯೂ ಬಂದಿದೆ, ಸ್ವಲ್ಪ ಕೆಟ್ಟ ಅಕ್ಕಿಯೂ ಬಂದಿದೆ. ನಮ್ಮಲ್ಲಿ ಅಕ್ಕಿಯೇ ಇಲ್ಲದಿದ್ದಾಗ, ಅಕ್ಕಿ ಕ್ವಾಲಿಟಿ ನೋಡುವ ಹಾಗಿರಲಿಲ್ಲ, ಸಿಕ್ಕ ಗೋಧಿ ಅಕ್ಕಿಯನ್ನು ಎಲ್ಲಾ ಕಷ್ಟಪಟ್ಟು ತಂದಿದ್ದೇವೆ. ತಂದು ಅದನ್ನು ಜಿಲ್ಲಾಧಿಕಾರಿಗಳಿಗೆ ಅಲಾಟ್ ಮಾಡುತ್ತೇವೆ. ಆ ಆಹಾರ ಧಾನ್ಯದಿಂದ ಮಂತ್ರಿಗಳು ಫಾಯಿದೆ ಮಾಡಿಕೊಂಡಿದ್ದಾರೆ ಎಂದು ಹೇಳುವುದು ಸುಳ್ಳು ಅಪವಾದನೆ. ನಾವು ಯಾವಾಗಲೂ ಬರುವ ಆ ಧಾನ್ಯವನ್ನು ಮುಟ್ಟುವುದಿಲ್ಲ. 10 ಸಾವಿರ ಟನ್ ಅಲಾಟ್ ಮಾಡಿದರೆ, ಅದನ್ನು ಹಾಗಾನೇ ಡಿಸ್ಟ್ರಿಕ್ಟುಗಳಿಗೆ ಅಲಾಟ್ ಮಾಡುತ್ತೇವೆ. ಅದು ಆಯಾ ಡಿಸ್ಟ್ರಿಕ್ಟಿಗೆ ನೇರವಾಗಿ ಸೇರಿ ಹೋಗುತ್ತದೆ, ನಾವು ಅದಕ್ಕೆ ಕೈಹಾಕುವುದೇ ಇಲ್ಲ. ಕೆಲವು ಸದಸ್ಯರು ತಿಳಿದುಕೊಂಡಿರುವುದು ಶುದ್ಧ ಸುಳ್ಳು. ಆ ತರಹ ಏನೂ ಆಗಲಿಲ್ಲ. ಫುಡ್ ಪ್ರಕ್ಯೂರ್‌ಮೆಂಟ್ ವಿಷಯ ಹೇಳಿದ್ದಾರೆ. ಆಂಧ್ರ ಸರ್ಕಾರ ನಮಗೆ 16 ಸಾವಿರ ಟನ್ ಅಕ್ಕಿ ಕೊಟ್ಟಿಲ್ಲ, ನಾಲ್ಕು ಸಾವಿರ ಟನ್ ಅಕ್ಕಿ ಕೊಡಲಿಲ್ಲ. ನಮ್ಮ ಮುಖ್ಯಮಂತ್ರಿಗಳು ಶ್ರೀ ಬ್ರಹ್ಮಾನಂದರೆಡ್ಡಿಯವರನ್ನು ಕೇಳಿದ್ದರ ಮೇಲೆ, ನವೆಂಬರಿನಲ್ಲಿ ಕೊಟ್ಟರು ಆದರ ಮೇಲೆ ಅಲ್ಲಿಂದ ತರಿಸುವುದಕ್ಕೆ ಸೊಸೈಟಿಗಳವರನ್ನೂ, ವರ್ತಕರನ್ನೂ ಕಳುಹಿಸಿದೆವು; ಅವರಿಗೆ ತರುವುದಕ್ಕೆ ಆಗಲಿಲ್ಲ. ಸಾಧ್ಯವಾದಷ್ಟು ಕಷ್ಟಪಟ್ಟು ಪರಿಸ್ಥಿತಿಯನ್ನು ಸುಧಾರಿಸಿ ಈಗಿನ ಘಟ್ಟಕ್ಕೆ ತಂದಿದ್ದೇವೆ. ಅಭಾವದಿಂದ, ಉಪವಾಸದಿಂದ ಯಾರೂ ಏನೂ ಸತ್ತಿಲ್ಲ. ಬೇಕಾದಷ್ಟು ಕೂಗಾಡಿದ್ದಾರೆ, ಭಾಷಣಗಳನ್ನು ಮಾಡಿದ್ದಾರೆ, ಪೇಪರುಗಳಲ್ಲಿ ಹಾಕಿದ್ದಾರೆ. ಇನ್ನು ಆಹಾರ ಅಭಾವವಿರುವುದಿಲ್ಲವೆಂದು ಧೈರ್ಯವಾಗಿ ಹೇಳುತ್ತೇನೆ. ಎಷ್ಟೇ ಕಷ್ಟ ಬಂದಿದ್ದರೂ, ಒಬ್ಬನಾದರೂ ಉಪವಾಸದಿಂದ ಸತ್ತ ಎಂದು ಯಾರೊಬ್ಬರೂ ತಮ್ಮ ಭಾಷಣದಲ್ಲಿ ಹೇಳಲಿಲ್ಲ.

ಅಲ್ಲದೆ ಯಾರೂ ಹೊಟ್ಟೆಗಿಲ್ಲದೆ ಉಪವಾಸದಿಂದ ಸತ್ತರು ಎಂದು ನಮಗೆ ದೂರು ಬಂದಿಲ್ಲ, ಯಾರೂ ಇದುವರೆಗೆ ಹಾಗೆ ಹೇಳಲಿಲ್ಲ. ನಮಗೆ ಮೂರು ಲಕ್ಷ ಟನ್ನಿನಷ್ಟು ಆಹಾರದ ಡಿಫಿಸಿಟ್ಟು ಇದೆ ಎನ್ನುವುದು ತಿಳಿದು ಅದನ್ನು ತರಲು ಇಷ್ಟು ಕಷ್ಟಪಡಬೇಕಾಯಿತು. ಆದರೆ ಈಗ ಆ ಕಷ್ಟ ದಿನಗಳು ಬರುವುದಿಲ್ಲ ಎಂದು ನಾನು ತಿಳಿದಿದ್ದೇನೆ. ಏಕೆಂದರೆ, ನಮಗೆ ಈ ಸಾರಿ ಬಂದಿರುವ ಬೆಳೆ ಚೆನ್ನಾಗಿದೆ, ಮಳೆ ಚೆನ್ನಾಗಿ ಬಂದಿರುವುದರಿಂದಾಗಿ ಭತ್ತದ ಬೆಳೆ ಚೆನ್ನಾಗಿ ಬರುತ್ತಿದೆ. ಭತ್ತದ ಎರಡನೆಯ ಬೆಳೆಯನ್ನು ಕೂಡ ಬೆಳೆಯುವುದರಲ್ಲಿದ್ದಾರೆ. ಜೋಳದ ಬೆಳೆ ಕೂಡ ಅಲ್ಲಲ್ಲಿ ಚೆನ್ನಾಗಿ ಬಂದಿದೆ. ಮೈಸೂರು ಕಡೆಯ ಕೆಲವು ಭಾಗಗಳಲ್ಲಿ ರಾಗಿ ಬೆಳೆಯೂ ಬರುತ್ತಿದೆ. ಆದ್ದರಿಂದ ಮುಂಜಾಗರೂಕತೆಗಾಗಿ ಈಗಿನಿಂದಲೇ ಐದು ಲಕ್ಷ ಟನ್ನಿನಷ್ಟು ಧಾನ್ಯಗಳನ್ನು ಪ್ರೊಕ್ಯೂರ್-

(ಶ್ರೀ ಎಂ. ವಿ. ಕೃಷ್ಣಪ್ಪ)

ಮೆಂಟು ಪ್ಲಾನು ಪ್ರಕಾರ ಶೇಖರಿಸಬೇಕೆಂದಿರುವುದರಲ್ಲಿ ನಾವು ಎರಡೂವರೆ ಲಕ್ಷ ಟನ್ನುಗಳಷ್ಟು ಧಾನ್ಯ ಶೇಖರಣೆ ಮಾಡಬೇಕೆಂದು ಯೋಚನೆ ಮಾಡಿದ್ದೇವೆ ಮತ್ತು ಕೇಂದ್ರದವರು ಎರಡೂವರೆ ಲಕ್ಷ ಟನ್ನುಗಳಷ್ಟನ್ನು ಕೊಡುತ್ತಾರೆ ಇನ್ನು ಮುಂದೆ ಹಿಂದೆ ಆದಂತಹ ಕಹಿ ನೆನಪುಗಳು ದೇಶದಲ್ಲಿ ಬರುವುದು ಬೇಡ ಎಂದು ಈ ಆಹಾರದ ವಿಷಯದಲ್ಲಿ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಇದರಲ್ಲಿ ನಮ್ಮ ಮಿತ್ರರು ಒಂದೆರಡು ವಿಷಯಗಳಲ್ಲಿ ನನ್ನ ಮೇಲೆ ಆರೋಪಣೆ ಮಾಡಿದ್ದಾರೆ. ಮಾನ್ಯ ಸದಸ್ಯರುಗಳು ಹೇಳುವಷ್ಟು ಕೆಳಮಟ್ಟಕ್ಕೆ ಹೋಗಿ ಉತ್ತರ ಕೊಡುವ ಗೋಜಿಗೆ ಹೋಗುವುದಿಲ್ಲ. ಮಾನ್ಯ ಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದು, ಅವರಲ್ಲೇ ಕೆಲವರು ಹೇಳಿದ ಹಾಗೆ, ವಾಸ್ತವವಾದ ವಿಚಾರಗಳನ್ನು ತಿಳಿದುಕೊಂಡು ಸತ್ಯವಾದುದನ್ನು ಇಲ್ಲಿ ಹೇಳಬೇಕು. ಅಸತ್ಯವಾದ ವಿಚಾರಗಳನ್ನು ಇಲ್ಲಿ ಹೇಳುವ ಪ್ರಯತ್ನವನ್ನು ಬಿಡಬೇಕು. ಮಾನ್ಯ ಸದಸ್ಯರು ಇಲ್ಲಿ ಹೇಳುವಾಗ ನಿಜವಾಗಿಲ್ಲದ ವಿಚಾರಗಳನ್ನು ತಿಳಿಯದೆ ಇಲ್ಲಿ ಹೇಳಿದ್ದಾರೆ. ಇದರ ಬಗ್ಗೆ ಒಂದೆರಡು ನಿದರ್ಶನಗಳನ್ನೂ ಹೇಳಿದ್ದಾರೆ. ಇದರಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಮರುಳಪ್ಪನವರೂ ಕೆಲವನ್ನು ಹೇಳಿದರು. ಮಾನ್ಯ ಸದಸ್ಯರಾದ ಮರುಳಪ್ಪನವರೂ ನಾನೂ ಸುಮಾರು ಇಪ್ಪತ್ತೊಂದು ವರ್ಷಗಳ ಹಿಂದೆಯೇ ಅಸೆಂಬ್ಲಿ ಸದಸ್ಯರಾಗಿ ಬಂದಿದ್ದೇವೆ. 1944ನೇ ಇಸವಿಯಲ್ಲಿ ಮೊದಲನೆಯ ಸಲ ಅವರೂ ಅಸೆಂಬ್ಲಿಗೆ ಸದಸ್ಯರಾಗಿ ಬಂದರು. ನಾನೂ ಆಗ ಸದಸ್ಯನಾಗಿ ಬಂದಿದ್ದೆ. ಆಗಾಗ್ಗೆ ನಾನೂ ಅವರೊಡನೆ ವಿಶ್ವಾಸದಿಂದ ಮಾತನಾಡುತ್ತಾ ಬಂದಿದ್ದೇನೆ. ಮತ್ತು ಅವರು ನಮ್ಮೆಲ್ಲರ ಪ್ರೀತಿ ವಿಶ್ವಾಸಗಳನ್ನೂ ಪಡೆದವರೆಂದು ತಿಳಿದುಕೊಂಡಿದ್ದೇನೆ. ಬೀದಿಯಲ್ಲಿ ಹೋಗುತ್ತಿದ್ದವರ ಮಾತನ್ನು ಕೇಳಿ ಇಲ್ಲಿ ಅಪಾದನೆ ಮಾಡಿದ್ದಾರೆಂದು ನನಗೆ ತೋರುತ್ತೆ. ರೆವೆನ್ಯೂ ಮಿನಿಸ್ಟರಾಗಿರುವವರು ಜನರಿಗೆ ಜಮೀನನ್ನು ಹಂಚುವುದು ಅವರ ಒಂದು ಕರ್ತವ್ಯ. ಆದರೆ ಇದರಲ್ಲಿ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಎಂದು ಇದೆ. ಅದರಂತೆ ಅಮಲ್ದಾರರು ದರಖಾಸ್ತಿನಲ್ಲಿ ಎರಡು ಎಕರೆವರೆಗೆ ಕೊಡಲು ಅಧಿಕಾರ ಇದೆ. ಅದರ ಮೇಲೆ ಅಸಿಸ್ಟೆಂಟು ಕಮಿಷನರ ಬಳಿ ಬಂದರೆ, ನಾಲ್ಕು ಎಕ್ರೆ. ಅನಂತರ ಡೆಪ್ಯುಟೀ ಕಮಿಷನರ ಬಳಿಗೆ ಬಂದರೆ ಹತ್ತು ಎಕರೆಯಷ್ಟು, ಆಮೇಲೆ ಡಿವಿಶನರ್ ಕಮಿಷನರವರಲ್ಲಿಗೆ ಆಮೇಲೆ ತಕರಾರುಗಳಿದ್ದರೆ ಮಂತ್ರಿಗಳ ಬಳಿ ಬಂದು ರಿಕಾರ್ಡುಗಳನ್ನು ನೋಡಿ ಎಲ್ಲ ಮಹಜರು ಇತ್ಯಾದಿಗಳೆಲ್ಲ ಸರಿಯಾಗಿದ್ದರೆ, ವ್ಯಾಲ್ಯುಯೇಷನ್ನೂ ಸರಿಯಾಗಿದ್ದರೆ ಜಮೀನು ಮಂಜೂರಾಗುತ್ತದೆ. ಇದು ಮೊದಲಿನಿಂದಲೂ ನಡೆದುಕೊಂಡುಬರುತ್ತಿದೆ. ಇದರಲ್ಲಿ ಯಾರಾದರೂ ತಪ್ಪು ಮಾಡಿದ್ದರೆ ಅಮಲ್ದಾರರವರ ಮೇಲೆ ಅಪೀಲು ಅಸಿಸ್ಟೆಂಟು ಕಮಿಷನರಿಗೆ, ಅವರಲ್ಲಿ ತಪ್ಪಿದ್ದರೆ ಡೆಪ್ಯುಟೀ ಕಮಿಷನರಿಗೆ ಲಾಯರಿಟ್ಟು ಅಪೀಲು ಹಾಕುತ್ತಾರೆ. ಅಲ್ಲಿಂದ ಮಂತ್ರಿಗಳ ಬಳಿಗೂ ಬರುತ್ತದೆ. ಅದೂ ಸರಿಯಾಗಿಲ್ಲದಿದ್ದರೆ ಹೈಕೋರ್ಟಿನವರೆಗೂ ಹೋಗುತ್ತಾರೆ. ಹೀಗೆ ನೂರಾರು ಎಕರೆಯಷ್ಟು ಜಮೀನನ್ನು ಕೊಡುತ್ತಲಿದ್ದೇವೆ. ಬಹುಶಃ ಪ್ರತಿದಿನವೂ ಕೂಡ ಸುಮಾರು 100ರಿಂದ 150 ಎಕರೆಯಷ್ಟು ಭೂಮಿ ಹಂಚುತ್ತಿದ್ದೇವೆ. ಬಳ್ಳಾರಿ ಜಿಲ್ಲೆಯಲ್ಲಿ ತಮಗೆಲ್ಲ ತಿಳಿದಿರುವಂತೆ 3–4 ಲಕ್ಷ ಎಕರೆಯಷ್ಟು ಭೂಮಿಯ ಸಾಗುವಳಿ ಚೀಟಿ ಕೊಡಬೇಕೆಂದು ನಾನೇ ಹೋಗಿ ಹಂಚಿ ಬಂದಿದ್ದೇನೆ. ಸುಮಾರು 30 ಲಕ್ಷ ಎಕರೆಯಷ್ಟು ಜಮೀನನ್ನು ಈಗ ಹಂಚಬೇಕೆಂದು ಗುರಿ ಇಟ್ಟುಕೊಂಡಿದ್ದೇವೆ. ಚಾಮರಾಜನಗರದಲ್ಲಿ ಒಂದೂರಿನಲ್ಲಿ ಸುಮಾರು 3,000 ಎಕರೆಯಷ್ಟು ಭೂಮಿಯನ್ನು ಹಂಚಿ ಬಂದಿದ್ದೇನೆ. ಹೀಗೆ ನಾವು ಮಾಡುವುದು ತಪ್ಪೋ ಸರಿಯೋ ತಾವೇ ಯೋಚಿಸಬೇಕು. ರಿಕಾರ್ಡುಗಳು ಅಗ್ರೀ ಆಗಿ ಯಾರ ನಿರ್ಬಂಧವೂ ಇಲ್ಲದೆ ಆಯಾ ಊರಿನ ಗ್ರಾಮಸ್ಥರೂ ಒಪ್ಪಿದ್ದರೆ ಅದನ್ನು ಕೊಡಲು ಯಾವ ತೊಂದರೆಯೂ ಇರುವುದಿಲ್ಲ. ಅದರಲ್ಲೂ ಇಲ್ಲಿ ಹೇಳಿದಂತೆ ಕೊಟ್ಟ ಜಮೀನುಗಳು ನಾನು ಮಂತ್ರಿಯಾಗಿ ಬಂದು ಕೊಟ್ಟುದಲ್ಲ, ನನ್ನ ಹಿಂದೆ ಮಂತ್ರಿಗಳಾಗಿದ್ದವರು ಆರ್ಡರು ಮಾಡಿ ಹೋದುದನ್ನು ನಾನು ಹಂಚಬೇಕಾಗಿದೆ. ಇದರಲ್ಲಿ ನನ್ನಲ್ಲಿ ಕೆಲಸ ಮಾಡುತ್ತಿದ್ದ ಜವಾನರುಗಳಿಗೆಲ್ಲ ಜಮೀನನ್ನೆಲ್ಲ ಹಂಚಿದರು ಎಂದು ಹೇಳಿದರು. ಭೂಮಿ ಹಂಚಿದುದು ನಾನಲ್ಲ. ಹಿಂದಿನ ಮಂತ್ರಿಗಳು ಆರ್ಡರು ಮಾಡಿದುದನ್ನು ಜಾರಿಗೆ ಕೊಡುವ ಕೆಲಸ ನನಗೆ ಬಂತು ಅಷ್ಟೇ. ಹಿಂದೆ ಆ ಮಂತ್ರಿಗಳ ಬಳಿ ಎಷ್ಟು ಜನ ಜವಾನರುಗಳಿದ್ದರೋ ಅಷ್ಟು ಜನರೂ, ಎಂದರೆ, ಸುಮಾರು 7–8 ಜನರಿಗೂ ಒಬ್ಬೊಬ್ಬರಿಗೆ 2-3 ಎಕರೆಯಷ್ಟು ಜಮೀನನ್ನು ಕೊಟ್ಟಿದ್ದಾರೆ. ಅವರಿಗೆ ಕೊಡಲು ರೂಲ್ಸು ಪ್ರಕಾರ ಎಲ್ಲರ ಒಪ್ಪಿಗೆಯೂ ಬಂದು ಕೊಡಬಹುದು ಎಂದು ಹೇಳಿದುದರಿಂದ ಬೆಂಗಳೂರಿಗೆ 5-6 ಮೈಲಿ ದೂರದಲ್ಲಿ ಗ್ರಾಮಸ್ಥರುಗಳ ಮಹಜರು ಪಡೆದು ಜಮೀನನ್ನು ಕೊಟ್ಟಿದ್ದಾರೆ ಅಷ್ಟೆ. ಇದನ್ನು ಜಾರಿ ಮಾಡಲು ನಾನು ಆರ್ಡರು ಮಾಡಿದ್ದೇನೆ. ಇದರಿಂದ ನನ್ನ ಹತ್ತಿರ ಕೆಲಸ ಮಾಡುವ ಜವಾನರಿಗೆ ಎರಡೆರಡು ಎಕರೆಯಷ್ಟು ಜಮೀನು ಅವರುಗಳು ರಿಟೈರಾದಾಗ ಸಿಕ್ಕಿದೆ. ಇದನ್ನು ನ್ಯಾಯವಾಗಿ ಕೊಡಲಾಗಿದೆ. ರಿಟೈರಾದ ಮೇಲೆ

ತಮ್ಮ ಜೀವನ ನಡೆಸುವುದಕ್ಕಾಗಿ ಎರಡು ಎಕ್ರೆಯಷ್ಟು ಭೂಮಿಯನ್ನು ಕೇಳಿದರು. ಅದರಂತೆ ಕೊಡಲಾಗಿದೆ ಅಷ್ಟೇ. ಇದಕ್ಕೆ ಸಂಬಧಪಟ್ಟ ರಿಕಾರ್ಡುಗಳೂ ಕೂಡ ಸರಿಯಾಗಿವೆ.

ಇನ್ನೊಂದು ರಿಕಾರ್ಡಿನ ಬಗ್ಗೆ ಮಾನ್ಯ ಸದಸ್ಯರು ಒಬ್ಬಿಬ್ಬರು ಹೆಸರಗಳನ್ನು ಹೇಳಿದರು. ಅವರ ಜೊತೆಯಲ್ಲೇ ಇನ್ನೂ 5-6 ಹೆಸರುಗಳಿವೆ. ಹೆಸರುಗಳನ್ನು ಅಧ್ಯಕ್ಷರು ಇಲ್ಲಿ ಹೇಳಕೂಡ ದೆಂದು ಹೇಳಿರುವುದರಿಂದ ಪುನಃ ನಾನು ಇಲ್ಲಿ ಅದನ್ನು ಹೇಳುವ ಗೋಜಿಗೆ ಹೋಗುವುದಿಲ್ಲ. ಅವರು ಹೇಳಿದ ಇಬ್ಬರು ಹೆಸರುಗಳಲ್ಲದೆ ಇನ್ನೊಬ್ಬರು Ex-soldier, ಇನ್ನೊಬ್ಬರು ಪೊಲಟಿಕಲ್ ಸಫರರ್, ಇನ್ನೊಬ್ಬರು ಹರಿಜನರು, ಹೀಗೆ ನಾಲ್ಕು ಜನರಿಗೂ ಬೆಂಗಳೂರಿಂದ 8 ಮೈಲಿಗಳ ದೂರದಲ್ಲಿ, ಜಮೀನು ಕೊಡಲಾಗಿದೆ. ಈಗ ಅಲ್ಲಿಗೆ ಶರಾವತಿಯಿಂದ ಬರುವ ವಿದ್ಯುಚ್ಛಕ್ತಿ ಕಂಭ ಗಳೂ ಬಂದು ಬೀಳುತ್ತಿವೆ. ಮತ್ತು ಆ ಭೂಮಿಯು ಕೆಲಸಕ್ಕೆ ಬಾರದ ಬಂಜರು ಭೂಮಿಯಾಗಿದೆ. ಇದರಲ್ಲಿ ನಾಲ್ಕು ನಾಲ್ಕು ಎಕರೆಗಳಷ್ಟು ಭೂಮಿಯನ್ನು ಇವರುಗಳು ತೆಗೆದುಕೊಂಡಿದ್ದಾರೆ. ನಾನೂ ಕೂಡ ಜಮೀನು ಕೊಡುವಾಗ ಕೆಳಗಿನಿಂದ ಸರಿಯಾಗಿ Recordಗಳು Build up ಆಗಿ ಬಂದಿದ್ದರೇನೇ ಒಪ್ಪಿಕೊಂಡು ಹಂಚಲು ಆರ್ಡರು ಮಾಡುವುದು–ಇಲ್ಲದಿದ್ದರೆ ಇಲ್ಲ. ಹಾಗಿಲ್ಲದೇ ಇದ್ದರೆ ಎಲ್ಲ ರಿಕಾರ್ಡುಗಳನ್ನೂ ಪರೀಕ್ಷೆ ಮಾಡಿ ನೋಡಬೇಕಾಗುತ್ತದೆ. ಹೀಗೆ ಕೊಡುವುದೇನೂ ಅಪರಾಧವಾಗುವುದಿಲ್ಲ. ಆದರೆ ಹಿಂದೆ ಯಾರಿಗೋ ಕೊಟ್ಟಿದ್ದ ಜಮೀನನ್ನು ಅವರು ಮಾರಿದ್ದಾರೆಂದು ಅದಕ್ಕೇನೋ ಕಥೆ ಕಟ್ಟಿ ಇಲ್ಲಿ ಹೇಳಿದ್ದಾರೆ ಅದು ಹೇಗೆ ಆಗುತ್ತದೆ ಎಂದರೆ, ಮೂರು ಕರೀ ಕಾಗೆ ಕಥೆಯಾದ ಹಾಗೆ ಆಗುತ್ತದೆ. ಇಷ್ಟು ನಿಜವಾದ ಅಂಶಗಳು. ಮಾನ್ಯ ಸದಸ್ಯರಾದ ಶ್ರೀಮಾನ್ ಚನ್ನಬೈರೇಗೌಡರು ಆರ್.ಟಿ.ಸಿ. ಹಣ ದುರುಪಯೋಗ ಪ್ರಕರಣವೊಂದರಲ್ಲಿ ಆಪಾದಿತ ರಾಗಿದ್ದವರು ಒಬ್ಬರು ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಮಂತ್ರಿಗಳೂ ಭಾಗವಹಿಸಿದ್ದರು ಎಂದು ಹೇಳಿದರು. ಇದರಲ್ಲಿ ಇವರು ಯಾರದೋ ಮೂರನೇ ಮನುಷ್ಯರ ಮಾತನ್ನು ಕೇಳಿಕೊಂಡು ಇಲ್ಲಿ ಹೇಳಿದ್ದಾರೆ. ಅವರಿಗೆ ಸರಿಯಾದ ವಿಷಯಗಳೇ ತಿಳಿದಿಲ್ಲ. ಹೊಸಕೋಟೆ ತಾಲ್ಲೂಕಿನಲ್ಲಿರುವ ಬೈಲ ನರಸಾಪುರದಲ್ಲಿ 5,000 ಜನ ಮುಸಲ್ಮಾನರಿದ್ದಾರೆ. ಅವರ ಊರಿಗೆ ಎಲೆಕ್ಟ್ರಿಕ್ ದೀಪಗಳಿರಲಿಲ್ಲ. ಹೊಸದಾಗಿ ಆಗ ಲೈಟು ಹಾಕಿಸಿದ್ದರು. ಅದರ Switch-on-Ceremony ಮಾಡುವುದಕ್ಕಾಗಿ ನನ್ನನ್ನು ಕರೆದಿದ್ದರು. ಆಗ ನಾನು ತಿರುಪತಿಗೆ ಹೊರಟಿದ್ದೆ. ಹೋಗುವಾಗ ದಾರಿಯಲ್ಲೇ ಇದ್ದುದರಿಂದ ಅಲ್ಲಿಗೆ ಹೋಗಿ Switch-on-Ceremonyಯಲ್ಲಿ ಭಾಗವಹಿಸಿ ಮುಂದಕ್ಕೆ ತಿರುಪತಿಗೆ ಪ್ರಯಾಣ ಮಾಡಿದೆ. ಹೀಗೆ ವಿಷಯಗಳನ್ನು ತಿಳಿಯದೆ ಸುಳ್ಳು ವಿಚಾರಗಳನ್ನು ಹೇಳಿದರೆ, ಪೇಪರಿನಲ್ಲೂ ಹಾಕಿದರೆ, ಅದನ್ನು ಜನ ನಂಬುತ್ತಾರೆ. ಈರೀತಿಯಾಗಿ ನಿಜವಲ್ಲದ ಆಪಾದನೆಗಳನ್ನು ಮಾಡುವುದು ಸರಿಯಲ್ಲ. ಪೇಪರಿನಲ್ಲಿ ನಾವು ಮೂರು ಜನ ಮಂತ್ರಿಗಳು ಹೇಳುವುದೂ ಬರುವು ದಿಲ್ಲ. ವಿರೋಧಪಕ್ಷದ ಸದಸ್ಯರು ಹೇಳುವುದನ್ನು ದೊಡ್ಡದಾಗಿ ಹಾಕುತ್ತಾರೆ. ಅದನ್ನು ಜನ ನಂಬುತ್ತಾರೆ. ನನ್ನಲ್ಲಿಗೆ ಜಮೀನು ಮಂಜೂರಾತಿಗಾಗಿ ಬಂದಾಗ ಅದರ ವ್ಯಾಲ್ಯುಯೇಷನ್ನು 2,000 ದಷ್ಟಿದ್ದಾಗ ಅದನ್ನು 4,000 ಕ್ಕೇರಿಸಿ ಮಂಜೂರು ಮಾಡಿದ್ದೇನೆ. ಕಳೆದ ಒಂದೆರಡು ವರ್ಷಗಳಲ್ಲಿ ಯಾರಿಗೂ ನಾನು ನಾಲ್ಕನೇ ಒಂದು ಭಾಗದಷ್ಟು ಜಮೀನನ್ನೂ ಕೊಟ್ಟಿಲ್ಲ. ಅಲ್ಲದೆ ನಾನು ರೆವೆನ್ಯೂ ಮಂತ್ರಿಯಾಗಿ ನನ್ನ ತಮ್ಮನಿಗೆ ಜಮೀನು ಕೊಟ್ಟಿರುವೆನೆಂದು ಹೇಳಿದರು. ದೇವರ ಸಾಕ್ಷಿಯಾಗಿ ನಾನು ಒಂದು ಎಕರೆ ಜಮೀನು ಕೂಡ ನನ್ನ ತಮ್ಮನಿಗೆ ಕೊಟ್ಟಿಲ್ಲ. ನಾವು ಐದು ಜನ ಅಣ್ಣತಮ್ಮಂದಿರು ಇದ್ದೇವೆ.

6-30 P.M.

ನಾವು ಐದು ಜನ ಅಣ್ಣತಮ್ಮಂದಿರೂ ದೇಶಕ್ಕಾಗಿ ಹೊಡೆದಾಡಿದ್ದೇವೆ. ನನ್ನ ಹೆಂಡತಿ ಕೂಡ ಸ್ವಾತಂತ್ರ್ಯ ಹೋರಾಟದ ಸಂಬಂಧವಾಗಿ ಜೈಲಿಗೆ ಬಂದಿದ್ದಾಳೆ. ನನ್ನ ತಮ್ಮ ಒಬ್ಬ ಡಬ್ಬಲ್ ಗ್ರ್ಯಾಜುಯೇಟ್ ನ್ಯಾಯವಾದ ಮಾರ್ಗದಲ್ಲಿ ಜೀವನ ಮಾಡುತ್ತಿದ್ದಾನೆ. ಅವರವರ ಪಾಡಿಗೆ ಅವರವರ ಜೀವನವನ್ನು ನ್ಯಾಯವಾಗಿ ನಡೆಸುತ್ತಿದ್ದಾರೆ. ನನ್ನ ಜೊತೆಯಲ್ಲಿಲ್ಲ ಬೇರೆ ಇದ್ದಾರೆ. ಅವರು ಕಾಳಸಂತೆ ವ್ಯಾಪಾರವನ್ನೇನೂ ಮಾಡಿಲ್ಲ. ನನ್ನ ಹಿಂದುಸ್ತಾನ್ ಕಾರನ್ನು ಅವರು ಉಪಯೋಗ ಮಾಡಿದರೆಂದು ಅವರು ಆಪಾದಿಸಿದರು. ಅದನ್ನು ಮಾರಿ ಎಷ್ಟೋ ದಿವಸವಾಯಿತು. ನನ್ನ ಟೆಲಿಫೋನನ್ನು ಉಪಯೋಗ ಮಾಡುತ್ತಾರೆಂದು ಹೇಳಿದರು ಕಿತ್ತು ಹಾಕಿ ಎಷ್ಟೋ ದಿವಸವಾಯಿತು. ಈ ಆಪಾದನೆಗಳೆಲ್ಲವೂ ಸತ್ಯಕ್ಕೆ ದೂರವಾಗಿವೆ. ಒಂದು ಸಣ್ಣ ಕಥೆಯನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅದು ವಿವೇಕಾನಂದರು ಹೇಳಿದ ಕತೆ. ಒಬ್ಬ ರೈತ ಬಹಳ ಕಷ್ಟಪಟ್ಟು ಕೆಲಸ ಮಾಡಿದ್ದ, ದಣಿವಾಗಿ ತನ್ನ ನೇಗಿಲನ್ನು ತಲೆಯ ಕೆಳಗೆ ಇಟ್ಟುಕೊಂಡು ದಾರಿಯ ಪಕ್ಕದಲ್ಲಿ ನಿದ್ದೆ ಹೋಗುತ್ತಿದ್ದ. ಆಗ ಒಬ್ಬ ದೊಡ್ಡ ಕಳ್ಳ ಅಲ್ಲಿ ಹೋಗುತ್ತಿದ್ದವನು ಇವನನ್ನು ನೋಡಿ, ನಾನು

(ಶ್ರೀ ಎಂ. ವಿ. ಕೃಷ್ಣಪ್ಪ)

ನಾಲ್ಕು ದಿವಸಗಳಿಂದ ನಿದ್ದೆಯಿಲ್ಲದೆ ಕದಿಯುತ್ತಿದ್ದೇನೆ, ನನಗೆ ಹೀಗೆ ನಿದ್ದೆ ಬಂದಿಲ್ಲ, ಇವನು ಎಂಟು ದಿವಸದಿಂದ ಕದ್ದಿರಬಹುದು ಅದಕ್ಕೇ ಇಷ್ಟು ನಿದ್ದೆ ಬಂದಿದೆ ಎಂದುಕೊಂಡನಂತೆ. ಅವನು ಕಷ್ಟ ಪಟ್ಟು ಕೆಲಸ ಮಾಡಿ ನಿದ್ದೆ ಹೋಗುತ್ತಿರಬಹುದು ಎಂದು ಆ ಕಳ್ಳ ಯೋಚನೆ ಮಾಡಲಿಲ್ಲ. ಅವನ ದೃಷ್ಟಿಯಲ್ಲೇ ಯೋಚನೆ ಮಾಡುತ್ತಾನೆ. ಹಾಗೆ ವಿರೋಧಪಕ್ಷದವರು ನಾನು ಏನೂ ಇಲ್ಲದೆಯೇ ಇಷ್ಟೆಲ್ಲ ಮಾಡಿಕೊಂಡಿರುವಾಗ ಇವರು ಮಂತ್ರಿಗಳಾಗಿ ಇನ್ನೆಷ್ಟು ಹೊಡೆದಿರಬಹುದು ಎಂಬ ಭಾವನೆಯಿಂದ ಹೇಳುತ್ತಾರೆ. ಜನರು ಹೀಗೆಲ್ಲ ಆರೋಪಣೆ ಮಾಡಬಾರದು. ದೇವರು ಅವರಿಗೆ ಒಳ್ಳೆಯ ಬುದ್ಧಿ ಕೊಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

†ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಸ್ವಾಮಿ ಅಧ್ಯಕ್ಷರೆ, ನನಗೆ ಉಳಿದಿರುವ ಕಾಲ ಬಹಳ ಸ್ವಲ್ಪ. ಮಾನ್ಯ ಶಿವಪ್ಪನವರು ನಮ್ಮ ಉತ್ತರಕ್ಕೆ ಮಾರುತ್ತರ ಕೊಡಬೇಕಾಗಿದೆ. ಆದುದರಿಂದ ನಾನು ಸಭೆಯ ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಿಲ್ಲ. ನಮ್ಮಲ್ಲಿ ವಿಶ್ವಾಸವಿಲ್ಲ ವೆಂದು ಸಭೆಯ ಮುಂದೆ ಏನೊಂದು ಸೂಚನೆ ಬಂದಿದೆಯೋ ಅದರ ಬಗ್ಗೆ ಏನೇನು ಹೇಳುತ್ತಾರೆಂದು ನಾಲ್ಕು ದಿವಸಗಳಿಂದ ಕೇಳುತ್ತಿದ್ದೇನೆ. ಏಕೆಂದರೆ ಅದಕ್ಕೆಲ್ಲ ಉತ್ತರ ಕೊಡಬೇಕೆಂಬ ಉದ್ದೇಶ ನನ ಗಿತ್ತು. ಆದರೆ ಈಗ ಉತ್ತರ ಕೊಡುವುದಕ್ಕೆ ಅವಕಾಶವಿಲ್ಲದಂತಾಗಿದೆ. ಕೆಲವು ಜನರು ಕಾಂಗ್ರೆಸ್‌ಗೆ ಸೇರಿರುವವರು ನನ್ನ ಮೇಲೆ ಮತ್ತು ನನ್ನ ಸಹೋದ್ಯೋಗಿಗಳ ಮೇಲೆ 24 ಅಪಾದನೆಗಳನ್ನು ಮಾಡಿ ದೂರು ಕೊಟ್ಟಿದ್ದಾರೆ. ಇದು ಏನೇನು ಎನ್ನುವುದನ್ನು ಅವರು ನನಗೆ ತಿಳಿಸಲಿಲ್ಲ. ಅದು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಪತ್ರಿಕೆಗಳಿಗೆ ಸೈಕ್ಲೋಸ್ಟೈಲ್ ಪ್ರತಿಗಳನ್ನು ಮಾಡಿ ಕೊಟ್ಟರು. ಅದರ ಮೇಲೆ ಪತ್ರಿಕೆಗಳಲ್ಲಿ ನಾನಾರೀತಿ ಟೀಕೆಗಳು ಬಂದವು. ಅದಕ್ಕೆ ನಾನು ಗಮನ ಕೊಡಲಿಲ್ಲ. ಆದರೆ ಕೇಂದ್ರ ಸರಕಾರಕ್ಕೆ ಒತ್ತಾಯ ಮಾಡಿ ತರಿಸಿಕೊಂಡೆ. ಅವನ್ನು ನೋಡಿದರೆ ಆ ಅಪಾದನೆಗಳು ವಾಸ್ತವಾಂಶಕ್ಕೆ ಬಹಳ ದೂರವಾಗಿದ್ದವು. ನಾನು ಹೇಳಬೇಕಾದುದನ್ನು ಕೇಂದ್ರಕ್ಕೆ ತಿಳಿಸಿದ್ದೇನೆ. ಅದಲ್ಲದಿರುವುದು. ಇಲ್ಲಿ ಏನಾದರೂ ಬರುತ್ತದೆಯೋ ಏನೋ ಎಂದು, ಉತ್ತರ ಕೊಡಬೇಕೆಂದು ಕುತೂಹಲದಿಂದ ಕಾದಿದ್ದೆ, ಆದರೆ ಬರಲಿಲ್ಲ. ಏಕೆ ಅವುಗಳನ್ನು ಇಲ್ಲಿ ಪ್ರಸ್ತಾಪಿಸಲಿಲ್ಲ ಎಂಬುದು ಸದಸ್ಯರಿಗೆ ಗೊತ್ತು. ಈ ಸಭೆಯಲ್ಲಿ ಬಂದರೆ ನಾನು ಉತ್ತರ ಹೇಳುವಾಗ ಎಷ್ಟುಮಟ್ಟಿಗೆ ಸುಳ್ಳು ಅಪಾದನೆಗಳು ಬಂದಿವೆ, ಎಷ್ಟುಮಟ್ಟಿಗೆ ನಮ್ಮ ಹೆಸರನ್ನು ಕೆಡಿಸಲು ಹಾಗೂ ಸಮಾಜದಲ್ಲಿ ಮಂತ್ರಿಗಳ ಪ್ರಾಮಾಣಿಕತೆ, ಗೌರವ ಪ್ರತಿಷ್ಠೆಗಳನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿದ್ದಾರೆಂಬುದು ಗೊತ್ತಾಗುತ್ತದೆ ಎಂದು ಅವುಗಳನ್ನು ಇಲ್ಲಿ ಅವರು ತಂದಿಲ್ಲ. ಅದರಲ್ಲಿ ಎಳ್ಳಷ್ಟಾದರೂ ಸತ್ಯಾಂಶ ವಿದ್ದಿದ್ದರೆ ಇಷ್ಟೊಂದು ಹೇಳುವ ಜನರು ಅದನ್ನೆಲ್ಲ ಸಭೆಯ ಮುಂದೆ ತರುತ್ತಿದ್ದರು. ಮಾನ್ಯ ಸದಸ್ಯರು ಪಾರ್ಲಿಮೆಂಟಿನಲ್ಲಿ ಎಸ್. ಎಸ್. ಪಿ. ಇಪ್ಪತ್ತು ಜನರೋ ಹದಿನೆಂಟು ಜನರೋ ಸೇರಿ ಎಂಟು ಅಪಾದನೆಗಳನ್ನು ಹಾಕಿ ಮೊದಲು ಕೊಟ್ಟಿದ್ದರು. ಅದು ಏನಾಯಿತೋ ಗೊತ್ತಿಲ್ಲ. ಎಂಟು ಅಪಾದನೆಗಳನ್ನು ಮಾತ್ರ ಹಾಕಿ ಕಳುಹಿಸಿದ್ದೇವೆ ಇನ್ನೂ ಹದಿನಾರು ಇವೆ ಅವನ್ನೂ ಹಾಕಿ ಕಳುಹಿಸೋಣ ಎಂದು ಮೊದಲು ಕಾಂಗ್ರೆಸ್ ಸದಸ್ಯರು ಕೊಟ್ಟಿದ್ದುದರಲ್ಲಿದ್ದುದನ್ನು ಮಕ್ಕೀಕಾಮಕ್ಕಿ ಕಾಪಿ ಮಾಡಿ ಹಾಕಿ ಕಳುಹಿಸಿದ್ದಾರೆ. ಯಾವುದೇ ಒಂದು ಹೊಸ ವಿಷಯವೂ ಇದರಲ್ಲಿಲ್ಲ. ಎಂದರೆ, ಕೆಲವರು ಡೊವೆಟೇಲಿಂಗ್ ಎನ್ನುವಹಾಗೆ ಮಾಡಿದ್ದಾರೆ. ಅದನ್ನೆಲ್ಲ ಇಲ್ಲಿ ಅವರು ತರಬಹುದಾಗಿತ್ತು. ನನ್ನ ಸಹೋದ್ಯೋಗಿಗಳಾದ ಮಂತ್ರಿಗಳು ಅನರ್ಹರು ಎಂದು ಹೇಳಬಹುದಾಗಿತ್ತು. ಬಂದಾಗ ಬರಲಿ ಎಂದು ಅದನ್ನು ಕೈಬಿಟ್ಟರು. ಈಚೆಗೆ ಬಾಕಿ 16 ಅಪಾದನೆಗಳನ್ನೂ ಸೇರಿಸಿ ಕಳುಹಿಸಿದ್ದಾರೆ. ಇನ್ನು ಮುಖ್ಯಮಂತ್ರಿಯ ವಿಷಯವನ್ನು ಪ್ರಸ್ತಾಪಿಸಿ ನನ್ನ ತಮ್ಮನ ವಿಷಯ ಹೇಳಿದ್ದಾರೆ. ನನಗೆ ತಮ್ಮನಿಲ್ಲ. ಇದ್ದ ಒಬ್ಬರು ಅಣ್ಣ ತೀರಿ ಕೊಂಡು ನಾಲ್ಕು ವರ್ಷವಾಯಿತು. ಆತನ ಮಕ್ಕಳು ಬಹಳ ಬಡತನದಲ್ಲಿದ್ದಾರೆ. ಒಬ್ಬ ಆಸ್ಪತ್ರೆಯಲ್ಲಿದ್ದಾರೆ. ಅವರಿಗೆ ಹೆಚ್ಚು ಸಹಾಯ ಮಾಡಲು ನನಗೆ ಶಕ್ತಿಯಿಲ್ಲ. ನಾನು ಶ್ರೀಮಂತನಾಗಿದ್ದೇನೆಂಬ ಮಾತು ಸತ್ಯಕ್ಕೆ ಬಹಳ ದೂರವಾಗಿದೆ. ಹಿಂದೆ ನಾನು ಮುಖ್ಯ ಮಂತ್ರಿಯಾದ ಕೆಲವೇ ತಿಂಗಳಲ್ಲಿ ಏನು ಹೇಳಿದ್ದರೋ ಅದೇ ವಿಚಾರಗಳನ್ನು ಈಗ ಪುನಃ ಹೇಳಿದ್ದಾರೆ. ಅದು ಬಿಟ್ಟು ಒಂದು ಮಾತು ಕೂಡ ಹೆಚ್ಚಾಗಿಲ್ಲ.

ಇನ್ನು ನನ್ನ ಸಹೋದ್ಯೋಗಿಗಳಾಗಿರುವ ಶ್ರೀ ವೀರೇಂದ್ರ ಪಾಟೀಲರು ಶರಾವತಿಯ ವಿಚಾರ ವನ್ನು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಅದಕ್ಕಿಂತ ಹೆಚ್ಚು ಹೇಳುವುದಕ್ಕೆ ಸಾಧ್ಯವಿಲ್ಲವೆಂದು ಕಾಣುತ್ತದೆ. ಶರಾವತಿಯಂತಹ ಯೋಜನೆಯ ಕಾರ್ಯದಲ್ಲಿ ಮಂತ್ರಿಗಳಾದವರು ಜವಾಬ್ದಾರಿ ವಹಿಸಿ ಸೂಕ್ತ ಕಾಲದಲ್ಲಿ ಕೆಲಸ ಮಾಡುವುದು ಅನಿವಾರ್ಯ. ದೇಶದ ಹಿತದೃಷ್ಟಿಯಿಂದ ಹಾಗೆ ಮಾಡ ಬೇಕಾದುದು ಅಗತ್ಯ. ಹಾಗೆ ಮಾಡದಿದ್ದರೆ. ಅಂತಹ ಜವಾಬ್ದಾರಿಯನ್ನು ತೆಗೆದುಕೊಳ್ಳದಿದ್ದರೆ ಅಂಥವನು ಮಂತ್ರಿಯಾಗುವುದಕ್ಕೆ ಅರ್ಹನಲ್ಲ. ಇಂತಹ ದೊಡ್ಡ ಕೆಲಸಗಳನ್ನು ಮಾಡುವಾಗ ಉದ್ದೇಶ

ಪೂರ್ವಕವಾಗಿ ಕೆಲವುಜನ ಮಿಸ್ ಮೇಯೋ ಟೀಕೆ ಮಾಡಿದಂತೆ ಅಕ್ಷೇಪಣೆ ಮಾಡುತ್ತಾರೆ, ಅಪಪ್ರಚಾರ ಮಾಡುತ್ತಾರೆ, ಇಂತಹ ಅಪಪ್ರಚಾರಗಳಿಗೆ ಹೆದರಿದರೆ ಪ್ರಯೋಜನವಿಲ್ಲ. ಈಹೋತ್ತು ಅಕ್ಷೇಪಣೆ ಕೆಲವರು ಮಾಡಬಹುದು, ನೀವು ಸುಳ್ಳು ಹೇಳಿದ್ದೀರಿ, ಆದುದರಿಂದ ಜುಡಿಷಿಯಲ್ ಎನ್‌ಕ್ವೈರಿ ಆಗಬೇಕೆಂದು ಹೇಳಬಹುದು. ಒಂದು ಸಣ್ಣ ಕತೆ ಹೇಳುತ್ತೇನೆ, ನನಗೆ ಒಬ್ಬರು ಒಳ್ಳೆಯ ಗೃಹಸ್ಥ ಸ್ನೇಹಿತರಿದ್ದರು. ಅವರ ಹೆಂಡತಿ ಯಾರನ್ನೋ ಕಟ್ಟಿಕೊಂಡು ಹೋಗಿದ್ದಾರೆಂಬ ಪುಕಾರು ಹುಟ್ಟಿತು. ಏನು ಒಳ್ಳೆಯ ಮನುಷ್ಯ, ಎಂತಹ ದೊಡ್ಡ ಮನುಷ್ಯ ಇಂಥ ವರಿಗೆ ಏನು ಕಷ್ಟ ಬಂತು ಎಂದು ಜನರು ಮರುಗಿ ಬಹಳ ಹಿಂದು ಮುಂದು ನೋಡಿ, ಸಂಕೋಚದಿಂದ ಅವರಲ್ಲಿ ಹೋಗಿ ಏನು ರಾಯರೆ, ಮರ್ಯಾದಸ್ಥರಿಗೆ ಹೀಗಾಗಿದೆಯಲ್ಲ ಎಂದು ನಮಗೆಲ್ಲ ಬಹಳ ವ್ಯಸನವಾಗಿದೆ ಎಂದು ಈ ವಿಷಯವನ್ನು ಪ್ರಸ್ತಾಪ ಮಾಡಿದರು. ಆಗ ಅವರು ನನ್ನ ಹೆಂಡತಿ ಇಲ್ಲವೇಇಲ್ಲ, ಅವಳು ಸತ್ತು ಹೋಗಿ 20 ವರ್ಷವಾಯಿತು ಎಂದು ಹೇಳಿದರು. ಅಂತಹಸಂದರ್ಭದಲ್ಲಿ ಅವನ ಹೆಂಡತಿ ಸತ್ತು 20 ವರ್ಷವಾಯಿತೆ ಎಂಬುದಕ್ಕೆ ಜುಡಿಷಿಯಲ್ ಎನ್‌ಕ್ವೈರಿ ಮಾಡಬಹುದೆ? ಹೀಗೆ ಉದ್ದೇಶಪೂರ್ವಕವಾಗಿ ಅಪಾದನೆ ಮಾಡವುದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಇದನ್ನು ಬಹಳ ಎಚ್ಚರಿಕೆಯಿಂದ ಆಲೋಚನೆ ಮಾಡಬೇಕು. ಏಕೆಂದರೆ ಸತ್ಯಸಂಗತಿಗಳ ಬಗ್ಗೆ ಪ್ರಯತ್ನ ಪೂರ್ವಕವಾಗಿ ಕಣ್ಣುಮುಚ್ಚಿಕೊಂಡಿರುವವರಿಗೆ ಅದನ್ನು ತೋರಿಸುವುದು ಕಷ್ಟ. ಪ್ರಯತ್ನ ಪೂರ್ವಕವಾಗಿ ನಿದ್ರೆ ಮಾಡುವ ವೇಷ ಧರಿಸಿ ಗೊರಕೆ ಹೊಡೆಯುತ್ತಾ ಮಲಗಿರುವವನ್ನು ಎಬ್ಬಿಸುವುದಕ್ಕಾಗುವುದಿಲ್ಲ. ನಿಜವಾಗಿ ನಿದ್ರೆ ಬಂದು ಮಲಗಿದವರನ್ನು ಸ್ವಲ್ಪ ತಟ್ಟಿದರೆ ಸಾಕು ಅವರು ಏಳುತ್ತಾರೆ. ಈಗ ಇವರು ಪ್ರಯತ್ನಪೂರ್ವಕವಾಗಿ ಕಣ್ಣುಮುಚ್ಚಿಕೊಂಡಿರತಕ್ಕವರು ಆಗಿರುವುದರಿಂದ ಅವರಿಗೆ ಏನು ಹೇಳಿದರೂ ಗೊತ್ತಾಗುವುದಿಲ್ಲ. ಯಾವುದನ್ನೂ ಅವರು ಒಪ್ಪುವುದಿಲ್ಲ. ಅಂಥವರನ್ನು ನಾನು ಎಬ್ಬಿಸುವುದಕ್ಕೆ ಹೋಗುವುದಿಲ್ಲ. ಸಮಾಧಾನ ಹೇಳಲು ಸಾಧ್ಯವಿಲ್ಲ. ಕಳೆದ ಮೂರು ವರ್ಷ ಹೇಳಿದ್ದೇನೆ. ಅದನ್ನೇ ಇನ್ನೂ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿರುವ ಶರಾವತಿ ವಿದ್ಯುತ್‌ಶಕ್ತಿ ಯೋಜನೆಯು ನಮ್ಮ ಲಕ್ಷ್ಮಿ. ಅದು ಪ್ರಾರಂಭವಾಗಿದೆ. ಮಾನ್ಯ ಪ್ರಧಾನ ಮಂತ್ರಿಗಳು ಈ ಯೋಜನೆಯ ಪ್ರಾರಂಭೋತ್ಸವವನ್ನು ಒಂದೆರಡು ದಿನದಲ್ಲಿ ಮಾಡುವವರಿದ್ದಾರೆ. ಈ ಯೋಜನೆಯಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ಈ ಶರಾವತಿ ಯೋಜನೆಯ ಕೆಲಸದಲ್ಲಿ ಏನಾದರೂ ಅನ್ಯಾಯ ನಡೆದಿದೆಂದು ಅನುಮಾನ ಬಂದರೆ ಅದರ ವಿಚಾರಣೆ ನಡೆಸಲು ಅನುಮಾನ ಪಡುವುದಿಲ್ಲ. 40—50 ಲಕ್ಷ ಅನ್ಯಾಯ ನಡೆದಿದ್ದರೆ ವಿಚಾರಣೆ ಮಾಡುತ್ತೇನೆ. ಇದಕ್ಕೆ ಸಂಬಂಧಪಟ್ಟ ಫೈಲುಗಳ ಪ್ರತಿಯೊಂದು ಪೇಜ್ ನೋಡಿದ್ದೇನೆ. ಒಂದು ಸಲ ಅಲ್ಲ ನಾಲ್ಕು ಸಲ ನೋಡಿದ್ದೇನೆ. ಶ್ರೀ ಕಂಠಿಯವರು ನೋಡಿದ್ದಾರೆ. ಶ್ರೀ ವೀರೇಂದ್ರ ಪಾಟೀಲರವರು ನೋಡಿದ್ದಾರೆ. ಆರ್ಬಿಟ್ರೇಷನ್ ಬಗ್ಗೆ ಇರುವುದನ್ನು ನೋಡಿದ್ದೇನೆ. ನನ್ನ ಮನಸ್ಸಿಗೆ ಸಂಪೂರ್ಣವಾಗಿ ಸಮಾಧಾನವಾಗಿದೆ. ಇದರಲ್ಲಿ ಯಾವ ಅನ್ಯಾಯವಾಗಿಲ್ಲ. ಫೈಲುಗಳನ್ನು ತರಿಸಿ ಹುಡುಕಿದ್ದೇನೆ. ಎಲ್ಲಾ ಮಾಡಿದ್ದೇನೆ. ಯಾವದೇ ರೀತಿಯ ಅನ್ಯಾಯ ಆಗಿದೆ ಎಂದು ನನಗೆ ಅನಿಸುವುದಿಲ್ಲ. ನನಗೆ ಖಚಿತವಾಗಿದೆ. ಶರಾವತಿಯ ಬಗ್ಗೆ ಜ್ಯುಡೀಶಿಯಲ್ ಎನ್‌ಕ್ವೈರಿ ಮಾಡುವುದು ಅನಾವಶ್ಯಕ.

ಇನ್ನು ಫಿಲ್ಮ್ ಮಾಡಿಸಿದ್ದೇವೆ, ಅದಕ್ಕೆ ದುಡ್ಡು ಕೊಟ್ಟಿದ್ದೇವೆ, ಅದರಲ್ಲಿ ನನ್ನ ತಮ್ಮ ಇದ್ದಾನೆ ಎಂದು ಅಪಾದನೆ ಮಾಡಿದರು. ನನಗೆ ತಮ್ಮನೇ ಇಲ್ಲ. ಇರುವ ಒಬ್ಬ ಅಣ್ಣ ಸತ್ತು ಹೋಗಿ ನಾಲ್ಕು ವರ್ಷವಾಯಿತು. ನನ್ನ ಚಿಕ್ಕಮ್ಮನ ಮಕ್ಕಳು ಇದ್ದಾರೆ. ಅವರು ನನ್ನ ತಮ್ಮ ಹೇಗೆ ಆಗುತ್ತಾರೆ? ನನಗೂ ಅವರಿಗೂ ಸಂಬಂಧ ಇಲ್ಲ. ಈ ಫಿಲ್ಮ್ ತಯಾರಿಸುವುದಕ್ಕೆ ಒಂದು ಕಮಿಟಿ ಇದ್ದಿತು. ಇದರಲ್ಲಿ ನನಗೆ ಒಂದು ಕಾಸೂ ಬಂದಿಲ್ಲ. 40 ಸಾವಿರ ರೂಪಾಯಿ ಖರ್ಚ ಮಾಡಿದ್ದೀರಿ ಎಂದು ವಿರೋಧ ಪಕ್ಷದವರು ಹೋ.. ....ಎಂದು ಕೂಗಿದರು. ಇದು ಸತ್ಯಕ್ಕೆ ದೂರವಾದುದು. 20 ಸಾವಿರ ಕೂಡ ಕೊಟ್ಟಿಲ್ಲ. ಅವರೊಬ್ಬ ದೊಡ್ಡ ಮನುಷ್ಯರಾಗಿದ್ದಾರೆ, ಹೀಗೆ ಅಪಾದನೆ ಮಾಡುವುದು ಸರಿಯಲ್ಲ. ಅಗ್ರಿಮೆಂಟ್ 40 ಸಾವಿರಕ್ಕೆ ಮಾಡಿತ್ತು. ಆದರೆ 20 ಸಾವಿರ ಕೊಟ್ಟಿದ್ದರೆ ಅದು ಬುದ್ಧಿವಂತಿಕೆಯಾಗಲಿಲ್ಲವೇ? ಈ ವ್ಯವಹಾರವನ್ನು ಬಹಳ ಎಚ್ಚರಿಕೆಯಿಂದ ನಡೆಸಿದ್ದಾರೆ ಎಂಬುದು ಇದರಿಂದ ಗೊತ್ತಾಗುತ್ತದೆ. ಎಚ್ಚರಿಕೆಯಿಂದ ನಡೆಸಿದ್ದಾರೆ ಎನ್ನುವುದು ಗೊತ್ತಾಗುವುದಲ್ಲದೆ ಯೋಗ್ಯತೆಯೂ ಗೊತ್ತಾಗುತ್ತದೆ. ಅವರಿಗೂ ನನಗೂ ಏನೂ ಸಂಬಂಧವಿಲ್ಲ. ಅವರಿಗೆ ಕೊಟ್ಟಿದ್ದನ್ನು ಅವರು ತೆಗೆದುಕೊಳ್ಳಲು ದೊಡ್ಡ ಮನಸ್ಸು ಮಾಡಿ ಒಪ್ಪಿಕೊಂಡು ಅವರು ದೊಡ್ಡ ಉಪಕಾರ ಮಾಡಿದ್ದಾರೆ. ಇಂದಿರಾಗಾಂಧಿಯವರನ್ನೂ ಮತ್ತು ನನ್ನನ್ನು ತೂಕ ಮಾಡಿದರು. ಆ ರೀತಿ ಉತ್ಸಾಹದಿಂದ ಜನ ತೂಕ ಮಾಡುವುದನ್ನು ನೋಡಿದರೆ ನಾನು ಇನ್ನೂ ಹೆಚ್ಚು ದಪ್ಪವಾಗಬೇಕಾಗಿತ್ತು ಎಂದು ಅನಿಸಿತು. ಅಲ್ಲಿಯ ಜನ ಉತ್ಸಾಹ ಎಷ್ಟಿತ್ತೆಂಬುದು ಬಹು ಮುಖ್ಯ. ಬೆಳಗಾವಿಯಲ್ಲಿ ಐದ್ಯೆದು ರೂಪಾಯಿ ನೋಟಿನ ಕಂತೆಯಿಂದ ತೂಕ ಮಾಡಿದರು. ಇಲ್ಲಿ ಸಭೆಯಲ್ಲಿ ಕುಳಿತಂಥ ಬೆಳಗಾಂ ಜಿಲ್ಲೆಯ ಎಲ್ಲ ಮಾನ್ಯ

(ಶ್ರೀ ಎಸ್. ನಿಜಲಿಂಗಪ್ಪ)

ಸದಸ್ಯರೂ ಎಲ್ಲರೂ ಅಲ್ಲಿಗೆ ಬಂದಿದ್ದರು. ಇದು ಎಲ್ಲರಿಗೂ ಗೊತ್ತಿದೆ. ಇಲ್ಲಿ ಇರುವ ಪ್ರಶ್ನೆ ಏನೆಂದರೆ, ಹಣ ವಸೂಲ್ಮಾಡುವುದಕ್ಕೆ ಜನರ ಮೇಲೆ ಒತ್ತಾಯ ತರಲಾಯಿತು, ಅಧಿಕಾರಿಗಳು ತಮ್ಮ ಅಧಿಕಾರವನ್ನು ಉಪಯೋಗಿಸಿಕೊಂಡರು ಎಂದು ಮುಂತಾಗಿ ಹಾಗೆ ಹೀಗೆ, ಹೀಗೆ ಹಾಗೆ ಎಂದು ವಿಪರೀತ ಪುಕಾರು ಬಂತು. ಅದು ಸುಳ್ಳು. ಬೇರೆ ಪದಗಳನ್ನು ಉಪಯೋಗಿಸಿ ಹೇಳುವುದಾದರೆ ಸತ್ಯಕ್ಕೆ ಬಹು ದೂರವಾದುದು. ನಾವು ಸುಳ್ಳು ಹೇಳುವುದಿಲ್ಲ, ವಿರೋಧ ಪಕ್ಷದಲ್ಲಿ ಸುಳ್ಳು ಹೇಳುವ ವಾತಾವರಣ ಬೆಳೆದುಕೊಂಡು ಬಂದಿದೆ. ಆ ಪಕ್ಷದಲ್ಲಿ ಉಳಿದರೆ ಸುಳ್ಳು ಹೇಳಿಸುತ್ತಾರೆ, ಇಂಥ ಕಹಿ ವಾತಾವರಣದಲ್ಲಿರುವುದು ಬೇಡ, ಎಂದುಕೊಂಡು ಕೆಲವರು ಅವರ ಪಾರ್ಟಿ ಬಿಟ್ಟುಕೊಟ್ಟು ನಮ್ಮ ಕಡೆ ಬಂದಿದ್ದಾರೆ. ಅವರೇನು ಸುಮ್ಮಸುಮ್ಮನೆ ಬಂದಿದ್ದಾರೆಯೇ? ಅಂಥವರ ಸಹವಾಸ ಬೇಡ ಎಂದು ನಮ್ಮ ಕಡೆ ಬಂದಿದ್ದಾರೆ. ನಮ್ಮ ಕಡೆ ಬರುವುದಕ್ಕೆ ನಾವು ಒತ್ತಾಯಪಡಿಸಲಿಲ್ಲ.

ಈ ಸಂದರ್ಭದಲ್ಲಿ ವಿರೋಧ ಪಕ್ಷದ ಸದಸ್ಯರು ಕೆಲವು ಫೋಟೋ ಕಾಪೀಸ್ ಕಂತೆಯನ್ನೇ ತೋರಿಸಿದ್ದಾರೆ. ಅವುಗಳನ್ನು ಸಂಪಾದನೆ ಮಾಡಲು ಲಂಚಾ ಕೊಟ್ಟಿರಬಹದು. ಎಷ್ಟು ಜನ ಅನ್ಯಾಯ ಮಾಡಲು ಅನುಕೂಲ ಮಾಡಿಕೊಟ್ಟರು. ಎಷ್ಟು ಭ್ರಷ್ಟಾಚಾರವಾಗಿದೆ. ಪಾಪ ಇವರು ಮಾಡಿಲ್ಲ. ಯಾರೋ ಇದನ್ನು ಮಾಡಿಸಿದ್ದಾರೆ. ಎಷ್ಟು ಜನರಿಗೆ ಲಂಚ ಕೊಟ್ಟಿರಬಹುದು? ಮಾಡಬಾರದ ಕೆಲಸ ಮಾಡಿದ್ದಾರೆ. ಇದು ಧರ್ಮವೇ? ಇದು ಅವರ ಕರ್ತವ್ಯವೇ? ಎಷ್ಟು ಭ್ರಷ್ಟಾಚಾರ ಮಾಡಿ ಅವುಗಳನ್ನು ತಂದಿದ್ದಾರೆ! ಭ್ರಷ್ಟಾಚಾರ ಎಲ್ಲಿ ಇದೆ ಎನ್ನುವುದನ್ನು ಯೋಚನೆ ಮಾಡಬೇಕು. ಮಾಡಬಾರದ ಕೆಲಸ ಅಧಿಕಾರಿಗಳಿಂದ, ಗುಮಾಸ್ತರಿಂದ ಮಾಡಿಸಿದ್ದಾರೆ. ಇದು ಸರಿಯೇ?

ಇನ್ನು ಶ್ರೀ ಮುನ್ನಾಳ್ ಅವರಿಗೆ ಕೆಲಸ ಕೊಡಿಸಿದ್ದೇವೆ, ಜಮೀನು ಕೊಡಿಸಿದ್ದೇವೆ ಎಂದು ಹೇಳಿದರು. ನಾನು ಅವರನ್ನು ಎಂ.ಎಲ್.ಸಿ. ಮಾಡಲಿಲ್ಲ. ನಾನು ಆಗ್ಗೆ ಮಂತ್ರಿಯಾಗಿರಲಿಲ್ಲ. ನಾನು ಬರುವುದಕ್ಕೆ ಮುಂಚೆ ಅದು ಆಗಿದೆ. ಆದುದರಿಂದ ಅವರು ಹೇಳಿದ ಮಾತು ಸುಳ್ಳು. ಜಾಗ ಕೊಟ್ಟರು ಎಂದು ಹೇಳಿದರು. ನಾನು ಕೊಟ್ಟನೆ? ನಾನು ಮಂತ್ರಿಯಾಗುವುದಕ್ಕೆ ಒಂದು ವರ್ಷ ಮುಂಚೆ ಕೊಟ್ಟಿದ್ದಾರೆ. ಅವರು ಬಡತನದಲ್ಲಿ ಬಹಳ ಕಷ್ಟಪಟ್ಟಿದ್ದಾರೆ. ಅಂಥವರಿಗೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದಕ್ಕಾಗುತ್ತದೆಯೇ? ಇನ್ನೊಂದು ಜಾಗ 200 ರೂಪಾಯಿಗೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದೆ. ಬಹಳ ಕಷ್ಟಪಟ್ಟು ಅನೇಕ ಸಲ ಜೈಲಿಗೆ ಹೋಗಿ ಕಾಂಗ್ರೆಸ್ ಕೆಲಸ ಮಾಡುವುದರಲ್ಲಿಯೇ ತಮ್ಮ ಕಾಲು ಸಹ ಮುರಿದುಕೊಂಡಿದ್ದಾರೆ. ನ್ಯಾಯವಾದ ಬೆಲೆಗೆ ಈ ಜಮೀನು ಅವರಿಗೆ ಕೊಟ್ಟಿದೆ. ರಿಕಾರ್ಡ್ ತರಿಸಿ ನೋಡಿದ್ದೇನೆ. ಅದರ ಬೆಲೆ 1,300 ರಿಂದ 1,500 ವರೆಗೆ ಬಂದಿದೆ. ಅದರಂತೆ ಡೆಪ್ಯುಟಿ ಕಮಿಷನರ್ ಅವರು ಆ ಬೆಲೆಗೆ ಕೊಟ್ಟಿದ್ದಾರೆ. (ಇಂಟರಪ್ಷನ್) ನನ್ನ ಉತ್ತರ ವಿರೋಧ ಪಕ್ಷದವರಿಗೆ ಸರಿಯಾಗಿ ಕಾಣುವುದಿಲ್ಲ. ಯಾಕಂದರೆ, ಇದು ಅವರಿಗೆ ಕಹಿ ಆಗಿದೆ. ಕಹಿ ಇದ್ದುದು ಅವರಿಗೆ ಬೇಕಾಗಿಲ್ಲ. ಇವತ್ತು ಈ ಜಮೀನು ಒಂದು ಲಕ್ಷ ರೂಪಾಯಿ ಬೆಲೆ ಬಾಳುತ್ತದೆ ಎಂದು ಕೂಗಿ ಹೇಳಿದರು. ವೆಂಡೆಲ್ ವಿಲ್ಕೀಯವರು ಒಂದು ಮಾತು ಹೇಳಿದ್ದಾರೆ. If you want to swallow a dishful of falsehoods, give it a garnish of truth. ಅಂದರೆ ದೊಡ್ಡ ಸುಳ್ಳು ಹೇಳುವಾಗ್ಗೆ ಅದಕ್ಕೆ ಸತ್ಯದ ಒಗ್ಗರಣೆಯನ್ನಾದರೂ ಕೊಡಿ ಎಂದು ಹೇಳಿದ್ದಾರೆ. ಈ ಅಪಾದನೆಗೆ ಸತ್ಯದ ಒಗ್ಗರಣೆ ಕೂಡ ಇಲ್ಲ. ಒಂದು ಲಕ್ಷ ರೂಪಾಯಿ ಬೆಲೆ ಬರುತ್ತಿದ್ದರೆ ಅದನ್ನು ನಿಮಗೆ 75 ಸಾವಿರಕ್ಕೆ ಕೊಡಿಸುತ್ತೇನೆ ನಿಮಗೆ 25 ಸಾವಿರ ರೂಪಾಯಿ ಲಾಭವಾಗುತ್ತದೆ ತಗೆದುಕೊಳ್ಳುತ್ತೀರಾ? 50 ಸಾವಿರಕ್ಕೆ ಕೊಡುತ್ತೇನೆ, ನಿಮಗೆ 50 ಸಾವಿರ ಲಾಭವಾಗುತ್ತದೆ ತೆಗೆದುಕೊಳ್ಳುತ್ತೀರಾ? 25 ಸಾವಿರಕ್ಕೆ ತೆಗೆದುಕೊಳ್ಳುತ್ತೀರಾ? ನಿಮಗೆ 75 ಸಾವಿರ ಲಾಭವಾಗುತ್ತದೆ. ಅದು ಇರಲಿ, 5,000ಕ್ಕೆ ಕೊಡಿಸುತ್ತೇನೆ ತೆಗದುಕೊಳ್ಳುತ್ತೀರಾ? ಎಂದು ಕೇಳುತ್ತೇನೆ.

ನನ್ನ ಮೇಲೆ ಇನ್ನೊಂದು ಅಪಾದನೆ ಮಾಡಿದರು. ನಾನು ಬಹಳ ಒಳ್ಳೆಯವನು ಹೇಳಿದ್ದನ್ನೆಲ್ಲಾ ಕೇಳುತ್ತೇನೆ, ಹಿತ್ತಾಳೆ ಕಿವಿಯುವನು ಸಣ್ಣಪುಟ್ಟ ಆಕ್ಷೇಪಣೆ ಮಾಡಲು ಸಾಧ್ಯವಿಲ್ಲ. ಆದರೆ ನನ್ನ ಸುತ್ತುಮುತ್ತ ಇರುವವರು ದೊಡ್ಡ ದೊಡ್ಡವರು ಆಗಿದ್ದಾರೆ, ಅವರು ಒಳ್ಳೆಯವರಲ್ಲ, ಸುತ್ತಮುತ್ತ ಇದ್ದವರು ನನ್ನ ಮನಸ್ಸು ಕೆಡಿಸುತ್ತಾರೆ ಎಂದು ಏನೇನೋ ಪುಕಾರ ಎಬ್ಬಿಸಿದರು. ನನ್ನ ಸುತ್ತುಮುತ್ತು ಇರುವವರ ಯೋಗ್ಯತೆ ಪಾಪ ಅವರಿಗೇನು ಗೊತ್ತು? ನನ್ನ ಬಲಗಡೆ ಕುಳಿತುಕೊಳ್ಳುವವರು ಬಹಳ ಯೋಗ್ಯರು. ನನಗಿಂತ ಅವರೇನೂ ಕಡಿಮೆಯಿಲ್ಲ.

ಇನ್ನೂ ಏನೇನೋ ಹೇಳಿದರು. ಅವಕ್ಕೆಲ್ಲಾ ಉತ್ತರ ಕೊಡುವ ಅವಶ್ಯಕತೆಯಿಲ್ಲ. ನಾನು ಒಂದು ಮಾತು ಎಲ್ಲರಿಗೂ ಹೇಳುತ್ತೇನೆ. ಇಲ್ಲಿ ಕುಳಿತಿರತಕ್ಕಂಥ ಎಲ್ಲ ಸದಸ್ಯರೂ ದೇವರ ಅಂಶ

ಎಂದು ನಾನು ತಿಳಿದುಕೊಂಡಿದ್ದೇನೆ. ನಾನೇನಾದರೂ ಒಂದು ಕಾಸನ್ನು ನನ್ನ ಅಧಿಕಾರ ದುರುಪಯೋಗಪಡಿಸಿಕೊಂಡು ಸಂಪಾದಿಸಿದ್ದರೆ ಇಲ್ಲಿ ನಾನು ಕುಳಿತುಕೊಳ್ಳುವುದಕ್ಕೆ ನನಗೆ ಇಷ್ಟವಿಲ್ಲ. ನಾನು ಒಂದು ಪ್ರಾರ್ಥನೆಯನ್ನು ಭಗವಂತನಲ್ಲಿ ಮಾಡುತ್ತೇನೆ. ಸನ್ಮತಿ ದೇ ಭಗವಾನ್ ಎಲ್ಲರಿಗೆ ಒಳ್ಳೇ ಸದ್ಬುದ್ಧಿಯನ್ನು ದಯಪಾಲಿಸು ಎಂದು ದೇವರಲ್ಲಿ ಪ್ರಾರ್ಥನೆ ಮಾಡಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ಎಸ್. ಶಿವಪ್ಪ.—ಮಾನ್ಯ ಸಭಾಪತಿಗಳೇ, ಈ ಸಭೆಯ ಮುಂದೆ ನಾನು ಮಂಡಿಸಿರತಕ್ಕಂಥ ಅವಿಶ್ವಾಸ ನಿರ್ಣಯದ ಮೇಲೆ ನಾಲ್ಕು ದಿವಸ ಚರ್ಚೆಯಾಗಿದೆ. ಸರಕಾರದಲ್ಲಿ ವಿಶ್ವಾಸವಿಲ್ಲ ಎಂದುಕೊಂಡು ಈ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಿದ ಮೇಲೆ ಈ ನಿರ್ಣಯದ ಮೇಲೆ ಮಾತನಾಡುತ್ತಾ ಸಮರ್ಥನೆ ಮಾಡಿದಂಥ ಎಲ್ಲ ಸದಸ್ಯರಿಗೂ ಕೂಡ ನಾನು ಹೃತ್ಪೂರ್ವಕವಾಗಿ ಅಭಿವಂದನೆಗಳನ್ನು ಸಲ್ಲಿಸಬೇಕಾಗಿದೆ.

ಈ ನಿರ್ಣಯವನ್ನು ವಿರೋಧಿಸಿ ಮಾತನಾಡಿದ ನಮ್ಮ ಮಾನ್ಯ ಮಂತ್ರಿಗಳೂ ಮತ್ತು ಅವರ ಹಿಂಬಾಲಕರಾಗಿರತಕ್ಕ ಇತರ ಸದಸ್ಯರುಗಳೂ ನಾವು ಕೊಟ್ಟಿರತಕ್ಕಂಥ ಆಪಾದನೆಗಳನ್ನು ವಿರೋಧಿಸಿ ಮಾತನಾಡಿದಂಥ ಕಾಲದಲ್ಲಿ, ನಾವು ನಮ್ಮ ಅವಿಶ್ವಾಸ ನಿರ್ಣಯದಲ್ಲಿ ಏನೇನು ಆಪಾದನೆಗಳನ್ನು ತಿಳಿಸಿದ್ದೇವೋ ಈ ಸರ್ಕಾರದ ಮೇಲೆ ಏನೇನು ಅಕ್ರಮಗಳ ಆಪಾದನೆಗಳನ್ನು ತಂದಿದ್ದೇವೋ ಅವುಗಳನ್ನು ಅವರ್ಯಾರೂ ನಿರಾಧಾರವಾದವುಗಳು ಎಂದಾಗಲೀ ಅಥವಾ ಅವು ಸತ್ಯಕ್ಕೆ ದೂರವಾದವುಗಳೆಂದಾಗಲೀ ಹೇಳಿರುವುದಿಲ್ಲ. ಆದುದರಿಂದ ನಾವು ಹೇಳಿರತಕ್ಕ ಆಪಾದನೆಗಳ ಬಗ್ಗೆ ಒಂದು ನಿಜಾಂಶವಿರುವುದಾಗಿ ಕಂಡುಬಂದಿದ್ದಾಗ್ಯೂ ಅವರೇಕೆ ಇವುಗಳ ಬಗ್ಗೆ ಒಂದು ಜ್ಯುಡಿಷಿಯಲ್ ಎನ್‌ಕ್ವೈರಿ ಸಮಿತಿಯನ್ನು ನೇಮಿಸುವುದಕ್ಕೆ ಅನಗತ್ಯವೆಂದು ಹೇಳುತ್ತಿದ್ದಾರೋ ಅದು ನನಗೆ ತಿಳಿಯದಾಗಿದೆ. ಶ್ರೀಮಾನ್ ವೀರೇಂದ್ರ ಪಾಟೀಲರವರು ಹೇಳಿದ್ದು ಅವರ ಇಲಾಖೆ ಒಂದು ಬಹಳ ದೊಡ್ಡ ಇಲಾಖೆ, ಚೀಫ್ ಇಂಜಿನಿಯರುಗಳು ಹೇಳಿದ್ದನ್ನು ಅವರು ನಂಬಲೇಬೇಕಾಗುವುದು ಅವರು ಪ್ರತಿಯೊಂದು ಫೈಲನ್ನೂ ಓದಿ ನೋಡಿ ಕೆಲಸಮಾಡಬೇಕೆಂದರೆ ಬಹಳ ನಿಧಾನವಾಗುತ್ತದೆ ಎಂಬ ಅರ್ಥ ಬರುವಂತೆ ಮಾತನಾಡಿದ್ದಾರೆ. ಹಾಗೂ ಅದರಲ್ಲೇನಾದರೂ ಹೆಚ್ಚುಕಡಿಮೆಯಾದರೆ ಅದನ್ನು ಸರಿಪಡಿಸಲು ಲಂಚ ನಿರೋಧಶಾಖೆಯಿದೆ ಎಂದು ಹೇಳಿದರು, ಆದರೆ ಇದೇ ಸಂದರ್ಭದಲ್ಲಿ ನಾನು ನಮ್ಮ ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ಹಾಲಿ ನಮ್ಮ ರಾಷ್ಟ್ರದ ಪ್ರಧಾನ ಸಚಿವರಾಗಿರತಕ್ಕ ಮಾನ್ಯ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಹಿಂದೆ ಕೇಂದ್ರ ಸರಕಾರದ ರೈಲ್ವೆ ಮಂತ್ರಿಯಾಗಿದ್ದಾಗ ಅವರು ಯಾವ ಫೈಲನ್ನೂ ಸಹಾ ನೋಡದೆ ಇದ್ದಾಗ್ಯೂ ಅವರ ಕಾಲದಲ್ಲಿ ದೇಶದ ಯಾವುದೋ ಒಂದು ಮೂಲೆಯಲ್ಲಿ ಒಂದು ದುರ್ಘಟನೆ ಸಂಭವಿಸಿದುದಕ್ಕಾಗಿ ತಮ್ಮ ಮಂತ್ರಿ ಪದವಿಯನ್ನು ಬಿಟ್ಟುಕೊಳಗಿಳಿದರು. ಆ ದುರ್ಘಟನೆಯಲ್ಲಿ ನನ್ನದೂ ಜವಾಬ್ದಾರಿ ಇದೆ ಎಂದು ಅವರು ಹೇಳಿದಂಥ ವಿಚಾರವನ್ನು ನಮ್ಮ ಶ್ರೀ ವೀರೇಂದ್ರ ಪಾಟೀಲರೂ ಗಮನಕ್ಕೆ ತೆಗೆದುಕೊಂಡು ನಾವು ಅವರ ಇಲಾಖೆಯ ಬಗ್ಗೆ ನಡೆದಿರತಕ್ಕ ಅನ್ಯಾಯಪರಂಪರೆಗಳನ್ನು ತೋರಿಸಿ ಕೊಟ್ಟಿರುವಾಗ ಇವರೂ ಸಹಾ ಅವುಗಳನ್ನು ಒಪ್ಪಿಕೊಂಡಿರುವಾಗ ಏಕೆ ಇವರು ತಮ್ಮ ಸ್ಥಾನವನ್ನ ಬಿಟ್ಟು ಕೊಡಬಾರದು ? ಇನ್ನೊಂದು ಅಂಶವನ್ನು ಶ್ರೀ ವೀರೇಂದ್ರಪಾಟೀಲರು ಏನು ಹೇಳಿದ್ದಾರೆಂದರೆ: ಕೆಲವು ವೇಳೆ ಕಾನೂನನ್ನೇ ಯಾವತ್ತೂ ಇಟ್ಟುಕೊಂಡು ಕೆಲಸಮಾಡುವುದಕ್ಕಾಗುವುದಿಲ್ಲ, ಕೆಲವು ಕೆಲಸಗಳು ತ್ವರಿತವಾಗಿ ಆಗಬೇಕಾಗಿರುತ್ತವೆ, ಹಾಗೆ ಕಾನೂನಿನ ಕಟ್ಟಲೆಗನುಸಾರವಾಗಿ ಕೆಲಸಗಳನ್ನು ಮಾಡುವುದು ಬಹಳ ಕಷ್ಟ ಎಂಬುದಾಗಿ ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡಾ........

ಶ್ರೀ ಎಸ್. ನಿಜಲಿಂಗಪ್ಪ.—ನನ್ನ ಬಾಯಿಂದ ಆ ಶಬ್ದಗಳೇ ಬಂದಿಲ್ಲ ಕಾನೂನಿಗೆ ವಿರೋಧವಾಗಿ ಕೆಲಸಮಾಡಬಹುದು ಎಂದು ನಾನು ಯಾವಾಗಲೂ ಹೇಳಿಲ್ಲ.

ಶ್ರೀ ಎಸ್. ಶಿವಪ್ಪ.—ಈ ಹಿಂದೆ ನಾವು ಇದೇ ಸಭೆಯಲ್ಲಿ. ಅವಿಶ್ವಾಸ ನಿರ್ಣಯವನ್ನು ತಂದು ಚರ್ಚೆ ಮಾಡುತ್ತಿದ್ದ ಕಾಲಕ್ಕೆ ಮಾನ್ಯ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿ ಆಗಿನ್ನೂ ಕೇವಲ 5–6 ತಿಂಗಳು ಮಾತ್ರ ಆಗಿತ್ತು ಅವರು ತಮ್ಮ ಚುನಾವಣೆಗೆ ಮುನ್ನ ಕೆಲವು ಆಪಾದನೆಗಳನ್ನು, ಆಗಿದ್ದ ಮಂತ್ರಿಮಂಡಲದ ಬಗ್ಗೆ ಹೇಳುತ್ತಿದ್ದರು. ಹಿಂದೆ ಇದೇ ಸಭೆಯಲ್ಲಿ ಆ ಶರಾವತಿ ಬಗ್ಗೆ ಚರ್ಚೆ ನಡೆದ ನಂತರ ಈಗ ಮುಖ್ಯಮಂತ್ರಿಗಳಾಗಿರತಕ್ಕ ಅವರೇ ಆ ದಿವಸ ಈ ಶರಾವತಿವ್ಯಾಲಿಯ ವಿಚಾರದಲ್ಲಿ ಏನಾದರೂ ಒಂದು ಸ್ವಲ್ಪ ಅನುಮಾನಕ್ಕೆ ಆಸ್ಪದವಿದೆಯೆಂದು ಕಂಡುಬಂದರೂ ನಾನು ಜುಡಿಷಿಯಲ್ ಎನ್‌ಕ್ವೈರಿಗೆ ವಿಚಾರವನ್ನೊಪ್ಪಿಸಲು ಸಿದ್ಧನಾಗಿರುತ್ತೇನೆಂದು ಆ ದಿವಸ ಹೇಳಿದ್ದರು. ಸಾಧ್ಯವಾದರೆ ಮಾಡುತ್ತೇವೆ ಎಂಬುದಾಗಿ ಮತ್ತೊಮ್ಮೆ ಹೇಳಿದ್ದರು. ಹಾಗೆ ಹೇಳಿದಂಥ ಒಂದು ಮಾತನ್ನು 3 ವರ್ಷಗಳು ಕಳೆದ ನಂತರ ಈ ದಿವಸ ಅದೇನೋ ಹೇಳುತ್ತಾರಲ್ಲಾ ದಪ್ಪನೆ ಚದುರ್ ಎಂದು ಹಾಗೇ ಅದನ್ನು ಮಾಡುವುದಕ್ಕೆ ಸಾಧ್ಯವೇ ಇಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಇವರು ಇಷ್ಟು ಕೆಳಮಟ್ಟಕ್ಕೆ ಬರುತ್ತಾರೆಂದು ನಾನು ನಂಬಿರಲಿಲ್ಲ. ಇವರೇ ಯಾವ ಒಂದು ಅಭಿಪ್ರಾಯವನ್ನು ಇದೆ,

(ಶ್ರೀ ಎಸ್. ಶಿವಪ್ಪ)

ಸಭೆಯ ಮುಂದಿಟ್ಟಿದ್ದರೂ ಅದನ್ನೇ ಈಗ ಸಾಧ್ಯವಿಲ್ಲವೆಂದು ಹೇಳುವಷ್ಟು ಮಟ್ಟಕ್ಕೆ ಇವರ ಚರ್ಮ ದಪ್ಪನಾಗಿರುತ್ತದೆ. ಆಡಳಿತ ಪಕ್ಷದವರಿಗೆ ಈ ನಮ್ಮ ಆಪಾದನೆಗಳ ಬಗ್ಗೆ ಅನುಮಾನವಿಲ್ಲದೆ ಮೇಲೆ ಅವರೇಕೆ ಹೀಗೆ ಜುಡಿಷಿಯಲ್ ಎನ್‌ಕ್ವೈರಿಗೆ ಹಿಂದು ಮುಂದು ನೋಡುತ್ತಿದ್ದಾರೋ ನನಗದು ಹೊಳೆಯುತ್ತಿಲ್ಲ. ಆದರೆ ಇದೇ ರೀತಿ ಲೋಕ ಸಭೆಯಲ್ಲೂ ಮೊಟ್ಟಮೊದಲನೆಯದಾಗಿ ಅವಿಶ್ವಾಸ ನಿರ್ಣಯವನ್ನು ಮಂಡಿಸಿದಂಥ ಒಂದು ಕೀರ್ತಿ ಶ್ರೀ ಆಚಾರ್ಯಕೃಪಲಾನಿಯವರಿಗೆ ಸೇರಿದ್ದಾಗಿದೆ. ಆದರೆ ಅವರಬಗ್ಗೆ ಇಲ್ಲಿ ಕೆಲವು ಮಾನ್ಯ ಸದಸ್ಯರು ಅವಹೇಳನಕರವಾದ ಮಾತುಗಳನ್ನಾಡಿದ್ದು......

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ತಯಾರಾದ್ದೂ ನಮ್ಮ ಗರುಡಿಯಲ್ಲೇ.........

ಶ್ರೀ ಎಸ್. ಶಿವಪ್ಪ.—ಆದರೆ ಅವರು ಮಾಡಿರತಕ್ಕ ಆಪಾದನೆಗಳನ್ನು ಸಹಿಸಲಾರದ ಕೆಲವರು ಅವರಿಗೆ ಅವಹೇಳನಕರವಾದ ಮಾತುಗಳನ್ನಾಡಿದ್ದಾರೆ, ಆದರಿಂದ ಅವರ ಮನಸ್ಸು ನೊಂದು ಅವರು ಅಲ್ಲಿಂದ ಆಸ್ಪತ್ರೆಗೆ ಸೇರಿದರು. ಇದು ದೇಶದಲ್ಲಿ ಎಲ್ಲರಿಗೂ ಗೊತ್ತಿರುವ ವಿಚಾರ. ಅವರ ವಿಚಾರವನ್ನು ಇಲ್ಲಿ ಎತ್ತಲಿಕ್ಕೂ ಕೂಡ ಸಾಧ್ಯವಿಲ್ಲದಂಥ ಕೆಲವುವ್ಯಕ್ತಿಗಳು ಅವರ ಬಗ್ಗೆ ಕಟುವಾಗಿ ಮಾತನಾಡಿದ್ದಾರೆ. ಆದರೆ ಈ ದಿವಸ ನೀವೆಲ್ಲರೂ ಅವರಿಂದ ಪಾಠಕಲಿಯಬೇಕಾಗಿದೆ. ಅವರು ಮಾಡಿರತಕ್ಕ ಟೀಕೆಗಳನ್ನು ಇಲ್ಲಿರತಕ್ಕ ಪ್ರತಿಯೊಬ್ಬರೂ ಪದ ಪದಗಳನ್ನೂ ಓದಿ ನೋಡಬೇಕಾಗಿದೆ.

ಇನ್ನು ತುಲಾಭಾರದ ವಿಚಾರದಲ್ಲಿ ಗೃಹಮಂತ್ರಿಗಳು ಇದರ ಖರ್ಚು ವೆಚ್ಚಗಳನ್ನೆಲ್ಲಾ ಜನರೇ ಮುಂದೆ ಬಂದು ಮಾಡಿದರೆಂದು, ಅವರು ಇದನ್ನು ಸ್ವಯಂ ಪ್ರೇರಿರತರಾಗಿ ಮಾಡಿದರೆಂದೂ ಕೂಡ ಹೇಳಿದ್ದಾರೆ. ಆದರೆ ಈದಿವಸ ಆ ಖರ್ಚುವೆಚ್ಚಗಳನ್ನೆಲ್ಲಾ ಸರ್ಕಾರದ ವತಿಯಿಂದ ಮಾಡಲಾಯಿತೆಂದು ಹೇಳುತ್ತಿದ್ದಾರೆ. ಹೀಗೆ ಹಿಂದೆ ಹೇಳಿದ್ದ ಹೇಳಿಕೆಗೂ ಈ ದಿವಸ ಹೇಳತಕ್ಕ ಹೇಳಿಕೆಗೂ ವ್ಯತ್ಯಾಸ ವುಂಟಾಗಿದೆ, ಇಂಥ ಆವಶ್ಯಕತೆಯೇನಿತ್ತು ಎಂಬುದನ್ನು ಅವರು ಸಮರ್ಥನೆ ಮಾಡಿಕೊಂಡಿಲ್ಲ. ಇಂಥ ವಿಚಾರಕ್ಕೆ ಸರ್ಕಾರದ ವತಿಯಿಂದ ಖರ್ಚುಮಾಡತಕ್ಕದ್ದೂ ಕೂಡ ನ್ಯಾಯವಾದುದಲ್ಲ.

ಇನ್ನು ಪತ್ರಿಕಗಳಿಗೆ ಜಾಹಿರಾತನ್ನು ಕೊಡತಕ್ಕ ವಿಚಾರದಲ್ಲಿ ಈ ಸಭೆಯ ಮುಂದೆ ಮಾನ್ಯ ಗೃಹಸಚಿವರು ಅವರ ಅಂಕಿ ಅಂಶಗಳನ್ನು ಸಭೆಯಮುಂದಿಡುವುಕ್ಕೆ ಅವರು ಹಿಂದೆಗದಿದಾರೆ. ಆದರೆ ನಾವು ಅವರು ಹೇಳುತ್ತಿರುವ ಅಂಕಿ ಅಂಶಗಳಿಗೂ ಮತ್ತು ಅಧಿಕೃತ ಅಂಕಿ ಅಂಶಗಳಿಗೂ ಎಷ್ಟು ವ್ಯತ್ಯಾಸವಿದೆ ಎಂಬುದನ್ನು ನಾವು ತೋರಿಸಿಕೊಟ್ಟಿದ್ದೇವೆ. ಹೀಗೆ ಮಾನ್ಯ ಮಂತ್ರಿಗಳು ಅಧಿಕೃತ ವರದಿಗೆ ಮೀರಿ ಎಷ್ಟು ದೂರ ಹೋಗಿ ವಾದಮಾಡಿದ್ದಾರೆಂಬುದನ್ನು ತಿಳಿಸಿ ಅವರ ವಾದದಲ್ಲಿ ತಿರುಳೇನೂ ಇಲ್ಲ ಎಂಬುದನ್ನು ರುಜುವಾತುಮಾಡಿದ್ದೇವೆ.

ಇನ್ನು ಶರಾವತಿ ವಿಚಾರದಲ್ಲಿ ನಾವುಏನೇನು ಹೇಳುತ್ತಿದ್ದೇವೋ ಅವುಗಳಲ್ಲೇನೂ ಸತ್ಯಾಂಶ ವಿಲ್ಲ ವೆಂದು ಅವರು ಹೇಳುತ್ತಿದ್ದಾರೆ. ನಾವು ಇಲ್ಲಿಗೆ ಮೂರಾವರ್ತಿ ಈ ವಿಚಾರದಲ್ಲಿ ಅವಿಶ್ವಾಸ ನಿರ್ಣ ಯವನ್ನುತಂದಿದ್ದಾಗ್ಯೂ ಸರ್ಕಾರದವರು ಹೇಳಿದ್ದ ಹಳೇರಾಗವನ್ನೇ ಈಗಲೂಹೇಳುತ್ತಿದ್ದಾರೆ. ಅವರು ಹಾಗೇ ಹೇಳುತ್ತಿರುವುದನ್ನು ಮರತು ಅದನ್ನು ನಮಗೆ ತಿರುಗಿಸಿ ನಾವು ಹೇಳಿದ್ದನ್ನೇ ಹೇಳುತ್ತಿದ್ದೇ ವೆಂದು ಹೇಳತ್ತಿರುವುದರಲ್ಲಿ ಅರ್ಥವಿಲ್ಲ. ಆದರೆ ಈ ವಿಚಾರದಲ್ಲಿ ಒಂದು ನಿಷ್ಪಕ್ಷಪಾತವಾದ ಜುಡಿಷಿ ಯಲ್ ಎನಕ್ವೈರಿ ನಡಸುವುವಕ್ಕೇಕೆ ಇವರ ಹಿಂದಗೆಯುತ್ತಿದ್ದಾರೆ ಎಂದು ಕೇಳುತ್ತೇನೆ? ಇಲ್ಲಿ ನಡೆಯುತ್ತಿರುವ ಕೆಲಸಗಳ ವಿಚಾರದಲ್ಲಿ ಸರ್ಕಾರದವರು ಕಾನೂನಿಗೆ ಮೀರಿ ಕೆಲಸಮಾಡಿದ್ದಾ ರೆಂಬುದು ಅವರ ಫೈಲುಗಳಿಂದಲೇ ವ್ಯಕ್ತವಾಗುತ್ತಿದೆ. ಈ ವಿಚಾರದಲ್ಲಿ ಸರ್ಕಾರದವರು ಒಂದು ಬಹಿರಂಗ ವಿಚಾರಣೆಗೆ ಅವಕಾಶವಾಡದಿದ್ದರೆ ಜನತೆಗೆ ಖಂಡಿತವಾಗಿ ಈ ಸರ್ಕಾರದಲ್ಲಿ ವಿಶ್ವಾಸ ವಿರುವುದಿಲ್ಲ ಎಂದು ಹೇಳುತ್ತೇನೆ. ತಾವು ದುಡಿಯುತ್ತಿರುವುದೆಲ್ಲಾ ದೇಶಕ್ಕಾಗಿ ಎಂದು ಹೇಳುತ್ತಿ ರುವಾಗ ಇಂಥ ಅನ್ಯಾಯಗಳು ನಡೆದಿರುವಾಗ ತಾವು ಈ ಗದ್ದುಗೆಯ ಮೇಲೆ ಕುಳಿತುಕೊಳ್ಳುವುದು ನ್ಯಾಯವಾದುದಲ್ಲ ಎಂದು ನಾನು ಹೇಳದೆ ವಿಧಿಯಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮಾತನಾ ಡುತ್ತಾ "ನಾನು ಈ ವಿಚಾರದಲ್ಲಿ ಏನಾದರೂ ಅನ್ಯಾಯವಾಗಿ ನಡೆದಿದ್ದರೆ ದೇವರು ನನಗೆ ಶಿಕ್ಷೆಮಾಡಲಿ" ಎಂಬುದಾಗಿ ಹೇಳಿದರು. ಆದರೆನಾನು ಅವರೇ ನೇರವಾಗಿ ಅನಾಚಾರಮಾಡಿ ದ್ದಾರೆಂದು ಹೇಳಲಿಲ್ಲ; ಅವರ ಅನುಯಾಯಿಗಳಿಗೆ ಅಂಥ ಅವಕಾಶಮಾಡಿದ್ದಾರೆ ಆ ಅನ್ಯಾಯಗಳನ್ನು ತಡಗಟ್ಟತಕ್ಕದ್ದು ಇವರ ಆದ್ಯಕರ್ತವ್ಯವಾಗಿತ್ತು ಎಂದು ಮಾತ್ರ ನಾನು ಹೇಳಿದ್ದೇನೆ. ಈಗಲೂ ಮುಖ್ಯ ಮಂತ್ರಿಗಳು ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡಿದರೆ ಅವರಿಗೆ ಕೀರ್ತಿ ಬರುತ್ತದೆ ಇಲ್ಲದಿದ್ದರೆ ಇಲ್ಲ ಎಂದು ಹೇಳುತ್ತೇನೆ.

ವಿರೋಧ ಪಕ್ಷದ ಬಗ್ಗೆ ಮತ್ತು ವಿರೋಧ ಪಕ್ಷದ ಸದಸ್ಯರ ಬಗ್ಗೆ ಮಾನ್ಯ ಗೃಹ ಸಚಿವರು ಕೆಲವು ಮಾತುಗಳನ್ನು ಹೇಳಿದ್ದಾರೆ. ವಿರೋಧ ಪಕ್ಷದ ಸಂಖ್ಯೆ ಕಡಿಮೆ ಆಯಿತು. ಅವರಲ್ಲಿ ಇನ್ನು ಕೆಲವರು ಮಂತ್ರಿ ಸ್ಥಾನಗಳಿಗೆ ಪ್ರಯತ್ನ ಮಾಡಿದರು ಅದು ಸಿಕ್ಕದೇ ಹೋದದ್ದರಿಂದ ಅಲ್ಲಿಯೇ

ಉಳಿಯಬೇಕಾಯಿತು ಎಂದು ಹೇಳಿದರು. ಪೋಲೀಸ್ ಮಂತ್ರಿಗಳಾದ ಅವರು ಎಷ್ಟು ಮಟ್ಟಿಗೆ ಸತ್ಯವನ್ನು ಹೇಳಬಲ್ಲರು ? ಆಗಲೇ ಹೇಳಿದೆ ಮುಖ್ಯ ಮಂತ್ರಿಗಳು ಈ ಬಗ್ಗೆ ಒಂದು ಹೇಳಿಕೆ ಕೊಡಲೆಂದು. ಮಂತ್ರಿತನವನ್ನು ಕೊಡಿಸಿ ಎಂದು ನಾನಾಗಲಿ ಅಥವಾ ನಮ್ಮ ಕಡೆಯವರು ಯಾರಾದರೂ ಆಗಲಿ ಹೋಗಿ ಮಂತ್ರಿತನವನ್ನು ಕೊಡಿ ಎಂದು ಕೇಳಿದರೇ ಎಂಬುದನ್ನು ದಯವಿಟ್ಟು ಅವರು ಹೇಳಬೇಕು.

7-00 P.M.

ಶ್ರೀ ಎಸ್. ನಿಜಲಿಂಗಪ್ಪ.—ನಿಮ್ಮ ಪಕ್ಷದವರು ಯಾರೂ ಆ ರೀತಿ ಕೇಳಿಕೊಂಡು ಬರಲಿಲ್ಲ ಅವರಷ್ಟಕ್ಕೆ ಅವರೇ ಬಂದಿದ್ದಾರೆ.

ಶ್ರೀ ಎಸ್. ಶಿವಪ್ಪ.—I am very happy to here it. ದೇಶದಲ್ಲಿ ಪ್ರಜಾಪ್ರಭುತ್ವ ಬೆಳೆಯಬೇಕು, ವಿರೋಧ ಪಕ್ಷ ಬೆಳೆಯಬೇಕು ಎಂದು ಅವರೇ ಹೇಳಿದ್ದಾರೆ.

ಸಭಾಪತಿಯವರೇ, ಅದು ಏನೇ ಇರಲಿ ಸತ್ಯವನ್ನು ಮುಖ್ಯ ಮಂತ್ರಿಗಳು ಹೇಳಿದ್ದಾರೆ ಅದಕ್ಕಾಗಿ ಅವರಿಗೆ ವಂದನೆಗಳನ್ನು ಅರ್ಪಿಸುತ್ತೇನೆ. ದೇಶದಲ್ಲಿ ಪ್ರಜಾಪ್ರಭುತ್ವ ಚೆನ್ನಾಗಿ ಬೆಳೆಯಬೇಕು.

Sri RAMAKRISHNA HEGDE.—Sir, the former P. S. P. had two groups; when the question of merger with the Congress came up, one group wanted to merge with the Congress without any condition and the other group wanted to merge with the Congress with conditions; the latter negotiated with the Congress and failed.

ಶ್ರೀ ಎಸ್. ಶಿವಪ್ಪ.—ಈ ದೇಶದಲ್ಲಿ ನಾನಾಗಲಿ ನನ್ನ ಅನುಯಾಯಿಗಳಾಗಲಿ ವಿರೋಧ ಪಕ್ಷವನ್ನು ಪ್ರಜಾಪ್ರಭುತ್ವದಲ್ಲಿ ಬೆಳೆಸಬೇಕು ಎಂದು ಹೇಳುತ್ತಾ ಇದ್ದಾರೆ, ಆ ವ್ಯತ್ತಿಯನ್ನು ಆಚರಣೆ ಮಾಡುತ್ತಾ ಇದ್ದಾರೆ. ಇವತ್ತಿನ ದಿವಸ ಕಾಂಗ್ರೆಸ್ಸಿಗೆ ಸೇರುವುದಕ್ಕೆ ನನಗೆ ಆಕಾಂಕ್ಷೆ ಇದ್ದಿದ್ದ ಪಕ್ಷದಲ್ಲಿ, ನನಗೆ ಇವತ್ತು ಇಲ್ಲಿ ಸಿಕ್ಕಿರತಕ್ಕ ಒಂದು ಮರ್ಯಾದೆ ಅಥವಾ ಹೆಚ್ಚಿನ ಸ್ಥಾನ ಅಥವಾ ನಾನು ಇಲ್ಲಿ ಅಲಂಕರಿಸಿರುವ ಸ್ಥಾನಬಲದಿಂದ ಸರ್ಕಾರದಲ್ಲಿ ನನಗೆ ಒಂದು ಸ್ಥಾನ ಸಿಕ್ಕುತ್ತಾ ಇತ್ತು ಎಂದು ನಾನು ಹೇಳುತ್ತೇನೆ. ಸಭಾಪತಿಯವರೇ, ನನಗೆ ಅತ್ತ ಕಡೆ ಅನೇಕ ಜನ ಮಿತ್ರರು ಬಂದು ಬಲಾತ್ಕಾರ ಮಾಡಿದ್ದಾರೆ, ವಿರೋಧ ಪಕ್ಷ ಏಕೆಬೇಕು ಬಿಟ್ಟುಬಿಡಿ ಎಂದು ಹೇಳಿದ್ದಾರೆ. ಪ್ರಜಾಪ್ರಭುತ್ವ ಎಳೆಯ ವಯಸ್ಸಿನಲ್ಲಿರತಕ್ಕ ಈ ದೇಶದಲ್ಲಿ ನಾವು ರಾಜಕೀಯದಲ್ಲಿ ಹೆತ್ತ ತಾಯಿಗೆ ಎರಡು ಬಗೆಯಬಾರದು ಎಂಬ ಒಂದೇ ಒಂದು ನಿಲುವನ್ನು ಇಟ್ಟುಕೊಂಡು ವಿರೋಧ ಪಕ್ಷದವರು ಕೆಲಸ ಮಾಡಿಕೊಂಡು ಬಂದಿದ್ದೇವೆ, ಆ ಒಂದು ಪವಿತ್ರವಾದ ಕೆಲಸವನ್ನು ಮಾಡಬೇಕಾಗಿದೆ. ಅದನ್ನು ಮಾಡದೇ ಯಾವ ಜನತೆ ನಮಗೆ ಓಟು ಕೊಟ್ಟು ಕಳುಹಿಸಿದ್ದಾರೋ ಅವರನ್ನು ಮರೆತು, ಅವರನ್ನು ಕಾಲಿನಿಂದ ಒದ್ದು ಇವತ್ತಿನ ದಿವಸ ಈ ಹಾಲ್‌ನಲ್ಲಿ ಕ್ರಾಸ್ ಮಾಡಿ ತಮ್ಮ ಕಡೆಗೆ ಹೋಗಿ ಕುಳಿತುಕೊಂಡರೆ ನನಗಿಂತ ಅಧಮ ಈ ರಾಜ್ಯದಲ್ಲಿ ಬೇರೊಬ್ಬ ಇಲ್ಲ ಎಂದು ತಿಳಿದುಕೊಂಡಿದ್ದೇನೆ. ಆ ಒಂದು ನಿಲುವನ್ನು ಇಟ್ಟುಕೊಂಡು ಆವತ್ತಿನ ದಿವಸ ನಿರಾಕರಿಸಬೇಕಾಯಿತು ಎಂಬುದು ನನ್ನ ಮಾನ್ಯ ಸದಸ್ಯರಿಗನೇಕರಿಗೆ ಗೊತ್ತಿದೆ. ಪ್ರಜಾಪ್ರಭುತ್ವಕ್ಕೆ ಈ ದೇಶದಲ್ಲಿ ಅಭಿನಂದನೆಯನ್ನು ಕೊಡಬೇಕಾಗಿದೆ ಅದನ್ನು ಬಿಟ್ಟು ಅವರು ಇವತ್ತಿನ ದಿವಸ ಹೇಳುತ್ತಾ ಇರುವುದನ್ನು ನೋಡಿದರೆ ಬಹಳ ವಿಷಾದವಾಗುತ್ತದೆ. ನಾನು ವಿರೋಧ ಪಕ್ಷದ ನಾಯಕನಾದ ಮೇಲೆ ಕೆಲವು ಸೌಲತ್ತುಗಳನ್ನು ಸರ್ಕಾರದ ವತಿಯಿಂದ ಪೊಂದಿದ್ದೇನೆ ಎಂದು ಹೇಳಿದರು, ಅದು ಹೇಗೆ ಬಂತೋ ನನಗೇ ಗೊತ್ತಿಲ್ಲ. ಅನೇಕ ಜನ ಬಂದು ಸ್ವಾಮಿ ನಿಮ್ಮ ಹತ್ತಿರ ಬಂದರೆ ಕೆಲಸ ಕೆಟ್ಟುಹೋಗುತ್ತದೆ ಎಂದು ಹೇಳಿದ್ದಾರೆ. ಆದ್ದರಿಂದ ಜನ ನನ್ನ ಹತ್ತಿರ ಬರುವುದಿಲ್ಲ. ಈ ಶಾಸನ ಸಭೆಯಲ್ಲಿ ಯಾವ ಸದಸ್ಯನೇ ಆಗಿರಲಿ ಅವನ ಆಸ್ತಿಪಾಸ್ತಿಗಳನ್ನು ಪರಿಶೀಲನೆ ಮಾಡತಕ್ಕ ಒಂದು ಸಮಿತಿ ಆಗಲೇ ಬೇಕು. ಈ ದೇಶದಲ್ಲಿ ಅವನು ಸದಸ್ಯನಾಗುವುದಕ್ಕೆ ಮುಂಚೆ ಅವನ ಅಂತಸ್ತು ಏನಿತ್ತು, ಸದಸ್ಯನಾದ ಮೇಲೆ ಇವತ್ತಿನ ದಿವಸ ಏನಿದೆ, ಹಣಕಾಸಿನ ವಿಷಯದಲ್ಲಾಗಲೀ ಆಸ್ತಿ ವಿಚಾರದಲ್ಲಾಗಲಿ ಅದನ್ನು ಪರಿಶೀಲನೆ ಮಾಡತಕ್ಕ ಒಂದು ಸಮಿತಿಯನ್ನು ನಾನು ಇವತ್ತಿನ ದಿವಸ ಸ್ವಾಗತ ಮಾಡುತ್ತೇನೆ. ಎಲ್ಲ ಸದಸ್ಯರ ಆಸ್ತಿಪಾಸ್ತಿಗಳನ್ನು, ಎಲ್ಲ ಸದಸ್ಯರ ಅಂತಸ್ತನ್ನು ಕೂಡ ಪರಿಶೀಲನೆ ಮಾಡತಕ್ಕ ಒಂದು ನಿಷ್ಪಕ್ಷಪಾತವಾದ ಮಂಡಲಿ ಈ ದೇಶದಲ್ಲಿ ಆಗಬೇಕೆಂದು ಹೇಳುತ್ತೇನೆ.

(ಶ್ರೀ ಎಸ್. ಶಿವಪ್ಪ)

ಕಾಗ್ರೆಸ್ ಸರ್ಕಾರ ಆಗಿರಲಿ ಯಾವ ಸದಸ್ಯನೇ ಆಗಿರಲಿ ಅವಿಶ್ವಾಸ ನಿರ್ಣಯ ಮಂಡನೆ ಮಾಡಿರತಕ್ಕ ಇಂತಹ ಸಂದರ್ಭಗಳಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು, ಅವರ ಪಕ್ಷದ ಮಂತ್ರಿ ಮಂಡಲದ ಅನ್ಯಾಯ ಪರಂಪರೆಗಳಿಗೆ ಅವರು ಈ ದೇಶದ ಜನತೆಗೆ ಜವಾಬ್ದಾರರಾಗಿರಬೇಕು ಇಲ್ಲದೆ ಇದ್ದರೆ ಜನತೆಯ ವಿಶ್ವಾಸವನ್ನು ಕಳೆದುಕೊಳ್ಳಬೇಕಾಗುತ್ತದೆ, ಅಂತಹ ದಾರಿಗೆ ಹೋಗಬಾರದು ಎಂಬ ಎಚ್ಚರಿಕೆಯನ್ನು ಕೊಡುವುದಕ್ಕೆ ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿ, ಆಪಾದನೆಗಳನ್ನು ಇಟ್ಟಿದ್ದೇವೆ. ಈ ಎಲ್ಲ ವಿಚಾರಗಳೂ ಕೂಡ ನಿಜ. ಎಷ್ಟು ತೂಕ ಇರಬೇಕೆನ್ನುವುದು ಅವರು ಹೇಳಿದಷ್ಟು ತೂಕ ಇಲ್ಲದೇ ಇರಬಹುದು. ಇವತ್ತು ಈ ಆಪಾದನೆಗಳಿಗೆ ಎಷ್ಟು ತೂಕ ಬೇಕೋ ಅದು ನನಗೆ ಗೊತ್ತಿಲ್ಲ. ಅದನ್ನು ಅವರು ಹೇಳಿದರೆ ಅಷ್ಟು ತೂಕದ ಸ್ಟ್ಯಾಂಪನ್ನು ಅಂಟಿಸಿ ಮುಂದೆ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡುತ್ತೇನೆ. ಆದ್ದರಿಂದ ಸಭಾಪತಿಯವರೇ, ಈ ಅವಿಶ್ವಾಸ ನಿರ್ಣಯಕ್ಕೆ ಈ ಸಭೆಯ ಎಲ್ಲ ಸದಸ್ಯರೂ ಕೂಡ ಮನ್ನಣೆ ಕೊಟ್ಟು, ಮತವನ್ನು ನೀಡಿ ಈ ರಾಜ್ಯಕ್ಕೆ ಒಳ್ಳೆಯ ಸರ್ಕಾರ ರಚನೆಯಾಗತಕ್ಕ ಅವಕಾಶವನ್ನು ಕಲ್ಪನೆ ಮಾಡಬೇಕೆಂದು ಈ ಸಭೆಗೆ ಕೇಳಿಕೊಳ್ಳುತ್ತೇನೆ.

Mr. SPEAKER.—Now, I put the motion to the vote of the House. The question is:

"That this House has no confidence in the Council of Minister"

The motion was negatived

Sri N. HUCHMASTI GOWDA.—I press for a division.

Mr. SPEAKER.—All right; the bell will be ring.

(*The bell rang for two minutes*)

Mr. SPEAKER.—I will again put it to the vote of the House. The question is:

"That this House has no confidence in the Council of Ministers."

The House divided.

Mr. SPEAKER.—The result of the division is Ayes 29, Noes 115, and 3 neutral,

The motion was negativet.

Mr. SPEAKER.—The House will now stand adjourned to reassemble tomorrow ot 1 P. M.

The House adjourned Fifteen minutes post seven of the Clock to meet again at One of the Clock on Wedesday, the 22nd Jaanuary 1965.

THE
MYSORE LEGISLATIVE ASSEMBLY DEBATES

KARNATAKA LEGISLATURE LIBRARY
RESEARCH SECTION
ಕರ್ನಾಟಕ ವಿಧಾನಮಂಡಲದ ಗ್ರಂಥಾಲಯ

OFFICIAL REPORT

OF THE

PROCEEDINGS OF THE EIGHTH DAY

OF THE

FIFTH SESSION

FRIDAY, 22ND JANUARY 1965

Vol. V—No. 8

BANGALORE:
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1965

Price: 25 Paise

CONTENTS

	PAGES
Starred Questions and Answers ...	447—460
Questions for answers on the day (but not taken up) ...	460—461
Ruling of the Speaker *re* : the use of word " ಧಂಡ ಸರ್ಕಾರ "	461—463
Papers laid on the Table—	
Notification No. RD 41 EST 64, dated 12th January 1965—issued under the Mysore Stamp Act, 1957.	463
Business of the House ...	463—464
Motion of thanks to the Governor's Address—(Debate not concluded) ...	464—506